ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 23 ಜೂನ್ 2-8, 1997 ಬೆಲೆ ರೂ. 2.00

ಪೆಟ್ರೋಲಿಯಂ ಪದಾರ್ಥಗಳ ಬೆಲೆ ಪ್ರಶ್ನೆಯೀಗ ಬಡವ-ಬಲ್ಲಿದರ ನಡವಿನ ಸಂಘರ್ಷದ ಪ್ರಶ್ನೆ

ತನ್ನ ಅಧಿಕಾರಾವಧಿಯಲ್ಲಿ ಎರಡನೇ ಬಾರಿಗೆ ಪೆಟ್ರೋಲಿಯಂ ಪದಾರ್ಥಗಳ ಬೆಲೆಯೇರಿಸುವ ಬಗ್ಗೆ ಸಂಯುಕ್ತ ರಂಗ ಸರಕಾರದ ಹಣಕಾಸು ಮಂತ್ರಿಗಳು ಪದೇ ಪದೇ ಹೇಳುತ್ತಿದ್ದರೂ, ದೊಡ್ಡ ಬಂಡವಾಳಶಾಹಿ ಒಡೆತನದ ಪತ್ರಿಕೆಗಳು ಅದರಲ್ಲಿ ಅವರಿಗೆ ಭಾರೀ ಬೆಂಬಲ ನೀಡುತ್ತಿದ್ದರೂ, ಎಡಪಕ್ಷಗಳ ತೀವ್ರ ವಿರೋಧದಿಂದಾಗಿ ಅವರ ಇಚ್ಛೆ ನೆರವೇರಲು ದೊಡ್ಡ ಅಡ್ಡಿ ಬರುತ್ತಿದೆ. ಬೆಲೆ ಏರಿಸದೆ ಬೇರೆ ದಾರಿಯೇ ಇಲ್ಲ ಎಂದು ಈ ಹಾರ್ವರ್ಡ್ ಯೂನಿವರ್ಸಿಟಿಯ ಛಾಪಿನ ವ್ಯಕ್ತಿ ತನ್ನ ನುಣುಪು ಮಾತುಗಳಲ್ಲಿ ಎಲ್ಲರನ್ನೂ ನಂಬಿಸಲು ಶತಪ್ರಯತ್ನ ನಡೆಸುತ್ತಿದ್ದಾಗಲೇ ಮೇ 25 ರಂದು ನಡೆದ ಸಂಯುಕ್ತರಂಗದ ಚಾಲನಾ ಸಮಿತಿ ಸಭೆಯಲ್ಲಿ ಅವರ ಈ ವಾದ ಕೇವಲ ಒಂದು ಕಂತೆಪುರಾಣ ಎಂದು ಬೆಲೆಯೇರಿಕೆಯನ್ನು ಆರಂಭದಿಂದಲೂ ಬಲವಾಗಿ ವಿರೋಧಿಸುತ್ತಾ ಬಂದಿರುವ ಸಿಪಿಐ(ಎಂ) ಮುಖಂಡರು ತೋರಿಸಿಕೊಟ್ಟರು. ಬೆಲೆಯೇರಿಸದೆ ತೈಲ ನಿಧಿಯ ಕೊರತೆಯನ್ನು ತುಂಬಿಸಲು ಒಂದು ಸುಸಂಗತ ಪರ್ಯಾಯವನ್ನು ಅವರು ಅಂಕಿ-ಅಂಶಗಳ ಸಹಿತ ಸಭೆಯ ಮುಂದಿಟ್ಟರು. ಇದು ಸರಕಾರದ ವಾದದ ಪೊಳ್ಳುತನವನ್ನು ಬಯಲಿಗೆಳೆದುದು ಮಾತ್ರವಲ್ಲದೆ ಅದರ ಹಿಂದಿರುವ ವರ್ಗ ಹಿತಾಸಕ್ತಿಗಳ ಸಂಘರ್ಷವನ್ನು ಕೂಡಾ ಎತ್ತಿ ತೋರಿದೆ. ಎಡಪಕ್ಷಗಳ ಪರಿಣಾಮಕಾರಿ ತರ್ಕದಿಂದಾಗಿ ಸರಕಾರ ಇನ್ನಷ್ಟು ಸಮಯಾವಕಾಶ ಕೇಳಬೇಕಾಗಿ ಬಂತು. 15 ದಿನಗಳಲ್ಲೇ ಸರಕಾರ ಪರಿಸ್ಥಿತಿಯನ್ನು ಎದುರಿಸುವ ವಿವಿಧ ವಿಧಾನಗಳನ್ನು ಚಾಲನಾ ಸಮಿತಿಯ ಸಭೆಯ ಮುಂದಿಟ್ಟು ಅವುಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕೆಂದು ಮೇ 25 ರ ಸಂಯುಕ್ತ ರಂಗ ಚಾಲನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಈ ನಡುವೆ ಹಣಕಾಸು ಮಂತ್ರಿಗಳು ಒಂದು ಮಾತನಾಡುತ್ತಿದ್ದರೆ, ತೈಲಮಂತ್ರಿಗಳು ಬೇರೆಯೇ ಮಾತಾಡುತ್ತಿದ್ದಾರೆ. ಅತ್ತ ದೊಡ್ಡ ಬಂಡವಾಳಶಾಹಿ ಪತ್ರಿಕೆಗಳು, 20% ರಷ್ಟು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಸುವುದಕ್ಕೆ ಅಡ್ಡಿಯುಂಟುಮಾಡಿ ಸಿಪಿಐ(ಎಂ) ಮಹಾಪಾಪ ಮಾಡುತ್ತಿದೆ ಎಂಬಂತೆ ಕೂಗು ಹಾಕುತ್ತಿವೆ. ನಿಜ, ಅವರ ಹಿತಾಸಕ್ತಿಗಳಿಗಿಂತ ಜನ ಸಾಮಾನ್ಯರ ಹಿತಾಸಕ್ತಿಗಳಿಗೆ ಪಕ್ಷಪಾತ ತೋರುವುದು ಅವರ ಮಟ್ಟಿಗೆ ಪಾಪವಾಗಿ ಕಂಡರೆ ಆಶ್ಚರ್ಯವೇನು?

ಏಕೆ ಈ ವಿರೋಧ?

ಸಿಪಿಐ(ಎಂ) ಈ ಬೆಲೆಯೇರಿಕೆಯನ್ನು ಏಕೆ ಇಷ್ಟೊಂದು ಬಲವಾಗಿ ವಿರೋಧಿಸುತ್ತಿದೆ? ಏಕೆಂದರೆ ಈ ಬೆಲೆಯೇರಿಕೆ ಕೇವಲ ಪೆಟ್ರೋಲ್, ಸೀಮೆಎಣ್ಣೆ, ಅಡಿಗೆ ಅನಿಲ ಇತ್ಯಾದಿಗಳಿಗೇ ಸೀಮಿತವಾಗಿರುವುದಿಲ್ಲ. ಇಡೀ ಆರ್ಥಿಕದ ಮೇಲೆ ಇದು ವಿನಾಶಕಾರಿ ಪರಿಣಾಮ ಬೀರುತ್ತದೆ. ಹಣದುಬ್ಬರ ತರುತ್ತದೆ. ಇದು ಅತ್ಯಂತ ಗಹನವಾಗಿ ತಟ್ಟುವುದು ದುಡಿಯುವ ಜನ ಸಮೂಹವನ್ನು. ಎರಡನೆಯದಾಗಿ ಬೆಲೆಯೇರಿಸದೆ ಬೇರೆ ದಾರಿಯೇ ಇಲ್ಲ ಎಂಬುದು ಕೇವಲ ಮಿಥ್ಯ. 'ಐಕ್ಯರಂಗ' ದ ಓದುಗರು ಈ ಬಗ್ಗೆ ಹಿಂದಿನ ಎರಡು ಸಂಚಿಕೆಗಳಲ್ಲಿ ಓದಿದ್ದಾರೆ.(ಇನ್ನಷ್ಟು ವಿವರಗಳನ್ನು ಪುಟ 5 ರಲ್ಲಿ ನೋಡಬಹುದು). ಇಲ್ಲಿ, ಸಿಪಿಐ(ಎಂ) ಸಂಯುಕ್ತರಂಗ ಚಾಲನಾ ಸಮಿತಿಯ ಮುಂದಿಟ್ಟ ತಥ್ಯಗಳನ್ನು, ಅಂಕಿ-ಅಂಶಗಳನ್ನು ಪರ್ಯಾಯಗಳನ್ನು ಸಂಕ್ಷಿಪ್ತವಾಗಿ ಹೀಗೆ ಪಟ್ಟಿ ಮಾಡಬಹುದು.

- "ತೈಲನಿಧಿ" ಯನ್ನು 1975 ರಲ್ಲಿ ರಚಿಸಿದ್ದು ಪೆಟ್ರೋಲಿಯಂ ಉತ್ಪನ್ನಗಳ ಆಮದಿಗೆ ಹಣಕಾಸು ಒದಗಿಸಲೆಂದು. ಆದರೆ ಅದನ್ನು ಬಳಸಿದ್ದು ಹಣಕಾಸು ಇಲಾಖೆ ಬಜೆಟ್ ಕೊರತೆ ಕಮ್ಮಿ ಮಾಡಲು ಹಾಗೂ ಕೆಲವು ಉತ್ಪನ್ನಗಳಿಗೆ ಸಬ್ಸಿಡಿ ಒದಗಿಸಲು!
- ಮಾರ್ಚ್ 31, 1989 ರಲ್ಲಿ 'ತೈಲನಿಧಿ'ಯಲ್ಲಿ 8900 ಕೋಟಿ ರೂ.ಗಳ ಮಿಗುತಾಯವಿತ್ತು. ಆದರೆ ಮಾರ್ಚ್ 31, 1993 ರ ವೇಳೆಗೆ ಅದು 4429 ಕೋಟಿ ರೂಪಾಯಿಗಿಳಿಯಿತು, ಏಕೆ? ಸರಕಾರದ ಇಂತಹ ದುರುಪಯೋಗದಿಂದ. ಇದನ್ನೇ ಸರಕಾರ ಪ್ರಸ್ತುತ ಬ್ಯಾಂಕ್ ದರದಲ್ಲಿ ಹಿಂದಿರುಗಿಸಿದರೆ 'ತೈಲನಿಧಿ' ಕೊರತೆ ಮಾಯವಾಗಿ ಬಿಡುತ್ತದೆ.
- 1997-98 ರ ಬಜೆಟ್‌ನಲ್ಲಿ ತೈಲ ವಲಯದಿಂದ ಬರುವ ಸುಂಕಗಳ ನಿರೀಕ್ಷೆ ಈಗಿರುವ ತೈಲನಿಧಿಯ ಕೊರತೆಗಿಂತ 4000 ಕೋಟಿಗಳಷ್ಟು ಹೆಚ್ಚು. ಸರಕಾರ ಜನಸಾಮಾನ್ಯರ ಮೇಲೆ ಈ ಹೊರೆ ಹಾಕುವಬದಲು ಅದೇ ಬಜೆಟ್ಟಿನಲ್ಲಿ ಸಿರಿವಂತರಿಗೆ ನೀಡಿದ 20,000 ಕೋಟಿ ರೂಗಳ ರಿಯಾಯಿತಿಗಳನ್ನು ನೀಡಿರದಿದ್ದರೆ 'ತೈಲನಿಧಿ' ಕೊರತೆಯುಂಟಾಗುತ್ತಿರಲಿಲ್ಲ. ಬದಲಿಗೆ ತೈಲ ಬೆಲೆಗಳನ್ನು ಇಳಿಬಹುದಾಗಿತ್ತು!
- ಅಂತರ್ರಾಷ್ಟ್ರೀಯ ಬೆಲೆಗಳಿಗಿಂತ ಬಹಳ ಕಮ್ಮಿಯಿರುವ, ಪ್ರಧಾನವಲ್ಲದ, ಆದ್ಯತೆಯಿರದ ಉದ್ದಿಮೆಗಳು ಬಳಸುವ ನೈಸರ್ಗಿಕ ಅನಿಲದ ಬೆಲೆಯನ್ನು ಸೂಕ್ತವಾಗಿ ಏರಿಸಿ ಕನಿಷ್ಠ 5000 ಕೋಟಿ ರೂ. ಹೆಚ್ಚಿನ ಆದಾಯ ಗಳಿಸುವ ಸಾಧ್ಯತೆಯಿದೆ.
- ದೇಶೀ ತೈಲ ಉದ್ದಿಮೆಯ ಅಭಿವೃದ್ಧಿಯನ್ನು ಉದಾರೀಕರಣದ ಹೆಸರಿನಲ್ಲಿ ನಿರ್ಲಕ್ಷಿಸದೆ ಅದಕ್ಕೆಂದು ಸಂಗ್ರಹಿಸಿರುವ 28900 ಕೋಟಿ ರೂ. ಅಧಿಕ ತೆರಿಗೆಯನ್ನು ಅದೇ ಉದ್ದಿಮೆಯಲ್ಲಿ ಬಳಸಿದರೆ ತೈಲ ಆಮದು ವೆಚ್ಚ ಬಹಳ ಕಮ್ಮಿಯಾಗಿ ಅದರಿಂದಲೂ ತೈಲನಿಧಿ ಕೊರತೆಯನ್ನು ಕಮ್ಮಿ ಮಾಡಲು ಸಾಧ್ಯವಿತ್ತು.


ಇದು ಅಂಕಿ-ಅಂಶಗಳ ಪ್ರಶ್ನೆಯಷ್ಟೇ ಅಲ್ಲ

ಕೇವಲ ಸರಕಾರದ ಅಂಕಿ-ಅಂಶಗಳನ್ನೇ ನಂಬಿದ್ದ ಚಾಲನಾ ಸಮಿತಿಯ ಸದಸ್ಯರಲ್ಲಿ ಹಲವರ ಕಣ್ಣು ತೆರೆಸಿದ ಅಂಕಿ-ಅಂಶಗಳಿವು. ಆದರೆ ಇದು ಕೇವಲ ಅಂಕಿ-ಅಂಶಗಳ ಪ್ರಶ್ನೆಯಲ್ಲ. ಇದನ್ನು ಕೇವಲ 'ಹಣಕಾಸು ನಿರ್ವಹಣೆ'ಯ ಪ್ರಶ್ನೆಯಾಗಿ ಕಾಣಲು ಸಾಧ್ಯವಿಲ್ಲ. ಇದು ರಾಜಕೀಯ ಪ್ರಶ್ನೆ. ಸರಕಾರ ಕೇವಲ ಒಬ್ಬ ಚಾರ್ಟರ್ಡ್ ಅಂಕೌಂಟೆಂಟ್‌ನಂತೆ ವರ್ತಿಸುವುದು ಸಲ್ಲ - ಇದು ಸಿಪಿಐ(ಎಂ) ಚಾಲನಾ ಸಮಿತಿಯ ಸಭೆಯಲ್ಲಿ ಮುಂದಿಟ್ಟ, ಜನರ ಮುಂದಿಟ್ಟಿರುವ ಪರ್ಯಾಯ ದಾರಿಗಳ ಸಾರಾಂಶ.

ವಾಸ್ತವವಾಗಿ ಪೆಟ್ರೋಲಿಯಂ ಬೆಲೆಗಳ ಹಿಂದಿರುವ ಪ್ರಶ್ನೆ ಕೇವಲ ಈ ವಲಯಕ್ಕೆ ಸಂಬಂಧಪಟ್ಟದ್ದಲ್ಲ, ಇಡೀ "ಆರ್ಥಿಕ ಸುಧಾರಣೆ' ಧೋರಣೆಗೇ ಸಂಬಂಧಪಟ್ಟ ಪ್ರಶ್ನೆ. ಇದೀಗ ವರ್ಗಹಿತಗಳ ಸಂಘರ್ಷದ ಪ್ರಶ್ನೆ. ಆಳುವ ವರ್ಗಗಳ

ಪುಟ 2 ನೋಡಿ

ಇದು ಪೆಟ್ರೋಲಿಯಂ ಪದಾರ್ಥಗಳ ಬೆಲೆಯೇರಿಕೆಗೆ ಸಿಪಿಐ(ಎಂ) ಮತ್ತಿತರ ಎಡಪಕ್ಷಗಳ ಭಾರಿ ವಿರೋಧವನ್ನು 'ಹಿಂದೂ' ದೈನಿಕದ ವ್ಯಂಗ್ಯ ಚಿತ್ರಕಾರರು ಕಂಡ ರೀತಿ. ಸಂಯುಕ್ತ ರಂಗ ಸರಕಾರದ ನಿರ್ವಹಣೆಗೆ ಎಡಪಕ್ಷಗಳು ಅಡ್ಡಿಪಡಿಸುತ್ತಿವೆ, ಕಾಲ್ತೊಡರುಗಳಾಗಿವೆ ಎಂಬ ಅಪಪ್ರಚಾರದ ಈ ಪ್ರಶ್ನೆಯ ಬಗ್ಗೆ ಮಾತ್ರವಲ್ಲ ಜನಸಾಮಾನ್ಯರನ್ನು ಬಾಧಿಸುವ ಸುಮಾರಾಗಿ ಎಲ್ಲಾ ಪ್ರಶ್ನೆಗಳ ಬಗ್ಗೆಯೂ ಇದೆ. ಇದಕ್ಕೆ ಸಿಪಿಐ(ಎಂ) ಮುಖಂಡರ ನೇರ ಉತ್ತರ "ದೇಶದ ಸಾರ್ವಭೌಮತೆಯನ್ನು ರಕ್ಷಿಸುವ, ದುಡಿಯುವ ಜನಗಳ ಹಿತಾಸಕ್ತಿಗಳನ್ನು ರಕ್ಷಿಸುವ ಕೆಲಸ ಇಂತಹವರಿಗೆ 'ಅಡ್ಡಿ ಪಡಿಸುವ' ಕೆಲಸವಾಗಿ ಕಂಡರೆ ಹಾಗೆಯೇ ಕಾಣಲಿ ಬಿಡಿ. ದೇಶದ ಜನಗಳ ಹಿತಾಸಕ್ತಿಗಳ ಬಗ್ಗೆ ಯಾರೊಂದಿಗೂ ಚೌಕಾಸಿ ಸಾಧ್ಯವಿಲ್ಲ"



ಜುಲೈ ೧೫ ರಿಂದ ೩೧ ರ ವರೆಗೆ ರಾಜ್ಯಾದ್ಯಂತ ಪ್ರತಿಭಟನಾ ಜಾಥಾಗಳು

ಜುಲೈ ೨೫: ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನಾ ರ‍್ಯಾಲಿ

ಸಂಯುಕ್ತರಂಗ ತನ್ನ 'ಸಮಾನ ಕನಿಷ್ಟ ಕಾರ್ಯಕ್ರಮ'ದಲ್ಲಿ ನೀಡಿದ ವಚನಗಳನ್ನು ಈಡೇರಿಸುವಂತೆ ಒತ್ತಾಯಿಸಲು ಹಾಗೂ ದುಡಿಯುವ ಜನಗಳ ಮೇಲೆ, ದೇಶದ ಸ್ವಾವಲಂಬನೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಕ್ರಮಗಳನ್ನು ವಿರೋಧಿಸಲು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದ ೧೫ ದಿನಗಳ ಪ್ರಚಾರಾಂದೋಲನದ ಭಾಗವಾಗಿ ಕರ್ನಾಟಕದಲ್ಲಿ ಜುಲೈ ೧೫ ರಿಂದ ೩೧ ರ ವರೆಗೆ ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿ ಜಾಥಾಗಳನ್ನು ನಡೆಸಲು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ನಿರ್ಧರಿಸಿದೆ. ಜುಲೈ ೨೫ ರಂದು ಬೆಂಗಳೂರಿನಲ್ಲಿ ಒಂದು ಕೇಂದ್ರ ರ‍್ಯಾಲಿ ನಡೆಸಲೂ ನಿರ್ಧರಿಸಲಾಯಿತು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಈ ರ‍್ಯಾಲಿಯಲ್ಲಿ ಭಾಗವಹಿಸುತ್ತಾರೆ.

ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ೧೯೯೭ ರ ಮೇ ೨೩ ರಿಂದ ೨೫ ವರೆಗೆ ಜರುಗಿದ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಸಭೆಯು ರಾಜ್ಯದ ರಾಜಕೀಯ ಪರಿಸ್ಥಿತಿಯ ವಿಮರ್ಶೆ ನಡೆಸಿತು. ರಾಜ್ಯದಲ್ಲಿ ಜನತಾದಳದಲ್ಲಿ ಒಡಕನ್ನುಂಟು ಮಾಡಬಹುದಾದ ಸಾಧ್ಯತೆಗಳು ಜೀವಂತವಾಗಿವೆ ಎಂಬ ಅಂಶವನ್ನು ಕಡೆಗಣಿಸುವಂತಿಲ್ಲ ಎಂದೂ, ಜನತಾದಳ ಸರಕಾರವು ತನ್ನ ನೀತಿಗಳ ಮೂಲಕ ಜನರ ಬೆಂಬಲವನ್ನು ಗಳಿಸಿಕೊಳ್ಳುವುದರಿಂದ ಮಾತ್ರ ಆತಂಕವನ್ನು ನಿವಾರಿಸಿಕೊಳ್ಳಲು ಸಾಧ್ಯ ಎಂದೂ ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ದುಡಿಯುವ ಜನತೆಯ ಪ್ರತಿಭಟನೆಗಳ ಮೇಲೆ ಪೋಲೀಸ್ ಧಾಳಿ ಮಾಡುವುದು ಹೆಜ್ಜಾಲ, ಹೊನ್ನಾವರ ಹಾಗೂ ಹಿಂದೆ ಹಾನಗಲ್ ಗೋಳಿಬಾರ್ ಪ್ರಕರಣಗಳಲ್ಲಿ ಸ್ಪಷ್ಟವಾಗಿದೆ. ಜನರ ಅಭಿಪ್ರಾಯಕ್ಕೆ, ಅವರ ತೀವ್ರ ಸಂಕಷ್ಟ ಪ್ರತಿಭಟನೆಗಳಿಗೂ ಬೆಲೆ ಕೊಡದ ಕಿವುಡು ನೀತಿ, ಅಧ್ಯಾಪಕರ ಮುಷ್ಕರ, ಹೊಸಪೇಟೆ ಬಳಿ ತುಂಗಭದ್ರಾ ನದಿಯ ಮಾಲಿನ್ಯ ಇತ್ಯಾದಿ ಪ್ರಕರಣಗಳಲ್ಲಿ ದಿನದಿನದ ವ್ಯವಹಾರದಲ್ಲಿ ಪ್ರಕಟವಾಗುತ್ತಿದೆ. ಪೋಲೀಸರ ಮೇಲೆ ಪ್ರಜ್ಞಾಪೂರ್ವಕ ರಾಜಕೀಯ ನಿಯಂತ್ರಣವಿಲ್ಲದೆ ಅವರನ್ನು ಸ್ವೇಚ್ಛೆಯಾಗಿ ಬಿಟ್ಟಿರುವುದರಿಂದ ಲಾಕಪ್ ಸಾವುಗಳು ಹೆಚ್ಚುತ್ತಿವೆ ಎಂದು ರಾಜ್ಯ ಸಮಿತಿ ಟೀಕಿಸಿದೆ.

ಚುನಾವಣಾ ಆಯೋಗದ ಒತ್ತಡದ ಮೇರೆಗೆ ಕಾಂಗ್ರೆಸ್ ಪಕ್ಷದಲ್ಲಿ ಸಾಂಸ್ಥಿಕ ಚುನಾವಣೆಗಳ ನಾಟಕ ನಡೆದಿದ್ದು ಪ್ರಜಾಸತ್ತಾತ್ಮಕ ತತ್ವಗಳೊಂದನ್ನೂ ಪಾಲಿಸದೇ ಏಕವ್ಯಕ್ತಿ ಸರ್ವಾಧಿಕಾರಕ್ಕೆ ಚುನಾವಣೆಯ ಮುದ್ರೆಯನ್ನೊತ್ತುವಂತೆ ನಡೆಯುತ್ತಿರುವ ಪಕ್ರಿಯೆಯು ಜನಗಳ ಗೌರವವನ್ನು ಗಳಿಸುವ ರೀತಿಯಲ್ಲಿಲ್ಲ. ಸಾಂಸ್ಥಿಕ ಚುನಾವಣೆಯಲ್ಲಿ ನಡೆದ ಮೋಸ ಆ ಪಕ್ಷದ ಮುಖಂಡರಿಂದಲೇ ಬಹಿರಂಗವಾಗುತ್ತಿದೆ.

ಬಿಜೆಪಿ ಅಧ್ಯಕ್ಷ ಅಡ್ವಾಣಿಯವರ ರಥಯಾತ್ರೆಗೆ ರಾಜ್ಯದಲ್ಲಿ ಜನಬೆಂಬಲ ಸಾಕಷ್ಟು ಸಿಕ್ಕಿಲ್ಲ ಎಂದೂ ಸಭೆಯು ಅಭಿಪ್ರಾಯ ಪಟ್ಟಿದೆ.

ಕಲ್ಕತ್ತೆಯಲ್ಲಿ ಮುಂದಿನ ಫೆಬ್ರವರಿಯಲ್ಲಿ ನಡೆಯುವ ಸಿಪಿಐ(ಎಂ)ನ ೧೬ನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ಪಕ್ಷದ ರಾಜ್ಯ ಸಮ್ಮೇಳನವು ಈ ವರ್ಷದ ಕೊನೆಯಲ್ಲಿ ಕೋಲಾರ ನಗರದಲ್ಲಿ ನಡೆಯುವುದು. ಅದಕ್ಕೆ ಪೂರಕವಾಗಿ ಆಗಸ್ಟ್-ಸೆಪ್ಟೆಂಬರ್‌ಗಳಲ್ಲಿ ಶಾಖಾ ಸಮ್ಮೇಳನಗಳು, ಅಕ್ಟೋಬರ್, ನವೆಂಬರ್‌ಗಳಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಸಮ್ಮೇಳನಗಳು ನಡೆಯುವವು. ಅದೇ ಸಮಯದಲ್ಲಿ ಕರ್ನಾಟಕ ರಾಜ್ಯದಲ್ಲಿ ಎಡ ಮತ್ತು ಜಾತ್ಯಾತೀತ ಶಕ್ತಿಗಳ ಬಲವನ್ನು ಹೆಚ್ಚಿಸಲು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ.

ಹಾನಗಲ್: ಅರಣ್ಯ ಇಲಾಖೆಯ ಕೆಲಸ ಸ್ಥಗಿತ ಸಾಗುವಳಿ ಭೂಮಿ ಪರಿಶೀಲನೆ ಆರಂಭ



ಹಾನಗಲ್ ತಾಲೂಕಿನ 30 ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ ಸುಮಾರು 5000 ಎಕರೆ ಭೂಮಿಯಲ್ಲಿ ಸಾಗುವಳಿ ಮಾಡಲಾದ ಭೂಮಿ ಎಷ್ಟು, ಸಾಗುವಳಿ ಯೋಗ್ಯವಾದ ಭೂಮಿ ಎಷ್ಟು ಮತ್ತು ಸಹಜವಾದ ಅರಣ್ಯ ಭೂಮಿ ಎಷ್ಟು ಎಂಬುದನ್ನು ಅರಣ್ಯ ಮತ್ತು ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳು ಜಂಟಿಯಾಗಿ ಪರಿಶೀಲಿಸಿ, ಬರುವ ಜೂನ್ 15 ರ ಒಳಗಾಗಿ ವರದಿಸಲ್ಲಿಸಲು ಲೋಕಪ ಯೋಗಿ ಸಚಿವ ಸಿ.ಎಂ.ಉದಾಸಿಯವರು ಆದೇಶ ನೀಡಿದ್ದಾರೆ. ವರದಿ ಕೈ ಸೇರಿದ ಬಳಿಕ ಸ್ವತಃ ಉದಾಸಿಯವರೇ ಕೃಷಿಕೂಲಿಕಾರರ ಸಂಘದ ಮುಖಂಡ ರೊಂದಿಗೆ ಪ್ರತಿಯೊಂದು ಗ್ರಾಮಕ್ಕೆ ಭೇಟಿ ಕೊಟ್ಟು ವರದಿಯ ಯಥಾರ್ಥತೆಯನ್ನು ಪರಿಶೀಲಿಸುವುದೆಂದು, ಆ ಸಮಯದಲ್ಲಿ ಹಾನಗಲ್ ಭೂ ಹೋರಾಟದ ಬಗ್ಗೆ ಸದನದಲ್ಲಿ ಈಗಾಗಲೇ ಸರಕಾರದ ಗಮನ ಸೆಳೆದಿರುವ ಬಾಗೇಪಲ್ಲಿಯ ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿಯವರ ನೆರವು ಪಡೆಯುವುದೆಂದು ತೀರ್ಮಾನಿಸಲಾಗಿದ್ದು ಇದೆಲ್ಲವು ಇತ್ಯರ್ಥ ಆಗುವವರೆಗೆ ಈ ವಿವಾದಾತ್ಮಕ ಭೂಮಿಯಲ್ಲಿ ಅರಣ್ಯ ಇಲಾಖೆಯವರು ಟ್ರಂಚ್ ತೋಡುವ, ಸಸಿ ನೆಡುವ ಇತ್ಯಾದಿ ಎಲ್ಲ ಕೆಲಸವನ್ನು ತಕ್ಷಣದಿಂದ ಸ್ಥಗಿತಗೊಳಿಸುವುದು ಎಂಬ ತೀರ್ಮಾನದೊಂದಿಗೆ ಕಳೆದ ಮೇ12 ರಿಂದ ತಹಶೀಲ್ದಾರರ ಕಛೇರಿ ಎದುರು ನಡೆಯುತ್ತಿದ್ದ ಕೃಷಿಕೂಲಿಕಾರರ ಸಾಮೂಹಿಕ ಸರದಿ ಉಪವಾಸ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳಲಾಯಿತು.

ಮೇ20 ರಂದು ಸತ್ಯಾಗ್ರಹದ ಸ್ಥಳಕ್ಕೆ ಭೇಟಿ ನೀಡಿದ ಉದಾಸಿಯವರು ಚಳುವಳಿಯ ಮುಖಂಡರನ್ನು ಮಾತುಕತೆಗೆ ಕರೆದರು. ಹಾನಗಲ್ ತಹಶೀಲ್ದಾರರ ಕಛೇರಿಯಲ್ಲಿ ನಡೆದ ಮಾತುಕತೆಯ ಸಂದರ್ಭದಲ್ಲಿ ಸವಣೂರು ವಿಭಾಗದ ಉಪವಿಭಾಗಾಧಿಕಾರಿ ಎ.ಎನ್.ಪಾಟೀಲ್ ಹಾಜರಿದ್ದರು. ಸತ್ಯಾಗ್ರಹಿಗಳ ಪರವಾಗಿ ನಿತ್ಯಾನಂದ ಸ್ವಾಮಿ, ಫಕೀರಪ್ಪ ಹೋತನಹಳ್ಳಿ, ಹಕ್ಕಲಗೌಡ ಪಾಟೀಲ್ ಮತ್ತು ವಿ.ಡಿ.ತುಪ್ಪದ್ ಭಾಗವಹಿಸಿದ್ದರು. ತಾಲೂಕಿನ ಸುಮಾರು 500 ಜನ ಕೂಲಿಕಾರರ ಮೇಲೆ ಹಾಕಲಾಗಿರುವ ಕೇಸುಗಳ ವಿಷಯ ಚರ್ಚೆಯಲ್ಲಿ ಪ್ರಸ್ತಾಪಕ್ಕೆ ಬಂದಾಗ ರಾಜ್ಯ ಮಂತ್ರಿ ಮಂಡಲದ ಬರಲಿರುವ ಸಭೆಯಲ್ಲಿ ಈ ಪ್ರಸ್ತಾಪವನ್ನು ಮಂಡಿಸಿ ಕೇಸುಗಳನ್ನು ವಾಪಸ್ ತೆಗೆಯಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಾಗಿ ಉದಾಸಿಯವರು ಭರವಸೆ ನೀಡಿದರು. ಜಂಗಿನಕೊಪ್ಪದ ಲಂಬಾಣಿ ಮಹಿಳೆಯರ ಮೇಲೆ ಗುಂಡು ಹಾರಿಸಲು ಆದೇಶ ನೀಡಿದ ಅರಣ್ಯ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂಬ ಬೇಡಿಕೆಗೆ ಪ್ರತಿಕ್ರಿಯಿಸಿದ ಮಂತ್ರಿಗಳು ಸಂಬಂಧ ಪಟ್ಟ ಆರ್.ಎಫ್.ಓ ಮತ್ತು ಎ.ಎಫ್.ಓರನ್ನು ಈಗಾಗಲೇ ಬೇರೆ ಕಡೆಗೆ ವರ್ಗ ಮಾಡಲಾಗಿದೆ ಎಂದು ಹೇಳಿದರು. ಅರಣ್ಯದಿಂದ ಒಣಗಿದ ಉರುವಲು ಕಟ್ಟಿಗೆಯನ್ನು ಸಂಗ್ರಹಿಸಿ ತರಲು ಕೂಲಿಕಾರರಿಗೆ ಅರಣ್ಯ ಇಲಾಖೆ ಅಡ್ಡಿ ಮಾಡದಂತೆ ಕ್ರಮ ಕೈಗೊಳ್ಳುವ ಭರವಸೆಯನ್ನು ಉದಾಸಿಯವರು ನೀಡಿದರು. ಕಂದಾಯ ಇಲಾಖೆಗೆ ಸೇರಿರುವ ಭೂಮಿಯನ್ನು ವಿತರಣೆ ಮಾಡಲು ಯಾವುದೇ ಅಡ್ಡಿ ಇರಲಾರದೆಂದು, ಅರಣ್ಯ ಇಲಾಖೆಗೆ ಸೇರಿದ ಭೂಮಿಯ ಬಗ್ಗೆ ಅರಣ್ಯ ಮಂತ್ರಿ ಗುರುಪಾದಪ್ಪ ನಾಗಮಾರಪಲ್ಲಿಯವರೊಂದಿಗೆ ಚರ್ಚಿಸಿ, ಅವಶ್ಯಬಿದ್ದರೆ ಕೇಂದ್ರ ಸರಕಾರದಿಂದ ಅನುಮತಿ ಪಡೆದು ಭೂಮಿ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದ ಸಚಿವರು ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲು ಮನವಿ ಮಾಡಿಕೊಂಡರು. ತಾವು ಸಾಗುವಳಿ ಮಾಡುತ್ತಿರುವ ಭೂಮಿಯ ವಿವಾದ ಇತ್ಯರ್ಥ ಆಗುವವರೆಗೆ ಆ ಭೂಮಿಯಲ್ಲಿ ಅರಣ್ಯ ಇಲಾಖೆಯ ಎಲ್ಲ ಕಾಮಗಾರಿಯನ್ನು ನಿಲ್ಲಿಸಬೇಕೆಂಬ ಶರತ್ತನ್ನು ಕೂಲಿಕಾರರ ಮುಖಂಡರು ಮಂತ್ರಿಗಳ ಮುಂದಿಟ್ಟರು. ಇದಕ್ಕೆ ಸಹಮತ ವ್ಯಕ್ತಪಡಿಸಿದ ಉದಾಸಿಯವರು ತಕ್ಷಣ ಅಲ್ಲಿಂದಲೇ ಧಾರವಾಡದಲ್ಲಿರುವ ಜಿಲ್ಲಾ ಅರಣ್ಯ ಅಧಿಕಾರಿಯನ್ನು ಫೋನಿನ ಮೂಲಕ ಸಂಪರ್ಕಿಸಿ, ಹಾನಗಲ್ ತಾಲ್ಲೂಕಿನ ಭೂಮಿಯ ವಿವಾದ ಬಗೆಹರಿಯುವ ವರೆಗೆ ಅಲ್ಲಿ ಟ್ರಂಚ್ ತೋಡುವ, ಸಸಿ ನೆಡುವ ಮೊದಲಾದ ಕೆಲಸಗಳನ್ನು ತಡೆಹಿಡಿಯಲು ಸೂಚಿಸಿದರು. ಜಿಲ್ಲಾ ಅರಣ್ಯಾಧಿಕಾರಿ ಅರಳಿಕಟ್ಟಿಯವರು ತಮ್ಮ ಒಪ್ಪಿಗೆ ನೀಡಿದರು.

ಕಳೆದ ಸೆಪ್ಟಂಬರ್-ಅಕ್ಟೋಬರ್ ತಿಂಗಳುಗಳಲ್ಲಿ ತಾಲೂಕಿನ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದ ಕೂಲಿಕಾರರು ಬಂಧಿಸಲ್ಪಟ್ಟು ಜೈಲಿನಲ್ಲಿದ್ದಾಗ ಸಿ.ಎಂ. ಉದಾಸಿ ಅವರು ಚಳವಳಿಯ ಮುಖಂಡರನ್ನು ಜೈಲಿನಲ್ಲಿಯೇ ಭೇಟಿ ಮಾಡಿ ಸಮಸ್ಯೆಯನ್ನು ಬಗೆಹರಿಸುವ ಭರವಸೆ ನೀಡಿದ್ದರು. ಭರವಸೆ ಕೊಟ್ಟು ತಿಂಗಳುಗಳೇ ಉರುಳಿ ಮತ್ತೆ ಬಿತ್ತಿಗೆಯ ಸಮಯ ಬಂದರೂ ಭರವಸೆ ಈಡೇರದಿದ್ದರಿಂದ ಅನಿವಾರ್ಯವಾಗಿ ಮೇ 12 ರಿಂದ ಸಾಮೂಹಿಕ ಸರದಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಲಾಗಿತ್ತು.

ಸತ್ಯಾಗ್ರಹವನ್ನು ಆರಂಭಿಸುವ ದಿನ ಹಾನಗಲ್‌ನಲ್ಲಿ ಕೂಲಿಕಾರರ ಬೃಹತ್ ಮೆರವಣಿಗೆಯನ್ನು ಸಂಘಟಿಸಲಾಗಿತ್ತು. ಕೃಷಿ ಕೂಲಿಕಾರರ ಸಂಘದ ತಾಲ್ಲೂಕು ಅಧ್ಯಕ್ಷ ಹಕ್ಕಲಗೌಡ ಪಾಟೀಲ, ಉಪಾಧ್ಯಕ್ಷ ಸಹದೇವಪ್ಪ ಕರಬಣ್ಣನವರ್, ಕಾರ್ಯದರ್ಶಿ ತಿರ್ಕಪ್ಪ ಬಾರ್ಕಿ ಮತ್ತು ಖಜಾಂಚಿ ವಿಶ್ವನಾಥ ತುಪ್ಪದ ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಿತ್ಯಾನಂದಸ್ವಾಮಿ ಅವರು "ನಾವು ಕಾಡು ಕಡಿಯುವುದಿಲ್ಲ ಆದರೆ ಕಾಡು ಬೆಳೆಸುವ ಹೆಸರಿನಲ್ಲಿ ಕೃಷಿ ಯೋಗ್ಯ ಭೂಮಿಯಲ್ಲಿ ನೀಲಗಿರಿ ಅಂತಹ ಮರಗಳನ್ನು ಬೆಳೆಸಲು ಬಿಡುವುದಿಲ್ಲ" ಎಂದು ಹೇಳಿದರಲ್ಲದೆ ಶ್ರೀಯುತ ಉದಾಸಿ ಅವರು ಕೊಟ್ಟ ಭರವಸೆಯನ್ನು ಈಡೇರಿಸಬೇಕೆಂದು ಆಗ್ರಹಿಸಿದರು.

ಮೊದಲ ದಿನದ ಸತ್ಯಾಗ್ರಹದಲ್ಲಿ ಬಿಂಗಾಪೂರದ 55 ಜನ ಕೃಷಿ ಕೂಲಿಕಾರರು ಭಾಗವಹಿಸಿದ್ದರು. ಅಂದಿನಿಂದ ಪ್ರತಿದಿನ ಸರದಿಯಂತೆ ಬಾಳಂಬೀಡ್, ಹನುಮನಕೊಪ್ಪ, ಸೋಮಸಾಗರ, ಪಸನಾಬಾದಿ, ದಶರಥಕೊಪ್ಪ, ಯಲಿವಾಳ, ಕಾಡಶೆಟ್ಟಿಹಳ್ಳಿ, ಮಂತಿಗಿ ಮತ್ತು ವರ್ದಿ ಗ್ರಾಮಗಳ ಕೂಲಿಕಾರರು 24 ಗಂಟೆಗಳ ಉಪವಾಸ ಸತ್ಯಾಗ್ರಹ ನಡೆಸಿದರು. ಹಾವೇರಿ ತಾಲೂಕಿನ ಗೌರಾಪುರ, ಬ್ಯಾಡಗಿ ತಾಲೂಕಿನ ಕಾಗಿನೆಲೆ, ಹುಬ್ಬಳ್ಳಿ ತಾಲೂಕಿನ ವಬ್ಬಿ, ಕುಂದುಗೋಳ ತಾಲ್ಲೂಕಿನ ಇಂಗಳಗಿ ಮತ್ತು ಕಲಘಟಗಿ ತಾಲೂಕಿನ ಬೆಂಡಲಗಟ್ಟಿ ಗ್ರಾಮದ ಕೃಷಿ ಕೂಲಿಕಾರರು ಸಹ ಹಾನಗಲ್ ತಾಲೂಕಿನ ಬಗರ್‌ಹುಕುಂ ಸಾಗುವಳಿದಾರರ ಹೋರಾಟವನ್ನು ಬೆಂಬಲಿಸಿ ಒಂದೊಂದು ದಿನ ಸತ್ಯಾಗ್ರಹ ದಲ್ಲಿ ಭಾಗವಹಿಸಿದ್ದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿ ಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಎನ್. ನಾಗರಾಜ್ ಬೆಂಗಳೂರಿನಿಂದ ಆಗಮಿಸಿ ಅವಶ್ಯಕ ಮಾರ್ಗದರ್ಶನ ನೀಡಿದ್ದರು.

ಪಟ್ಟಣ ಪ್ರದೇಶದ ಕಾರ್ಮಿಕ-ನೌಕರರ ಸಂಘಟನೆಗಳು ಹಾನಗಲ್ ಕೃಷಿ ಕೂಲಿ ಕಾರರ ಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದರು. ಸಿಐಟಿಯು ಜಿಲ್ಲಾ ಅಧ್ಯಕ್ಷ ಎಂ.ಬಿ.ಕಟ್ಟಿ, ಪ್ರಧಾನ ಕಾರ್ಯದರ್ಶಿ ಡಿ.ಜಿ.ಗೋಂದಕರ, ಟೆಲಿಕಾಂ ನೌಕರರ ಮುಖಂಡ ಎಂ.ಸದಾನಂದ, ಧಾರವಾಡ ವಿಮಾ ನೌಕರರ ಸಂಘದ ಬಿ.ಐ.ಈಳಿಗೇರ, ಹರಿಹರದ ಕಿರ್ಲೋಸ್ಕರ್ ಕಾರ್ಮಿಕ ಮುಖಂಡ ಜಿ.ಪರಮೇಶ್ವರಪ್ಪ, ರಾಣೆಬೆನ್ನೂರ ಜೀವ ವಿಮಾ ನೌಕರರ ಮುಖಂಡ ಚಂದ್ರಶೇಖರ್ ಜಾಡರ್, ಪಾಲಿಫೈಬರ್ ಕಾಲೋನಿ ಕಾರ್ಮಿಕ ಮುಖಂಡ ಎಚ್.ಹನುಮಂತಪ್ಪ, ಕೈ ಮಗ್ಗ ನೇಕಾರರ ಮುಖಂಡರಾದ ಎ.ಎ.ಮುಲ್ಲಾ ಮತ್ತು ಫಕೀರಪ್ಪ ವಿಭೂತಿ ಸತ್ಯಾಗ್ರಹದ ಶಿಬಿರಕ್ಕೆ ತಮ್ಮ ಸಂಘಗಳ ಸದಸ್ಯರೊಂದಿಗೆ ಆಗಮಿಸಿ ಬೆಂಬಲ ವ್ಯಕ್ತಪಡಿಸುವ ಮೂಲಕ ಗ್ರಾಮೀಣ ಕೂಲಿಕಾರರು ತಮ್ಮ ಸಹ ಸಂಗಾತಿಗಳೆಂದು ಸಾರಿದರು.

ಕಲಾವಿದರಿಂದ ಬೆಂಬಲ

ಸಮುದಾಯ, ಎಸ್.ಎಫ್ಐ ಮತ್ತು ಡಿವೈಎಫ್ಐ ಸಂಘಟನೆಗಳು ಜಂಟಿಯಾಗಿ ತಮ್ಮ ಕಲಾವಿದ ಸದಸ್ಯರ ಒಂದು ತಂಡವನ್ನು ರಚಿಸಿಕೊಂಡು ಹಾನಗಲ್ ತಾಲ್ಲೂಕಿನ ಹಳ್ಳಿಗಳಲ್ಲಿ ಸಂಚರಿಸುತ್ತಾ ಹಾಡುಗಳ ಹಾಗೂ ಬೀದಿ ನಾಟಕಗಳ ಮೂಲಕ ಕೃಷಿ ಕೂಲಿ ಕಾರರ ಹೋರಾಟಕ್ಕೆ ಪೂರಕವಾಗುವ ವಾತಾವರಣವನ್ನು ನಿರ್ಮಿಸಲು ನೆರ ವಾದರು. ಸಮುದಾಯದ ಸಿ.ಆರ್.ಭಟ್ ಈ ಕಲಾ ಜಾಥಾದ ಉಸ್ತುವಾರಿಯನ್ನು ನೋಡಿಕೊಂಡರೆ ಹಾವೇರಿಯ ಕವಿ ಸತೀಶ್ ಕುಲಕರ್ಣಿಯವರು ಕಾರ್ಯಕ್ರಮವನ್ನು ನಿರ್ದೇಶಿಸಿದರು. ಡಿವೈಎಫ್ಐ ನ ಕೆ. ಮಹಾಂತೇಶ್ ಮತ್ತು ಎಸ್ಎಫ್ಐ ನ ಮಹೇಶ್‌ಪತ್ತಾರ ಜಾಥಾದ ನೇತೃತ್ವ ವಹಿಸಿದ್ದರು. ಗ್ರಾಮೀಣ ಯುವಕರನ್ನೊಳಗೊಂಡ ಕಲಾಜಾಥಾ ಜನಮನ ಸೆಳೆಯುವಲ್ಲಿ ಯಶಸ್ವಿಯಾಯಿತು.

ಕೊನೆಯಲ್ಲಿ ಫಕಿರಪ್ಪ ಹೋತನಹಳ್ಳಿಯವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ನಿತ್ಯಾನಂದ ಸ್ವಾಮಿ ಅವರು ಮಾತನಾಡಿ ಸಚಿವರೊಂದಿಗೆ ನಡೆದ ಚರ್ಚೆಯ ವಿವರಗಳನ್ನು ಪ್ರಕಟಿಸಿದರು. ಸಚಿವರ ಭರವಸೆ ಈಡೇರಲು ವಿಳಂಬವಾದರೆ ತಾಲ್ಲೂಕಿನ ಎಲ್ಲ ಕೂಲಿಕಾರರು ಸಾವಿರಾರು ಸಂಖ್ಯೆಯಲ್ಲಿ ಬೆಂಗಳೂರಿಗೆ ಹೋಗಿ ಮುಖ್ಯಮಂತ್ರಿಯವರ ಮನೆಯ ಮುಂದೆ ಸತ್ಯಾಗ್ರಹ ಹೂಡುವುದೆಂದು ನಿರ್ಧರಿಸುವುದರೊಂದಿಗೆ ಉಪವಾಸ ಸತ್ಯಾಗ್ರಹವನ್ನು ಮುಕ್ತಾಯ ಮಾಡುವ ನಿರ್ಧಾರವನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು. ಕಾಂ|| ಫಕೀರಪ್ಪ ಹೋತನಹಳ್ಳಿಯವರ ಕೈಯಿಂದ ಪಾನೀಯವನ್ನು ಸ್ವೀಕರಿಸುವ ಮೂಲಕ ಸತ್ಯಾಗ್ರಹಿಗಳು ತಮ್ಮ ಸತ್ಯಾಗ್ರಹವನ್ನು ಮುಕ್ತಾಯಗೊಳಿಸಿದರು. ವಿಶ್ವನಾಥ ತುಪ್ಪದ, ಹಕ್ಕಲಗೌಡ ಪಾಟೀಲ, ಎಂ.ಜಿನ್ನಾ ಮತ್ತು ಮಹೇಶ ಪತ್ತಾರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಬೆಂಗಳೂರಿ ನಿಂದ ಆಗಮಿಸಿದ್ದ ಡಿವೈಎಫ್ಐ. ರಾಜ್ಯ ಅಧ್ಯಕ್ಷ ಶಾಂತರಾಮ ನಾಯಕ್ ಅವರು ಕಲಾಜಾಥಾದ ಕಲಾವಿದರಿಗೆ ನೆನಪಿನ ಕಾಣಿಕೆ ನೀಡಿ ಕೂಲಿಕಾರರ ಹೋರಾಟಕ್ಕೆ ಡಿವೈಎಫ್ಐನ ಬೆಂಬಲವನ್ನು ಘೋಷಿಸಿದರು.

..... ಬಡವ-ಬಲ್ಲಿದರ ನಡುವಿನ ಸಂಘರ್ಷದ ಪ್ರಶ್ನೆ

ಪುಟ ಒಂದರಿಂದ

ಹಿತಾಸಕ್ತಿ ಈಡೇರಿಸುವ ಒಂದು ಸರಕಾರ ಹಾಗೂ ಜನಗಳ ಹಿತಾಸಕ್ತಿಗಳನ್ನು ಈಡೇರಿಸಬೇಕಾಗಿರುವ ಒಂದು ಸರಕಾರದ ನಡುವಿನ ಮೂಲಭೂತ ಸಂಘರ್ಷ ಇದು.

ಆರ್ಥಿಕದಲ್ಲಿ ಅಸಮತೋಲನ ಇದೆ ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಅದನ್ನು ಸರಿಪಡಿಸಲು ಜನಸಾಮಾನ್ಯರ ಮೇಲೆ ಇನ್ನಷ್ಟು ಬೆಲೆಯೇರಿಕೆಗಳನ್ನು ಹೊರಿಸುವುದೇ ಏಕೈಕ ದಾರಿ ಎಂಬ ಬಗ್ಗೆ ಖಂಡಿತಾ ಭಿನ್ನಾಭಿಪ್ರಾಯವಿದೆ. ಸರಕಾರ ಹಣ ಇಲ್ಲ, ಹಣ ಇಲ್ಲಾ ಎನ್ನುತ್ತಿದೆ. ಹಣ ಸಂಗ್ರಹಿಸಬೇಕಾದರೆ ಒಂದೆಡೆ ಬೆಲೆಗಳನ್ನು ಏರಿಸಬೇಕು ಇನ್ನೊಂದೆಡೆ ದೇಶೀ-ವಿದೇಶೀ ಖಾಸಗಿ ಹೂಡಿಕೆದಾರರ ಬಂಡವಾಳವನ್ನು ಆಕರ್ಷಿಸಲು ಅವರಿಗೆ ರಿಯಾಯ್ತಿಗಳನ್ನು ನೀಡಬೇಕು ಎನ್ನುತ್ತದೆ ಸರಕಾರ. ಆದರೆ ಸತ್ಯ ಸಂಗತಿಯೆಂದರೆ ಸರಕಾರದ ಬಳಿ 'ಹಣ ಇಲ್ಲ'ವಾಗಿರುವುದು ಅದು ದೊಡ್ಡ ಕಂಪನಿವಲಯಕ್ಕೆ, ಸಿರಿವಂತ ವಿಭಾಗಗಳಿಗೆ ಅಭೂತಪೂರ್ವ ರಿಯಾಯ್ತಿಗಳ ಮೂಲಕ ದೊಡ್ಡ ಪ್ರಮಾಣದಲ್ಲಿ ಹಣವನ್ನು ಎತ್ತಿ-ಎತ್ತಿ ಕೊಡುತ್ತಿರುವುದರಿಂದಾಗಿ. ಸರಕಾರ ಮತ್ತು ಅದರ ಬೆಂಬಲಿಗರಿಗೆ ಈಗ ಬಡವರು, ದುಡಿಮೆಗಾರರು ಮಾತ್ರವಲ್ಲ, 'ಸುಧಾರಣೆಗಳು' ತಮ್ಮನ್ನು ಸಿರಿವಂತರನ್ನಾಗಿಸುತ್ತವೆ ಎಂಬ ಭ್ರಮೆ ಹೊತ್ತ ಮಧ್ಯಮ ವರ್ಗಗಳ ಜನಗಳ ಬಗ್ಗೆ ಕೂಡಾ ಏನೇನೂ ಕಾಳಜಿಯಿಲ್ಲ. ಆದ್ದರಿಂದಲೇ ಬೆಲೆಯೇರಿಕೆಯೇ ಅದಕ್ಕೆ ಕಾಣುವ ಏಕೈಕ ಮಾರ್ಗ. ಸಂಯುಕ್ತ ರಂಗದ ಮುಖಂಡರಿಗೆ ಇದನ್ನು ಮನದಟ್ಟು ಮಾಡಿಸಲು ಸಿಪಿಐ(ಎಂ) ಪ್ರಯತ್ನಿಸುತ್ತಲೇ ಇದೆ. ಸಂಯುಕ್ತರಂಗ ಸರಕಾರದ ಚಾಲನಾ ಸಮಿತಿ ಕೊನೆಗೆ ಏನೇ ನಿರ್ಧಾರಕ್ಕೆ ಬರಲಿ, ಜನಸಾಮಾನ್ಯರಿಗೆ ಮಾತ್ರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆ ತಡೆಯುವ ಸಮರ ಇಡೀ ಉದಾರೀಕರಣದ ವಿರುದ್ಧ ಬೃಹತ್ ಹೋರಾಟದ ಒಂದು ಭಾಗ. ಬಹುಪಾಲು ಜನರು, ಅವರಲ್ಲೂ ದುಡಿಮೆಗಾರರು ಸರಕಾರದ, ಅದನ್ನು ಬೆಂಬಲಿಸುವ ಪತ್ರಿಕೆಗಳ ಪ್ರಚಾರದ ಹಿಂದಿರುವ ಮಿಥ್ಯೆಗಳ ಗುಳ್ಳೆಯನ್ನು ಒಡೆಯಬೇಕಾಗುತ್ತದೆ. (ಪುಟ 5ನ್ನೂ ನೋಡಿ)

ಗ್ರಾಮ ಪಂಚಾಯತ್ ನೌಕರರ ಹೋರಾಟ


ಕೋಲಾರ: ರಾಜ್ಯದ ಇತರೆ ಅಸಂಘಟಿತ ಕಾರ್ಮಿಕರಂತೆ ಕಷ್ಟಕೋಟಲೆಗಳನ್ನು ಎದುರಿಸುತ್ತಿರುವ ಹಾಗೂ 1980 ರಿಂದಲೂ ತಮ್ಮ ಕನಿಷ್ಠ ಬೇಡಿಕೆಗಳನ್ನು ಈಡೇರಿಸುವಂತೆ ಸರಕಾರಕ್ಕೆ ಒತ್ತಾಯಿಸಿ ಹೋರಾಟ ನಡೆಸುತ್ತಿರುವ ಕೋಲಾರ ಜಿಲ್ಲಾ ಗ್ರಾಮ ಪಂಚಾಯತ್ ನೌಕರರು (ಸಿಐಟಿಯು) ರಾಜ್ಯ ಸಮಿತಿಯ ಕರೆಯ ಮೇರೆಗೆ ಸರಕಾರದ ವಿಳಂಬ ನೀತಿಯ ವಿರುದ್ಧ ಮೇ16 ರಂದು ನೂರಾರು ಕಾರ್ಮಿಕರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ನಂತರ ನಡೆದ ಸಭೆಯನ್ನುದ್ದೇಶಿಸಿ ಗ್ರಾಮ ಪಂಚಾಯತ್ ನೌಕರರ ಸಂಘದ ಜಿಲ್ಲಾ ಸಂಚಾಲಕರಾದ ಪಿ.ಆರ್.ಸೂರ್ಯನಾರಾಯಣ, ವಿ.ನಾಗಪ್ಪ, ಡಿವೈಎಫ್ಐ ಮುರುಳಿ ಕೃಷ್ಣ, ನಾಗಭೂಷಣ, ಚಂದ್ರಪ್ಪ ಮತ್ತು ಬಿ.ಆಂಜನೇಯ ಮೊದಲಾದವರು ಮಾತನಾಡಿ ಗ್ರಾ.ಪಂ. ನೌಕರರ ಬೇಡಿಕೆಗಳನ್ನು ಈಡೇರಿಸುವಲ್ಲಿ ಸರಕಾರದ ವಿಳಂಬ ನೀತಿಯನ್ನು ಖಂಡಿಸಿದರು.

ಸಂಘದ ಅಧ್ಯಕ್ಷರಾದ ವಿಶ್ವನಾಥ ರೆಡ್ಡಿ, ಕಾರ್ಯದರ್ಶಿ ಮಂಡಲ್ ನಾರಾಯಣ ಸ್ವಾಮಿ ತಹಶೀಲ್ದಾರರಿಗೆ ಮನವಿಸಲ್ಲಿಸಿದರು.

1993 ರ ಪಂಚಾಯತ್ ಕಾಯಿದೆ ಪ್ರಕಾರ ಸಮಾನ ಮಾಸಿಕ ಮೂಲವೇತನ ರೂ. 1040 ಮತ್ತು 840 ನೀಡಬೇಕು, ಸೇವಾ ಸೌಲಭ್ಯ ನೀಡಬೇಕು, ಮೃತರ ಕುಟುಂಬದವರಿಗೆ ಅನುಕಂಪ ನೌಕರಿ, ನಿವೃತ್ತಿ ವೇತನ ಮತ್ತು ಕಾರ್ಯದರ್ಶಿ ಸ್ಥಾನಕ್ಕೆ ನೌಕರರಿಗೆ ಶೇ 50 ರಷ್ಟು ಭಡ್ತಿ, ಗ್ರಾ.ಪಂ. ನೌಕರರ ಇತ್ಯಾದಿ ಬೇಡಿಕೆಗಳನ್ನು ಸ್ಮರಿಸಿಕೊಳ್ಳಲಾಯಿತು.

ಕಳೆದ ವಾರದ ಸಂಚಿಕೆಯ ಕೊನೆ ಪುಟದಲ್ಲಿ ಈ ವ್ಯಂಗ್ಯ ಚಿತ್ರ ತಪ್ಪಾಗಿ ಮುದ್ರಣಗೊಂಡಿತ್ತು. ಇದಕ್ಕಾಗಿ ವಿಷಾದಿಸುತ್ತೇವೆ.



ಹವಾಲಾ ಹಗರಣ - ಮೇವು ಹಗರಣ

ಅಸಂಘಟಿತ ಕಾರ್ಮಿಕರ ಹೋರಾಟದಲ್ಲಿ ಮೈಲಿಗಲ್ಲಾದ ವಿಲಾಸಬೀಡಿ ಕಾರ್ಮಿಕರ ಹೋರಾಟ

ಕಳೆದ 11 ತಿಂಗಳಿಂದ ರಾಮದುರ್ಗ ವಿಲಾಸಬೀಡಿ ಕಾರ್ಖಾನೆ ಮುಚ್ಚಿರುವುದು ಕಾನೂನು ಬಾಹಿರವೆಂದು ಈ ಅವಧಿಯಲ್ಲಿ ಕಾರ್ಮಿಕರು ಎಲ್ಲಾ ಸಂಬಳ ವಗೈರೆ ಸೌಲಭ್ಯಕ್ಕೆ ಅರ್ಹರೆಂದು ಹುಬ್ಬಳ್ಳಿಯ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಏಪ್ರಿಲ್ 30 ರಂದು ಐತಿಹಾಸಿಕ ತೀರ್ಪನ್ನು ನೀಡಿದೆ. ಈ ಬಗ್ಗೆ ಏಪ್ರಿಲ್ 12 ರಂದು ರಾಜ್ಯ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಯವರು ನೀಡಿದ್ದ ಆದೇಶವನ್ನು ಎತ್ತಿಹಿಡಿದಂತಾಗಿದೆ.

ಈಗಾಗಲೇ 'ಐಕ್ಯರಂಗ' ದ ಓದುಗರಿಗೆ ತಿಳಿದಿರುವಂತೆ ರಾಮದುರ್ಗದ ವಿಲಾಸ ಬೀಡಿ ಕಾರ್ಖಾನೆಯಲ್ಲಿ ಸುಮಾರು 175 ಕಾರ್ಮಿಕರು ಕೆಲಸ ಮಾಡುತ್ತಿದ್ದು, 1992 ರಲ್ಲಿ ಬೆಳಗಾವಿ ಜಿಲ್ಲಾ ಬೀಡಿ ಕಾರ್ಮಿಕರ ಯೂನಿಯನ್ ನೇತೃತ್ವದಲ್ಲಿ ಸಂಘಟಿತರಾಗಿದ್ದರು. ಕನಿಷ್ಟ ಕೂಲಿ ಕೊಡದಿರುವ ನ್ಯಾಯಬದ್ಧ ಬೋನಸ್ ಕೊಡದಿರುವ ಎಲ್ಲಾ ಕಾರ್ಮಿಕ ಕಾನೂನುಗಳನ್ನು ಕಾಲುಕಸ ಮಾಡಿದ್ದ ವಿಲಾಸ ಬೀಡಿ ಮಾಲೀಕರಾದ ನಿಪ್ಪಾಣಿಯ ಕುರುಬೆಟ್ಟ ಬಂಧುಗಳ ಉದ್ಧಟತನದ ವಿರುದ್ಧ ರಾಮದುರ್ಗ ಕಾರ್ಮಿಕರು ಅನೇಕ ಹೋರಾಟಗಳನ್ನು ನಡೆಸುತ್ತಾ ಬಂದಿದ್ದಾರೆ.

ಕಾರ್ಮಿಕ ಇಲಾಖೆಯ ನಿರ್ದೇಶನಗಳನ್ನು ಗಾಳಿಗೆ ತೂರಿದ್ದು ವಿಲಾಸ ಬೀಡಿ ಮಾಲೀಕರು ಕಾರ್ಮಿಕ ಸಂಘವನ್ನು ಸದೆಬಡಿದು ಕಾರ್ಮಿಕರನ್ನು ಬೀದಿಪಾಲು ಮಾಡಲು ಅನೇಕ ಕುತಂತ್ರ ನಡೆಸಿದ್ದರು. ಕಳೆದ ಜೂನ್ 16 ರಿಂದ ಫ್ಯಾಕ್ಟರಿಯನ್ನು ಕಾನೂನುಬಾಹಿರವಾಗಿ ಮುಚ್ಚಲಾಯಿತು.

ಕಾರ್ಮಿಕ ಇಲಾಖೆಯ ಕಾರ್ಯದರ್ಶಿಯವರು ಕಾರ್ಖಾನೆ ಮುಚ್ಚಿದ್ದು ಕಾನೂನುಬಾಹಿರವೆಂದು ಆದೇಶ ನೀಡಿದ್ದನ್ನು ಪ್ರಶ್ನಿಸಿ ಮಾಲೀಕರು ಹೈಕೋರ್ಟಿಗೆ ರಿಟ್ ಹಾಕಿದ್ದರು. ಕಾರ್ಮಿಕ ಕಮಿಷನರ್ ಜುಲೈ ಮತ್ತು ಆಗಸ್ಟ್ 1996 ರ ಎರಡು ತಿಂಗಳ ಪಗಾರ ವಸೂಲಿ ಮಾಡಲು ರಿಕವರಿ ಸರ್ಟಿಫಿಕೇಟ್ ನೀಡಿದ್ದರು. ಈ ಆದೇಶವನ್ನೂ ಪ್ರಶ್ನಿಸಿ ಮಾಲೀಕರು ಹೈಕೋರ್ಟ್‌ಗೆ ರಿಟ್ ಹೋಗಿದ್ದರು.

ಬೀಡಿ ಕಾರ್ಮಿಕರಿಗೆ ಕೈಗಾರಿಕಾ ವಿವಾದ ಅನ್ವಯಿಸುವುದಿಲ್ಲವೆಂಬ ಮಾಲೀಕರ ವಾದವನ್ನು ಕರ್ನಾಟಕ ಹೈಕೋರ್ಟ್ ತಳ್ಳಿಹಾಕಿದ್ದಲ್ಲದೇ ಸಮುದ್ರ ದಂಡೆಯಲ್ಲಿ ಕುಳಿತು ಬೀಡಿಕಟ್ಟುತ್ತಿದ್ದರೂ ಬೀಡಿ ಕಾರ್ಮಿಕರಿಗೆ ಫ್ಯಾಕ್ಟರಿ ಆಕ್ಟ್ ಅನ್ವಯಿಸುವುದಾಗಿ ಮಾನ್ಯ ಹೈಕೋರ್ಟ್ ಐತಿಹಾಸಿಕ ತೀರ್ಪು ನೀಡಿತ್ತು.

ತನ್ನ ಫ್ಯಾಕ್ಟರಿಯಲ್ಲಿ 100 ಕ್ಕಿಂತಲೂ ಕಡಿಮೆ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆಂಬ ವಾದವನ್ನು ಮಾಲೀಕರು ಮಾಡಿದ್ದರಿಂದ ಮಾನ್ಯ ಹೈಕೋರ್ಟ್ ಈ ಬಗ್ಗೆ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಯವರು 60 ದಿನಗಳೊಳಗೆ ವಿಚಾರಣೆ ನಡೆಸಲು ಆದೇಶ ನೀಡಿತು.

ಕಾರ್ಯದರ್ಶಿಯವರು ಕಾರ್ಮಿಕರ ಸಂಖ್ಯೆಯ ಬಗ್ಗೆ ವಿವಾದ ಇರುವುದರಿಂದ 30 ದಿನಗಳೊಳಗಾಗಿ ವಿಚಾರಣೆ ಅಂತಿಮಗೊಳಿಸುವಂತೆ ಹುಬ್ಬಳ್ಳಿಯ ಇಂಡಸ್ಟ್ರಿಯಲ್ ಟ್ರಿಬ್ಯೂನಲ್‌ಗೆ ವಿವಾದವನ್ನು ಇತ್ಯರ್ಥ ಪಡಿಸಲು ವಿನಂತಿಸಿದ್ದರು.

ಫೆಬ್ರವರಿ 13 ರಿಂದ ಸತತ ವಿವಾದ ನಡೆದು ಅಂತಿಮವಾಗಿ ಏಪ್ರಿಲ್ 30 ರಂದು ಟ್ರಿಬ್ಯೂನಲ್ ತೀರ್ಪು ನೀಡಿ ಈ ತೀರ್ಪನ್ನು ಮೇ 7 ರಂದು ಕಮಿಶನರರು ಪ್ರಕಟಿಸಿದರು. ಹೈಕೋರ್ಟ್‌ನಲ್ಲಿ ಕಾರ್ಮಿಕರ ಪರವಾಗಿ ನ್ಯಾಯವಾದಿ ಶ್ರೀ ಟಿ.ಎಸ್.ಅನಂತರಾಮ ಮತ್ತು ಟ್ರಿಬ್ಯೂನಲ್‌ನಲ್ಲಿ ಶ್ರೀ ಅನಂತರಾಮ ಹಾಗೂ ಶ್ರೀ ಸಿದ್ದೀಕಿ ವಕೀಲರು ಕಾರ್ಮಿಕರ ಪರವಾಗಿ ವಾದಿಸಿದ್ದರು.

ಕಳೆದ ಹನ್ನೊಂದು ತಿಂಗಳಲ್ಲಿ ಅನೇಕ ಕಷ್ಟನಷ್ಟಗಳನ್ನು ಕಾರ್ಮಿಕರು ಎದುರಿಸಿದ್ದರೂ ಎದೆಗುಂದದೇ ನಿಂತಿದ್ದರು. ಈ ಸಂದರ್ಭದಲ್ಲಿ ರಮೇಜಾ ಯಾದವಾಡ ಎಂಬ ಕಾರ್ಮಿಕಳು ಔಷಧಿಗೆ ಹಣವಿಲ್ಲದೇ ನಿಧನಳಾಗಿದ್ದರೂ ಕಾರ್ಮಿಕರು ವಿಚಲಿತರಾಗಿರಲಿಲ್ಲ.

ಜನವಿರೋಧಿ ನೀತಿಗಳ ವಿರುದ್ಧ ರಾಜ್ಯದೆಲ್ಲೆಡೆ ಯಶಸ್ವೀ ಚಳುವಳಿ

ದಕ್ಷಿಣ ಕನ್ನಡ

ಸಿಐಟಿಯು 7ನೇ ಕರ್ನಾಟಕ ರಾಜ್ಯ ಸಮ್ಮೇಳನದ ತೀರ್ಮಾನದ ಪ್ರಕಾರ ಮೇ 1 ರಿಂದ 22 ರವರೆಗೆ ನಡೆದ ಚಳುವಳಿಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಫೂರ್ತಿದಾಯಕವಾಗಿತ್ತು.

ಸಿಐಟಿಯು ದ.ಕ.ಜಿಲ್ಲಾ ಸಮಿತಿಯು ಏಪ್ರಿಲ್ 11 ರಂದು ಸಭೆ ಸೇರಿ ಮೇ ತಿಂಗಳ ಚಳುವಳಿಯನ್ನು ಜಿಲ್ಲೆಯಾದ್ಯಂತ ಯಶಸ್ವಿಗೊಳಿಸಲು ಕಾರ್ಯಕ್ರಮಗಳನ್ನು ರೂಪಿಸಿತು. 15 ಸಾವಿರ ಕರಪತ್ರಗಳನ್ನು ಮುದ್ರಿಸಿ ಮೇ 1 ರಿಂದಲೇ ಅವುಗಳನ್ನು ಹಂಚಲು ಮತ್ತು ಪ್ರಚಾರ ನಡೆಸಲು ಆರಂಭಿಸಲಾಯಿತು. ಹಂಚಿನ ಕಾರ್ಖಾನೆಗಳಲ್ಲಿ, ಬೀಡಿ ಕಾರ್ಮಿಕರು ವಾಸಿಸುವ ಪ್ರದೇಶಗಳಲ್ಲಿ, ಇಂಜಿನಿಯರಿಂಗ್ ಘಟಕಗಳಲ್ಲಿ, ಕಾರ್ಮಿಕ ಸಂಘಗಳ ಕಚೇರಿಗಳಲ್ಲಿ, ಕಾರ್ಮಿಕರ ಸಭೆ ನಡೆಸಿ, ರಾಜ್ಯ ಸರಕಾರದ ಜನವಿರೋಧಿ ನೀತಿಗಳ ಕುರಿತು ಮತ್ತು ಕಾರ್ಮಿಕ ವರ್ಗದ ತುರ್ತು ಬೇಡಿಕೆಗಳ ಕುರಿತು ವ್ಯಾಪಕ ಪ್ರಚಾರ ನಡೆಸಲಾಯಿತು.

ರಾಜ್ಯ ಸಮ್ಮೇಳನದ ತೀರ್ಮಾನದ ಪ್ರಕಾರ ಎರಡನೇ ಹಂತದ ಚಳುವಳಿಯಾದ ಪಿಕೆಟಿಂಗ್ ಕಾರ್ಯಕ್ರಮವನ್ನು ಜಿಲ್ಲೆಯ ಮುಖ್ಯ ಕೇಂದ್ರಗಳಲ್ಲಿ ಸ್ಫೂರ್ತಿದಾಯಕವಾಗಿ ನಡೆಸಲಾಯಿತು. ಮೇ 16 ರಂದು ಕುಂದಾಪುರದಲ್ಲಿ ಸುಮಾರು 400 ಮಂದಿ ಕಾರ್ಮಿಕರು ಮೆರವಣಿಗೆಯಲ್ಲಿ ಹೋಗಿ ತಾಲ್ಲೂಕು ಕಚೇರಿಯ ಮುಂದೆ ಪಿಕೆಟಿಂಗ್ ನಡೆಸಿ ಬಂಧನಕ್ಕೆ ಒಳಗಾದರು. ಅದೇ ದಿನ ಉಡುಪಿಯಲ್ಲಿ 280 ಮಂದಿ ಹಂಚು ಕಾರ್ಮಿಕರು ತಾಲ್ಲೂಕು ಆಫೀಸಿಗೆ ಮೆರವಣಿಗೆಯಲ್ಲಿ ಹೋಗಿ ಅಲ್ಲಿ ಪಿಕೆಟಿಂಗ್ ನಡೆಸಿ ಬಂಧನಕ್ಕೆ ಒಳಗಾದರು. ಮೇ 17 ರಂದು ಉಡುಪಿಯಲ್ಲಿ 128 ಮಂದಿ ಬೀಡಿ ಕಾರ್ಮಿಕರು ಪಿಕೆಟಿಂಗ್ ನಡೆಸಿ ತಾಲ್ಲೂಕು ಕಚೇರಿಯ ಬಾಗಿಲನ್ನು ಇಪ್ಪತ್ತು ನಿಮಿಷಗಳ ಕಾಲ ಸಂಪೂರ್ಣ ಬಂದ್ ಮಾಡಿದರು. ಕಾರ್ಮಿಕರನ್ನು ಬಂಧಿಸಿ ನಂತರ ಬಿಡುಗಡೆಗೊಳಿಸಲಾಯಿತು.

ಮೇ 20 ರಂದು ಮಂಗಳೂರಿನಲ್ಲಿ ಸುಮಾರು ಎರಡುಸಾವಿರ ಕಾರ್ಮಿಕರು 6 ತಂಡಗಳಲ್ಲಿ ಪಿಕೆಟಿಂಗ್ ನಡೆಸಿ ಬಂಧನಕ್ಕೆ ಒಳಗಾದರು. ಇವರಲ್ಲಿ ಸುಮಾರು 600 ಮಂದಿ ಮಹಿಳಾ ಕಾರ್ಮಿಕರಿದ್ದರು. ಸುಮಾರು 400 ಮಂದಿ ಬೀಡಿ ಕಾರ್ಮಿಕ ಮಹಿಳೆಯರನ್ನೊಳಗೊಂಡ ಪ್ರಥಮ ತಂಡವು ಪಿಕೆಟಿಂಗ್ ನಡೆಸುತ್ತಿದ್ದಾಗ ಕೇಂದ್ರ ಮಂತ್ರಿ ಸಿ.ಎಂ.ಇಬ್ರಾಹಿಂ ಅವರು ಜಿಲ್ಲಾಧಿಕಾರಿಯ ಕಚೇರಿಯಲ್ಲಿ ಸಭೆಯೊಂದರಲ್ಲಿ ಭಾಗವಹಿಸಿ ಹೊರಗೆ ಬರುತ್ತಿದ್ದಾಗ ಅವರ ಕಾರನ್ನೂ ಅವರೊಂದಿಗಿದ್ದ ಅಧಿಕಾರಿಗಳ ಮತ್ತು ಇತರರ ಕಾರುಗಳನ್ನೂ ಮಹಿಳಾ ಕಾರ್ಮಿಕರು ತಡೆದು ನಿಲ್ಲಿಸಿದರು. ಸ್ವಲ್ಪ ಹೊತ್ತು ಉದ್ರಿಕ್ತ ಪರಿಸ್ಥಿತಿ ನಿರ್ಮಾಣವಾಯಿತು. ಪೋಲೀಸ್ ಅಧಿಕಾರಿಗಳು ಹುಚ್ಚುಹಿಡಿದವರಂತೆ ಕಿರುಚಾಡಿದರು. ಕಾರ್ಮಿಕರನ್ನು ಅವಸರದಲ್ಲಿ ಬಂಧಿಸಿ ವ್ಯಾನುಗಳಲ್ಲಿ ಕೊಂಡುಹೋದ ನಂತರ ಮಂತ್ರಿ ಮತ್ತಿತರರ ವಾಹನಗಳು ಹೊರಗೆ ಹೋದವು. ಕಾರ್ಮಿಕ ವರ್ಗದ ಪಕ್ಷದ ಮಿತ್ರ ಪಕ್ಷವೆಂದು ಹೇಳಿಕೊಳ್ಳುತ್ತಿರುವ ಜನತಾದಳದ ಸಚಿವರು ಕಾರಿನಿಂದ ಇಳಿದು ಕಾರ್ಮಿಕರೊಂದಿಗೆ ಒಂದು ನಿಮಿಷ ಮಾತನಾಡುವ ಸೌಜನ್ಯ ತೋರಬಹುದಿತ್ತೆಂದು ರಸ್ತೆ ಬದಿಯಲ್ಲಿ ನಿಂತಿದ್ದ ಸಾಮಾನ್ಯ ಜನರು ಆಡಿಕೊಳ್ಳುತ್ತಿದ್ದರು.

ಮೇ22 ರ ಕೈಗಾರಿಕಾ ಮುಷ್ಕರದಲ್ಲಿ ಜಿಲ್ಲೆಯಾದ್ಯಂತ ಹಂಚು, ಬೀಡಿ ಮತ್ತು ಇಂಜಿನಿಯರಿಂಗ್ ಘಟಕಗಳ ಕಾರ್ಮಿಕರು ಭಾಗವಹಿಸಿದ್ದರು. ಹಂಚು ಕೈಗಾರಿಕೆಯಲ್ಲಿ ಮುಷ್ಕರ ಸಂಪೂರ್ಣ ಯಶಸ್ವಿಯಾಗಿತ್ತು. ಮಂಗಳೂರಿನ ಕೆನರಾ ವರ್ಕ್ಸ್ ಶಾಪ್, ನಿಟ್ಟೆಯ ಲೆಮಿನಾ ಫೌಂಡ್ರಿ, ಪುತ್ತೂರಿನ ಸೋಜಾ ಇಂಡಸ್ಟ್ರೀಸ್ ಮೊದಲಾದ ಇಂಜಿನಿಯರಿಂಗ ಘಟಕಗಳಲ್ಲಿ ಸಂಪೂರ್ಣ ಮುಷ್ಕರ ನಡೆಯಿತು. ಬೀಡಿ ಕಾರ್ಮಿಕರ ಮಧ್ಯದಲ್ಲಿ ಸಿಐಟಿಯು ಸಂಘಟನೆ ಇರುವ ಕಡೆಗಳಲ್ಲಿ ಮುಷ್ಕರ ಯಶಸ್ವಿಯಾಗಿದೆ.

ದಕ್ಷಿಣಕನ್ನಡ ಜಿಲ್ಲೆಯ ಕಾರ್ಮಿಕರ ವರ್ಗ ಪ್ರಜ್ಞೆಯನ್ನು ಮತ್ತೊಮ್ಮೆ ಎತ್ತಿ ಹಿಡಿಯುವುದರಲ್ಲಿ ಮೇ ತಿಂಗಳ ಚಳುವಳಿಯು ಬಹಳಷ್ಟು ಯಶಸ್ವಿಯಾಗಿದೆ.

ಧಾರವಾಡ

ಸಿಐಟಿಯು ಮತ್ತು ಕರ್ನಾಟಕ ಗ್ರಾಮ ಪಂಚಾಯತ್ ನೌಕರರ ಸಂಘದ ಕರೆಯಂತೆ ಮೇ 22 ರಂದು ರಾಜ್ಯಾದ್ಯಂತ ನಡೆದ ಸಾರ್ವತ್ರಿಕ ಮುಷ್ಕರದಲ್ಲಿ ಧಾರವಾಡ ಜಿಲ್ಲೆಯ ಕೈಗಾರಿಕಾ ಕಾರ್ಮಿಕರು, ಗ್ರಾಮ ಪಂಚಾಯತ್ ನೌಕರರು ಭಾಗವಹಿಸಿದ್ದರು. ಪ್ರಾರಂಭದಲ್ಲಿ ಕಡಪಾ ಮೈದಾನದಿಂದ ಹೊರಟು ಮುಖ್ಯ ಬೀದಿಗಳ ಮೂಲಕ ಮೆರವಣಿಗೆಯಲ್ಲಿ ಹೋಗಿ ನಂತರ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರಿಗೆ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದರು. ಜಿಲ್ಲಾ ಕಾರ್ಯಾಲಯಗಳ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು.

ಈ ಮನವಿಯಲ್ಲಿ ಪಂಚಾಯತ್ ಸಚಿವರು ಇತ್ತೀಚೆಗೆ ನೀಡಿದ ಆಶ್ವಾಸನೆಗಳಂತೆ ಕೇರಳ ಮತ್ತು ಪಶ್ಚಿಮಬಂಗಾಳದ ಮಾದರಿಯಲ್ಲಿ ಸೇವಾ ನಿಯಮಾವಳಿಗಳನ್ನು ರೂಪಿಸಿ, ಪುರಸಭಾ ನೌಕರರಿಗೆ ಸರಿಸಮಾನವಾದ ವೇತನ ಮತ್ತು ಇತರ ಸೌಲಭ್ಯಗಳನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಲಾಗಿದೆ. ತೆರಿಗೆ ಸಂಗ್ರಹಕ್ಕೂ ನೌಕರರ ಮಾಸಿಕ ವೇತನಕ್ಕೂ ತಳಕು ಹಾಕುವುದು ಸರಿಯಲ್ಲ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಕಾರ್ಮಿಕ ವಿವಾದಗಳಲ್ಲಿ ಪೋಲೀಸರ ಮಧ್ಯ ಪ್ರವೇಶ ಹಾಗೂ ದೌರ್ಜನ್ಯ ನಡೆಯಕೂಡದೆಂದು, ಮುಚ್ಚಿದ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಬೇಕೆಂದು, ಕೆ.ಎಸ್.ಆರ್.ಟಿ.ಸಿ ಯೂ ಸೇರಿದಂತೆ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ಖಾಸಗೀಕರಣ ಮಾಡಬಾರದೆಂದು, ಬೀಡಿ ಕಾರ್ಮಿಕರಿಗೆ ಮತ್ತು ನೇಕಾರರಿಗೆ ನಿಗದಿತ ದರಗಳಲ್ಲಿ ಕನಿಷ್ಟ ಕೂಲಿ ಕೊಡಬೇಕೆಂದು, ಇತರ ಅಸಂಘಟಿತ ಕಾರ್ಮಿಕರಿಗೆ ಬಡತನ ರೇಖೆಯ ಮೇಲಟ್ಟದಲ್ಲಿ ಕನಿಷ್ಟ ವೇತನ ದಿನಕ್ಕೆ 60 ರೂ. ನಿಗದಿಮಾಡಬೇಕೆಂದು ಒತ್ತಾಯಿಸಲಾಗಿದೆ.

ಮುಷ್ಕರ ನಿರತ ನೌಕರರನ್ನುದ್ದೇಶಿಸಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ॥ ವಿ.ಎಸ್.ದೇಶಪಾಂಡೆ ಮತ್ತು ಸಿಐಟಿಯು, ಗ್ರಾಮಪಂಚಾಯತ್, ಟೆಲಿಕಾಂ, ಜೀವವಿಮಾ, ಮೈಸೂರು ಕಿರ್ಲೋಸ್ಕರ್ ಮುಖಂಡರಾದ ನಿತ್ಯಾನಂದ ಸ್ವಾಮಿ, ಸಿ.ಆರ್.ಭಟ್, ಎಂ.ಬಿ.ಕಟ್ಟಿ, ಎಂ.ಸದಾನಂದ, ಆರ್.ಎಚ್.ಆಯಿ, ಕೆ.ಪಿ.ಜೋಷಿ, ಬೀ.ಆರ್.ಪಾಟೀಲ್, ಬಿ.ಬಿ.ಬಡಿಗೇರ, ಬಿ.ಐ.ಈಳಿಗೇರ ಮಾತನಾಡಿದರು. ಡಿ.ಜೆ. ಗೋಂದಕರ ವಂದನಾರ್ಪಣೆ ಮಾಡಿದರು.

ಹಾಸನ

ಸಿಐಟಿಯು ರಾಜ್ಯ ಸಮ್ಮೇಳನದ ಕರೆಯಂತೆ ಹಾಸನ ಜಿಲ್ಲೆಯ ಸಿಐಟಿಯುವಿಗೆ ಸೇರಿದ ತೋಟ ಕಾರ್ಮಿಕರು ಮೇ22 ರಂದು ಯಶಸ್ವಿ ಮುಷ್ಕರ ನಡೆಸಿದರು.

ಮುಷ್ಕರ ನಡೆಸಿದ ಕಾರ್ಮಿಕರು ಸುಮಾರು 300 ಜನ ಸಕಲೇಶಪುರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸುಮಾರು ಒಂದು ಗಂಟೆಗಳ ಕಾಲ ಉಪವಿಭಾಗಾಧಿಕಾರಿಯವರ ಕಛೇರಿಯ ಮುಂದೆ ಮತ ಪ್ರದರ್ಶನ ನಡೆಸಿದರು. ಪ್ರದರ್ಶನಕಾರರನ್ನುದ್ದೇಶಿಸಿ ಕಾ॥ ಸುಕುಮಾರ್ ಮಾತನಾಡಿದರು. ಪ್ರಧಾನ ಮಂತ್ರಿ ಹಾಗೂ ರಾಜ್ಯದ ಮುಖ್ಯಮಂತ್ರಿಯವರಿಗೆ ಉಪವಿಭಾಗಾಧಿಕಾರಿಯವರ ಮುಖಾಂತರ ಬೇಡಿಕೆಗಳ ಮನವಿಯನ್ನು ಅರ್ಪಿಸಲಾಯಿತು.

ಭಟ್ಕಳ

ಮೇ 22 ರಂದು ಸಿಐಟಿಯು ರಾಜ್ಯ ಸಮಿತಿ ಕರೆಯಂತೆ ಪ್ರಮುಖ 16 ಬೇಡಿಕೆಗಳನ್ನೊಳಗೊಂಡ ಅನಂತವಾಡಿ ಕಾರ್ಮಿಕರ ನ್ಯಾಯಯುತ ಹೋರಾಟಕ್ಕೆ ಬೆಂಬಲಾರ್ಥವಾಗಿ ಭಟ್ಕಳ ಸಿಐಟಿಯು ಸಂಯೋಜಿತ ಒಂದು ಸಾವಿರಕ್ಕೂ ಮಿಕ್ಕಿ ಮಹಿಳಾ ಕಾರ್ಮಿಕರು ಸೇರಿದಂತೆ ಹಂಚಿನ ಕಾರ್ಖಾನೆ ಕಾರ್ಮಿಕರು ಭಟ್ಕಳ ಸಹಾಯಕ ಆಯುಕ್ತರ ಕಛೇರಿ ಎದುರು ಮೆರವಣಿಗೆ ನಡೆಸಿ ಬೇಡಿಕೆಗಳ ಮನವಿ ಪತ್ರವನ್ನು ಮಾನ್ಯ ಎ.ಸಿ.ಯವರ ಮುಖಾಂತರ ಸರಕಾರಕ್ಕೆ ಸಲ್ಲಿಸಲಾಯಿತು. ಎ.ಸಿ.ಕಛೇರಿ ಎದುರು ಧರಣಿ ನಿರತ ಸಾವಿರಾರು ಕಾರ್ಮಿಕರನ್ನು ಉದ್ದೇಶಿಸಿ ಡಿವೈಎಫ್ಐ ರಾಜ್ಯ ಅಧ್ಯಕ್ಷ ಶಾಂತರಾಮ ನಾಯಕ್, ಹಂಚು ಕಾರ್ಮಿಕರ ಮುಖಂಡರೂ, ಸಿಪಿಐ(ಎಂ) ಕಾರ್ಯದರ್ಶಿಗಳೂ ಆದ ಸುಭಾಷ ಕೊ[illegible]ಕರ ಸುದೀರ್ಘವಾಗಿ ಮಾತನಾಡಿದರು.

ಅಂಗನವಾಡಿ ನೌಕರರ ಸಂಘದ ರಾಜ್ಯ ಸಹಕಾರ್ಯದರ್ಶಿ ನಾಗರತ್ನ ಪಡಿಯಾರ, ಹಂಚು ಕಾರ್ಮಿಕ ಮುಂದಾಳುಗಳಾದ ಮಾಸ್ತಿ ನಾಯ್ಕ, ಚಂದ್ರುನಾಯ್ಕ, ಮುನ್ವೇಲಾ ಡಿಕೋಸ್ತಾ ಬೆಂಬಲ ವ್ಯಕ್ತಪಡಿಸಿ ಮಾತನಾಡಿದರು.

ಹೊನ್ನಾವರ

ಇದೇರೀತಿ ಹೊನ್ನಾವರದಲ್ಲೂ ಸಾವಿರಾರು ಕಾರ್ಮಿಕರು ತಹಶೀಲ್ದಾರರ ಕಛೇರಿ ಎದುರು ಮತ ಪ್ರದರ್ಶನ ನಡೆಸಿ ಮನವಿ ಅರ್ಪಿಸಿದರು. ಸಿಐಟಿಯು ಮುಖಂಡರಾದ ತಿಲಕಗೌಡ, ಟಿ.ಎಸ್. ನಾಯ್ಕ, ಸಿಪಿಐ(ಎಂ) ನ ಯಶೋಧರನ್ ಹಾಜರಿದ್ದು ಮಾತನಾಡಿದರು.

ಕರ್ನಾಟಕದಲ್ಲಿ ಕಳೆದವಾರ

ಮೇ 23

■ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಮೂವರು ಸದಸ್ಯರನ್ನು ನಾಮಕರಣ ಮಾಡಲು ಸುಗ್ರೀವಾಜ್ಞೆ.

■ ಅನಿಶ್ಚಿತ ಅವಧಿಯ ಲೋಡ್ ಶೆಡ್ಡಿಂಗ್ ಆರಂಭಿಸುವುದಾಗಿ ಕೆಇಬಿ ಪ್ರಕಟಣೆ.

■ ಮಂಗಳೂರು ಪಾಲಿಕೆಗೆ ಕಾಂಗ್ರೆಸ್ ಮೇಯರ್, ಉಪಮೇಯರ್ ಆಯ್ಕೆ.

■ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಸೇರಿ ಎಲ್ಲಾ ಸದಸ್ಯರ ರಾಜೀನಾಮೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆಯ ಟಿಪ್ಪಣಿಗಳಿಗೆ ಪ್ರತಿಭಟನೆ.

ಮೇ 24

■ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಂದಾಯವನ್ನು ಪರಿಷ್ಕರಿಸುವಂತೆ ಎಲ್ಲ ಗ್ರಾಮ ಪಂಚಾಯತುಗಳಿಗೆ ಸರಕಾರದ ಆದೇಶ.

ಮೇ 25

■ ಪ್ರತಿ ಕೈಗಾರಿಕಾ ಪ್ರದೇಶದಲ್ಲಿ ಸರಕಾರ ಮತ್ತು ಉದ್ಯಮಿಗಳ ನಡುವೆ ನೇರ ಸಂಪರ್ಕ ಕಲ್ಪಿಸಲು ವಿಶೇಷ ಅಧಿಕಾರಿಯೊಬ್ಬರನ್ನು ನೇಮಿಸಲು ತೀರ್ಮಾನಿಸಲಾಗಿದೆ ಎಂದು ಕೈಗಾರಿಕಾ ಸಚಿವರು.

ಮೇ 26

■ ಕಾಂಗ್ರೆಸ್ ಸಾಂಸ್ಥಿಕ ಚುನಾವಣೆಗಳಲ್ಲಿ ಭಾರಿ ಅಕ್ರಮ ನಡೆದಿದೆಯೆಂದು ಕರ್ನಾಟಕದಲ್ಲೂ ಮಾಜಿ ಕೇಂದ್ರ ಸಚಿವ ಎಂ.ರಾಜಶೇಖರಮೂರ್ತಿ ಆಪಾದನೆ.

ಮೇ 27

■ ಮೊಳಕಾಲ್ಮೂರು ವಿಧಾನ ಸಭಾ ಕ್ಷೇತ್ರದಲ್ಲಿ ಮುಖ್ಯಮಂತ್ರಿಗಳ ಸಭೆಯಲ್ಲಿ ಕಲ್ಲುತೂರಾಟ.

■ ಸಾರಾಯಿ ಬಾಟ್ಲಿಂಗ್ ಮತ್ತು ಸ್ಯಾಚೆಟ್ ತಯಾರಿಕಾ ವ್ಯವಸ್ಥೆಯನ್ನು ಖಾಸಗಿಯವರಿಗೆ ನೀಡದಿರುವಂತೆ ಸರಕಾರಕ್ಕೆ ಶಿಫಾರಸು ಮಾಡಲು ಪಾನ ನಿಷೇಧ ಸಂಬಂಧದ ಸಚಿವ ಸಂಪುಟ ಉಪಸಮಿತಿ ನಿರ್ಧಾರ.

ಮೇ 28

■ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮೂವರು ನ್ಯಾಯಾಧೀಶರುಗಳ ನೇಮಕ-ವಕೀಲರಾದ ಗೋಪಾಲ ಗೌಡ, ಎಸ್.ಆರ್.ಮನ್ನೂರೆ ಮತ್ತು ರಂಗ ವಿಠಲಾಚಾರ್.

ಮೇ 29

■ ಮೊಳಕಾಲ್ಮೂರು ವಿಧಾನ ಸಭಾ ಚುನಾವಣೆಯಲ್ಲಿ ಮತದಾನ - 65%

■ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಈ ಬಾರಿ ತೇರ್ಗಡೆ ಪ್ರಮಾಣ 46.14% ಕಳೆದ ವರ್ಷಕ್ಕಿಂತ ತುಸು ಹೆಚ್ಚು. ಕಳೆದ ವರ್ಷ ಇದು 44.63%. 6,46,055 ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪರೀಕ್ಷೆಗೆ ಕೂತಿದ್ದು 2,56,800 ಮಂದಿ ತೇರ್ಗಡೆಯಾಗಿದ್ದಾರೆ. ಪರೀಕ್ಷೆಗೆ ಕೂತ ಬಾಲಕಿಯರ ಸಂಖ್ಯೆ 1,93,762, ತೇರ್ಗಡೆಯಾದವರು 94,743 ಅಂದರೆ 48.99%. ಬಾಲಕರ ತೇರ್ಗಡೆ ಪ್ರಮಾಣ 44.14% ಮಾತ್ರ. ಜಿಲ್ಲಾವಾರು ತೇರ್ಗಡೆಯ ಪ್ರಮಾಣದಲ್ಲಿ ಬೆಂಗಳೂರು ಜಿಲ್ಲೆಗೆ ಮೊದಲ ಸ್ಥಾನ, ತುಮಕೂರಿಗೆ ಕೊನೆಯ ಸ್ಥಾನ. ಮೊದಲ 20 ರ್‍ಯಾಂಕು ಪಡೆದ 127 ರಲ್ಲಿ 66 ವಿದ್ಯಾರ್ಥಿನಿಯರು.

■ ಪಿಯುಸಿ ಫಲಿತಾಂಶದಲ್ಲಿ ಮಾತ್ರ ಇಳಿತ. ದ್ವಿತೀಯ ಪಿಯುಸಿ ಪರೀಕ್ಷೆ [illegible] ಹೊಸ ಪಠ್ಯಕ್ರಮದಲ್ಲಿ 199940 ಮಂದಿ, ಹಳೆಯ ಪಠ್ಯಕ್ರಮದಲ್ಲಿ 91520 ಮಂದಿ ಕೂತಿದ್ದು ಒಟ್ಟು 37.08% ಉತ್ತೀರ್ಣರಾಗಿದ್ದಾರೆ. ಕಳೆದ ವರ್ಷದ ತೇರ್ಗಡೆ ಪ್ರಮಾಣ 43.15% ಆದರೆ ಈ ಬಾರಿಯ ಹೊಸ ಪಠ್ಯಕ್ರಮದಲ್ಲಿ ಉತ್ತೀರ್ಣರಾದವರ ಪ್ರಮಾಣ 44.07%. ಇಲ್ಲಿಯೂ ವಿದ್ಯಾರ್ಥಿನಿಯರದ್ದೇ ಮೇಲುಗೈ. ಹೊಸ ಪಠ್ಯಕ್ರಮದಲ್ಲಿ ಪರೀಕ್ಷೆಗೆ ಕೂತ ಬಾಲಕಿಯರ ಸಂಖ್ಯೆ 80615, ತೇರ್ಗಡೆಯಾದವರು 43472 ಅಂದರೆ 53.92%. ಬಾಲಕರ ತೇರ್ಗಡೆ ಪ್ರಮಾಣ 37.41.

ಕಳೆದ ತಿಂಗಳು ರಾಷ್ಟ್ರದ ರಾಜಧಾನಿಯಲ್ಲಿ ಭಾರಿ ದೊಡ್ಡ ನಾಟಕವೊಂದು ನಡೆಯಿತು. ಸಂಯುಕ್ತ ರಂಗದ ಸರಕಾರಕ್ಕೆ ಕಾಂಗ್ರೆಸ್(ಐ) ಬೆಂಬಲ ಹಿಂತೆಗೆದುಕೊಂಡಾಗ ತನ್ನ ನೇತೃತ್ವದಲ್ಲಿ ಒಂದು ಸಮ್ಮಿಶ್ರ ಸರಕಾರ ಇದು ಕಾಂಗ್ರೆಸ್ ಅಧ್ಯಕ್ಷರ ಮೊದಲ ನಿರೀಕ್ಷೆಯಾಗಿತ್ತು. ಅದು ಸಾಧ್ಯವಿಲ್ಲವೆಂದು ಕಂಡು ಬಂದಾಗ ಕಾಂಗ್ರೆಸ್ಸೇತರ ಮುಖಂಡತ್ವದ ಸಮ್ಮಿಶ್ರ ಸರಕಾರದ ನಿರೀಕ್ಷೆ. ಅದೂ ಸಾಧ್ಯವಿಲ್ಲ ಎಂದು ಕಂಡು ಬಂದಾಗ ಕನಿಷ್ಠ ಸಂಯುಕ್ತ ರಂಗ ಸರಕಾರದ ಮುಖಂಡತ್ವದಲ್ಲಾದರೂ ಬದಲಾವಣೆ. ಕೊನೆಗೆ ಸೀತಾರಾಂ ಕೇಸರಿ ಯವರು ಇದರಿಂದಲೇ ತೃಪ್ತಿ ಪಟ್ಟುಕೊಳ್ಳಬೇಕಾಯಿತು. ಸಂಯುಕ್ತ ರಂಗದ ಮುಖಂಡ ಮಾತ್ರ ಬದಲಾದರು. ಆದರೆ ನೀತಿಗಳು ಅವೇ, ಕಾರ್ಯಕ್ರಮಗಳು ಅವೇ, ಮಂತ್ರಿಗಳು ಅವರೇ, ಜನಗಳ ಮೇಲೆ ಇನ್ನೊಂದು ಚುನಾವಣೆ ಹೇರಬಾರದೆಂಬ ಕಾರಣಕ್ಕೆ, ಐಕ್ಯತೆ ಉಳಿಸಿಕೊಳ್ಳಲು ಮಾತ್ರವೇ ಸಂಯುಕ್ತ ರಂಗ ನಾಯಕತ್ವ ಬದಲಾವಣೆಗೆ ಒಪ್ಪಿತು. ಕಾಂಗ್ರೆಸ್‌ನ ಮೊದಲ ನಿರೀಕ್ಷೆ ಅದೇ ರೀತಿ ಬಿಜೆಪಿಯ ನಿರೀಕ್ಷೆಗಳು ಹೀಗೆ ತಲೆಕೆಳಗಾಗಲು ಕಾರಣ ಸಿಪಿಐ(ಎಂ)ನ ದೃಢ ನಿಲುವು. ಈ ಕಾರಣಕ್ಕಾಗಿಯೇ ತದನಂತರ ಸಿಪಿಐ(ಎಂ)ನ ಮೇಲೆ ವಿವಿಧ ರೀತಿಯ ಆಪಾದನೆಗಳು ದೊಡ್ಡ ಬಂಡವಾಳಿಗರ ಪತ್ರಿಕೆಗಳಲ್ಲಿ ಬರುತ್ತಿವೆ. ಇತ್ತೀಚೆಗೆ ಇದು ಯಾವ ಮಟ್ಟ ತಲುಪಿದೆಯೆಂದರೆ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಮತ್ತೊಮ್ಮೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆಯ ಹೊರೆ ಜನ ಗಳ ಮೇಲೆ ಹಾಕಬೇಡಿ ಎಂದು ಒತ್ತಾಯಿಸುವುದು ಕೂಡಾ ಮಹಾ ಅಪರಾಧ ಎಂಬಂತೆ ಈ ಪತ್ರಿಕೆಗಳು ಚಿತ್ರಿಸುತ್ತಿವೆ. ಸಿಪಿಐ(ಎಂ) ಮೇಲಿನ ಇಂತಹ ಆಪಾದನೆಗಳಿಗೆ ಪಕ್ಷದ ಅತ್ಯುನ್ನತ ಸಮಿತಿ ಪೊಲಿಟ್‌ಬ್ಯೂರೋದ ಸದಸ್ಯ ಸೀತಾರಾಂ ಯೆಚೂರಿ ಸರಿಯಾದ ಉತ್ತರ ನೀಡಿದ್ದಾರೆ. ಅವರ ಲೇಖನದ ಕೆಲವಂಶ ಗಳನ್ನು ನಮ್ಮ ಓದುಗರಿಗೆ ಇಲ್ಲಿ ಕೊಡಲಾಗಿದೆ.

ರಾಜಕೀಯವೆಂದರೆ ಕೊಡು-ಕೊಳ್ಳುವ ಲೆಕ್ಕವಲ್ಲ! ಜವಾಬ್ದಾರಿಯೆಂದರೆ ಅಧಿಕಾರದ ಹುದ್ದೆಗಳನ್ನು ಅಲಂಕರಿಸುವುದಲ್ಲ!

ಸಿಪಿಐ(ಎಂ) ಮೇಲಿನ ಆಪಾದನೆಗಳಿಗೆ ಸೀತಾರಾಂ ಯೆಚೂರಿ ಉತ್ತರ

ಕುರುಡು ಕಾಂಗ್ರೆಸ್-ವಿರೋಧ ಬಿಟ್ಟು, ನಿಜವಾಗಿ ದೇಶವನ್ನು ಕೋಮುವಾದಿಗಳಿಂದ ಉಳಿಸ ಬೇಕೆಂದಿದ್ದರೆ ಕಾಂಗ್ರೆಸ್‌ನೊಂದಿಗೆ ಸಮ್ಮಿಶ್ರ ಸರಕಾರ ರಚಿಸಲು ಏಕೆ ಹಿಂದೇಟು ಹೊಡೆಯಬೇಕು? ಇದು ಸಿಪಿಐ(ಎಂ) ಬಗ್ಗೆ ಕೇಳುವ ಸಾಮಾನ್ಯ ಪ್ರಶ್ನೆ.

ಏನು ಈ ಸಲಹಾಕಾರರು ಸಿಪಿಐ(ಎಂ)ನ ಕುರುಡು ಕಾಂಗ್ರೆಸ್ -ವಿರೋಧ ಎನ್ನುತ್ತಾರೋ, ಅದು ಯಾವುದೇ ವ್ಯಕ್ತಿಗಳ ಬಗ್ಗೆ ತಿರಸ್ಕಾರದಿಂದ ಬಂದಂತದ್ದಲ್ಲ, ನೀತಿಗಳ, ಧೋರಣೆಗಳ ವಿರುದ್ಧ ಬಂದದ್ದು ಎಂಬುದನ್ನು ಮೊದಲು ಗಮನಿಸಬೇಕು. ಕಾಂಗ್ರೆಸ್ ಆಂತರಿಕ ಗುಂಪುಗಾರಿಕೆ, ಹೊರಗಿನ ಒತ್ತಡಗಳಿಂದಾಗಿ ಮುಖಂಡತ್ವವನ್ನು ಬದಲಿಸಿದರೂ, 1996 ರ ಭಾರೀ ಪರಾಭವಕ್ಕೆ ಕಾರಣಗಳನ್ನು ಇನ್ನೂ ವಿಶ್ಲೇಷಿಸಿಲ್ಲ. ತಮ್ಮ ಮುಖಂಡರ ಭ್ರಷ್ಟಾಚಾರಗಳ ವಿರುದ್ಧ ಇನ್ನೂ ಸ್ಪಷ್ಟ ನೇರ ನಿಲುವು ತಳೆದಿಲ್ಲ. ಅದರ ಈ ವಿನಾಶಕಾರೀ ನೀತಿಗಳು ಮುಂದುವರಿಯುವವರೆಗೆ ನಮ್ಮ ವಿರೋಧವೂ ಖಂಡಿತಾ ಮುಂದುವರಿಯುತ್ತದೆ. ದೇಶದ ಹಿತವನ್ನು ಗಮನಿಸಿ ಅವರೊಂದಿಗೆ ಸಮ್ಮಿಶ್ರ ಸರಕಾರ ರಚಿಸಿ ಎಂದು ನಮಗೆ ಸಲಹೆ ನೀಡುವವರಿಗೆ ನಾವು ಹೇಳುವುದಿಷ್ಟೆ - ನಾವು ದೇಶದ ಹಿತಾಸಕ್ತಿಗಳಿಗೆ ಪಕ್ಷದ ಹಿತಾಸಕ್ತಿಗಳಿಗಿಂತ ಹೆಚ್ಚು ಆದ್ಯತೆ ನೀಡುವುದರಿಂದಲೇ ಇಂತಹ ವಿರೋಧದ ನಿಲುವು ತಳೆದಿದ್ದೇವೆ ಎಂದು. ನಿಜ ಸಂಗತಿಯೆಂದರೆ ಸಿಪಿಐ(ಎಂ)ಗೆ ದೇಶದ ಹಿತವೇ ಪಕ್ಷದ ಹಿತ. ಇವೆರಡರಲ್ಲಿ ವೈರುಧ್ಯಗಳೇನೂ ಇಲ್ಲ.

ಇನ್ನು, ಕೋಮುವಾದಿ ಶಕ್ತಿಗಳು ಇತ್ತೀಚೆಗೆ ಬೆಳೆಯಲು ಏನು ಕಾರಣ ಎಂಬ ಮಹತ್ವದ ಪ್ರಶ್ನೆಯನ್ನು ವಿಶ್ಲೇಷಿಸಬೇಕು. ಕೋಮು ಭಾವನೆಗಳನ್ನು ಉದ್ರೇಕಿಸುವ ಮೂಲಕ ಮಾತ್ರವೇ ಅಲ್ಲ, ಕಾಂಗ್ರೆಸ್ ನೀತಿಗಳ ವಿರುದ್ಧದ ಜನಗಳ ಅಸಂತೃಪ್ತಿಯನ್ನು ಬಳಸಿಕೊಂಡ ಆ ಶಕ್ತಿಗಳು ಬೆಳೆದವು. 1996 ರ ಚುನಾವಣೆಗಳಲ್ಲಿ ಕಂಡು ಬಂದ ಒಂದು ಮುಖ್ಯ ಸಂಗತಿಯೆಂದರೆ ಎಲ್ಲೆಲ್ಲಿ ಕಾಂಗ್ರೆಸ್‌ಗೆ ಹಾಗೂ ಬಿಜೆಪಿಗೆ ಸಮರ್ಥ ಪರ್ಯಾಯವಿತ್ತೋ ಅಲ್ಲೆಲ್ಲಾ ಜನ ಆ ಪರ್ಯಾಯವನ್ನೇ ಆರಿಸಿಕೊಂಡರು. ಅವಿಲ್ಲದಿದ್ದಲ್ಲಿ ಮಾತ್ರ ಕೋಮು ಶಕ್ತಿಗಳು ಬಲ ವರ್ಧಿಸಿಕೊಂಡವು. ಇನ್ನೊಂದು ಸಂಗತಿ ಯೆಂದರೆ ಎಡ ಪಕ್ಷಗಳು ಮಾತ್ರವೇ ಅಲ್ಲ, ಸಂಯುಕ್ತ ರಂಗದ ಇತರ ಪಕ್ಷಗಳು ಕೂಡಾ ಕಾಂಗ್ರೆಸ್ ನೀತಿಗಳನ್ನು ವಿರೋಧಿಸಿಯೇ ಸರಕಾರಗಳನ್ನು ನಡೆಸುವಂತಾಗಿರುವುದು.

> “ತಮಾಷೆಯ ಸಂಗತಿಯೆಂದರೆ ಸರಕಾರ ತನ್ನ ಜವಾಬ್ದಾರಿಗಳನ್ನು ಕೈ ಬಿಡುವಂತಹ ನೀತಿಗಳನ್ನು ಪ್ರತಿಪಾದಿಸುವವರೇ ಸಿಪಿಐ(ಎಂ) ಮೇಲೆ ಬೇಜವಾಬ್ದಾರಿತನದ ಆಪಾದನೆ ಹಾಕುತ್ತಿದ್ದಾರೆ.”

ರಾಜಕೀಯ ಸ್ಥಿರತೆ ಏರ್ಪಡ ಬೇಕಾದರೆ ಕಾಂಗ್ರೆಸ್-ಸಂಯುಕ್ತ ರಂಗ ಸಮ್ಮಿಶ್ರ ಸರಕಾರ ರಚನೆಗೊಳ್ಳಬೇಕು. ಇದು ಬಹಳ ಜನಗಳನ್ನು ನಂಬಿಸಲು ಪ್ರಯತ್ನಿಸುವ ಇನ್ನೊಂದು ವಾದ.

ಸ್ಥಿರತೆ ಏತಕ್ಕಾಗಿ? ಯಾರಿಗೆ?

ಇಲ್ಲಿಯೂ ದೇಶದ ಹಿತಾಸಕ್ತಿಗಳಿಗಿಂತ ವಿವಿಧ ಪಕ್ಷಗಳ ಬಲಾಬಲಗಳ ಅಂಕೆ- ಸಂಖ್ಯೆ, ಲೆಕ್ಕಾಚಾರಕ್ಕೆ ಮೊದಲ ಆದ್ಯತೆ ನೀಡಲಾಗಿದೆ ಎನ್ನಲೇಬೇಕಾಗುತ್ತದೆ. ಕೇವಲ ಒಂದು ವರ್ಷವೂ ಆಗಿಲ್ಲ ಕಾಂಗ್ರೆಸ್ಸನ್ನು ಜನಗಳು ಸ್ಪಷ್ಟವಾಗಿ ತಿರಸ್ಕರಿಸಿ, ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಕೂಡಾ ಜನಗಳ ತೀರ್ಪನ್ನು ಆಗ ಒಪ್ಪಿತು. ಆನಂತರ ತನ್ನ ಧೋರಣೆಗಳ ವಿಮರ್ಶೆ ನಡೆಸದೇನೇ ಸರಕಾರದಲ್ಲಿ ಪಾಲು ಕೇಳುವುದು ಜನಗಳ ತೀರ್ಪಿಗೆ ಬಗೆಯುವ ವಿಶ್ವಾಸಘಾತುಕವಲ್ಲವೆ? ಸ್ಥಿರತೆ ಯಾರಿಗೆ ಎಂಬ ಪ್ರಶ್ನೆಯನ್ನು ಮೊದಲು ಉತ್ತರಿಸ ಬೇಕಾಗುತ್ತದೆ. ಐದು ವರ್ಷ ಪಿ.ವಿ.ನರಸಿಂಹರಾವ್‌ರ ಸ್ಥಿರ ಸರಕಾರವಿರಲಿಲ್ಲವೇ? ಬಾಬ್ರಿ ಮಸೀದಿ ಧ್ವಂಸ, ಕೋಮು ಹಿಂಸಾಚಾರಗಳು, ನಿರಂತರ ಬೆಲೆ ಏರಿಕೆ, ಹೆಚ್ಚೆಚ್ಚು ನಿರುದ್ಯೋಗ ಹಾಗೂ ಜನಗಳಲ್ಲಿ ಹೆಚ್ಚೆಚ್ಚು ಅಭದ್ರತೆಯ ಭಾವನೆ ಮೂಡಿಸಿದ ಅವಧಿಯಲ್ಲವೇ ಅದು? ಸ್ಥಿರತೆಯೆಂಬುದನ್ನು ಜನಗಳ ಜೀವನ ಪರಿಸ್ಥಿತಿ ಅವರ ಭದ್ರತೆಯಿಂದ ತೀರ್ಮಾನಿಸ ಬೇಕೇ ಹೊರತು ಸರಕಾರದ ಕಾಲಾವಧಿ ಯಿಂದಲ್ಲ.

> “ಸ್ಥಿರತೆಯೆಂಬುದನ್ನು ಜನಗಳ ಜೀವನ ಪರಿಸ್ಥಿತಿ ಅವರ ಭದ್ರತೆಯಿಂದ ತೀರ್ಮಾನಿಸ ಬೇಕೇ ಹೊರತು ಸರಕಾರದ ಕಾಲಾವಧಿಯಿಂದಲ್ಲ.”

ಸಿಪಿಐ(ಎಂ) ಬಗ್ಗೆ ಮತ್ತೊಂದು ಟೀಕೆಯೆಂದರೆ ಅದು ಜವಾಬ್ದಾರಿ ಯಿಲ್ಲದೆ ಅಧಿಕಾರ ಚಲಾಯಿಸ ಬಯಸುತ್ತದೆ ಎಂದು. ಕಳೆದ ಎರಡು ದಶಕಗಳಿಂದ ಸಿಪಿಐ(ಎಂ) ಪಶ್ಚಿಮ ಬಂಗಾಳದಲ್ಲಿ ತನ್ನ ಜವಾ ಬ್ದಾರಿ ನಿರ್ವ ಹಿಸುತ್ತಿದೆ, ಬೇರಾವ ಪಕ್ಷಗಳಿಗೂ ಸಾಧ್ಯವಾಗದ ರೀತಿಯಲ್ಲಿ ನಿರ್ವಹಿಸುತ್ತಿದೆ ಎಂಬುದನ್ನು ಇಂತವರಿಗೆ ನೆನಪಿಸಬೇಕಾಗುತ್ತದೆ. ಈಗಿನ ಸಂದರ್ಭದಲ್ಲಿ ಕೇಂದ್ರ ಸರಕಾರದ ಧೋರಣಾ ದಿಕ್ಕಿನ ಮೇಲೆ ಪ್ರಭಾವ ಬೀರುವಷ್ಟು ಶಕ್ತಿ ತನಗಿಲ್ಲವೆಂದು ಆಮೂಲಾಗ್ರ ಚರ್ಚೆಯ ನಂತರ ಸಿಪಿಐ(ಎಂ) ನಿರ್ಧರಿಸಿತು. ಇಂತಹ ಸನ್ನಿವೇಶದಲ್ಲಿ ಸರಕಾರದಲ್ಲಿದ್ದು ನಾವು ಜಾರಿಗೊಳಿಸಬೇಕೆಂದಿರುವ ಅಂಶಗಳನ್ನು ಜಾರಿಗೊಳಿಸಲಾಗದಿರುವುದು ನಮ್ಮಲ್ಲಿ ನಂಬಿಕೆಯಿಟ್ಟಿರುವ ಜನ ವಿಭಾಗಗಳಿಗೆ ಬಗೆದ ವಿಶ್ವಾಸಘಾತವಾಗುತ್ತದೆ. ಅದೇ ರೀತಿ ದೇಶದ ಮತ್ತು ಜನಗಳ ಹಿತಗಳಿಗೆ ವಿರುದ್ಧವೆಂದು ನಾವು ಪರಿಗಣಿಸಿರುವ ನೀತಿಗಳನ್ನು ಜಾರಿಗೊಳಿಸುವುದು ಕೂಡಾ ವಿಶ್ವಾಸಘಾತವಾಗುತ್ತದೆ.

ತಮಾಷೆಯ ಸಂಗತಿಯೆಂದರೆ ಸರಕಾರ ತನ್ನ ಜವಾಬ್ದಾರಿಗಳನ್ನು ಕೈ ಬಿಡುವಂತಹ ನೀತಿಗಳನ್ನು ಪ್ರತಿಪಾದಿಸುವವರೇ ಸಿಪಿಐ(ಎಂ) ಮೇಲೆ ಇಂತಹ ಆಪಾದನೆ ಹಾಕುತ್ತಿದ್ದಾರೆ.

ಜವಾಬ್ದಾರಿ ಯಾರಿಗೆ ಮತ್ತು ಏತಕ್ಕೆ?

ಸಿಪಿಐ(ಎಂ)ಗಂತೂ ಸರಕಾರದ ಜವಾ ಬ್ದಾರಿಯೆಂದರೆ ಜನಗಳ ಆಹಾರ ಭದ್ರತೆ, ಆರೋ ಗ್ಯ,ಶಿಕ್ಷಣ, ಜೀವನ ಪರಿಸ್ಥಿತಿಗಳ ವಲಯಗಳಲ್ಲಿನ ಸಾಮಾಜಿಕ ಕರ್ತವ್ಯಗಳನ್ನು ನೆರವೇರಿಸುವುದು ಎಂದರ್ಥ. ಕಾಂಗ್ರೆಸ್, ಬಿಜೆಪಿ ಮತ್ತು ಸಂಯುಕ್ತ ರಂಗದ ಒಂದು ಪ್ರಬಲ ವಿಭಾಗಕ್ಕೆ - ಒಟ್ಟಾರೆಯಾಗಿ ಹೇಳುವುದಾದರೆ, ಆಳುವ ವರ್ಗಗಳ ಪಕ್ಷಗಳು - ಸರಕಾರ ತನ್ನ ಈ ಜವಾಬ್ದಾರಿಗಳನ್ನು ಕೈ ಬಿಟ್ಟು ಅವನ್ನು ಖಾಸಗಿಯವರಿಗೆ ವಹಿಸಿ ಕೊಡಬೇಕು ಎಂದು ಪ್ರತಿಪಾದಿಸುವಂತವುಗಳು. ಹಾಗಿದ್ದರೆ ಜವಾಬ್ದಾರಿ ತಪ್ಪಿಸಿಕೊಳ್ಳುವವರು ಯಾರು, ಜವಾಬ್ದಾರಿ ನೆರವೇರಿಸುವವರು ಯಾರು? ಜವಾಬ್ದಾರಿಯ ಬಗ್ಗೆ ಮಾತನಾಡುವವರೇ ಸರಕಾರದ ಜವಾಬ್ದಾರಿಯನ್ನು ಕೈ ಬಿಟ್ಟು ದುಡ್ಡಿದ್ದವರಿಗೆ ಮಾತ್ರ ಶಿಕ್ಷಣ, ಆರೋಗ್ಯ ಎಂಬ ಪರಿಸ್ಥಿತಿ ನಿರ್ಮಿಸುತ್ತಿದ್ದಾರೆ.

> “ಸಿಪಿಐ(ಎಂ) ಬಯಸುವ ಅಧಿಕಾರ ಕೇವಲ ವಿವಿಧ ಹುದ್ದೆಗಳನ್ನು ಅಲಂಕರಿಸುವುದಕ್ಕಲ್ಲ. ಸಿಪಿಐ(ಎಂ) ಗೆ ಅಧಿಕಾರವೆಂಬುದು ಈ ಜವಾಬ್ದಾರಿ ಗಳನ್ನು ನಿರ್ವಹಿಸಲು ನೀಡುವ ಶಕ್ತಿ. ಆದ್ದರಿಂದಲೇ ಸದ್ಯದ ಸಂದರ್ಭದಲ್ಲಿ ಸಿಪಿಐ(ಎಂ) ಸಂಯುಕ್ತ ರಂಗವನ್ನು ಬೆಂಬಲಿಸುತ್ತದೆ, ಸರಕಾರದಲ್ಲಿ ಇಲ್ಲ.”

ಸಿಪಿಐ(ಎಂ) ಬಯಸುವ ಅಧಿಕಾರ ಕೇವಲ ವಿವಿಧ ಹುದ್ದೆಗಳನ್ನು ಅಲಂಕರಿಸುವುದಕ್ಕಲ್ಲ. ಸಿಪಿಐ(ಎಂ) ಗೆ ಅಧಿಕಾರವೆಂಬುದು ಈ ಜವಾಬ್ದಾರಿಗಳನ್ನು ನಿರ್ವಹಿಸಲು ನೀಡುವ ಶಕ್ತಿ. ಆದ್ದರಿಂದಲೇ ಸದ್ಯದ ಸಂದರ್ಭದಲ್ಲಿ ಸಿಪಿಐ(ಎಂ) ಸಂಯುಕ್ತ ರಂಗವನ್ನು ಬೆಂಬಲಿಸುತ್ತದೆ, ಸರಕಾರದಲ್ಲಿ ಇಲ್ಲ.

ಇದೇ ಕಾರಣಕ್ಕಾಗಿ ಸಿಪಿಐ(ಎಂ) ಸಂಯುಕ್ತ ರಂಗವನ್ನು ಬಲಪಡಿಸಲು ಪ್ರಯತ್ನಿಸುವುದರೊಂದಿಗೇ ಜನಗಳ, ದೇಶದ ಹಿತಗಳಿಗೆ ವಿರುದ್ಧವಾದುದ್ದೆಂದು ತಾನು ಪರಿಗಣಿಸುವ ನೀತಿಗಳನ್ನು ಟೀಕಿಸುತ್ತದೆ ಕೂಡಾ. ಇದಕ್ಕಾಗಿಯೇ ದೊಡ್ಡ ಬಂಡವಾಳ ಶಾಹಿಗಳು, ಹೊಸ ಆರ್ಥಿಕ ನೀತಿಗಳ ಹಿಂಬಾಲಕರು ನಮ್ಮನ್ನು ‘ಕಾಲ್ತಡೆ’ಗಳು ಎಂದು ಟೀಕಿಸುತ್ತಾರೆ. ಒಂದೆಡೆ ದೇಶದ ಆರ್ಥಿಕವನ್ನು ಒತ್ತೆಯಿಟ್ಟು, ಇನ್ನೊಂದೆಡೆ ಇದಕ್ಕೆ ಬೆಲೆ ತೆರಲು ಜನಸಾಮಾನ್ಯರ ಮೇಲೆ ಹೊರೆ ಹಾಕುವಂತಹ ನೀತಿಗಳನ್ನು ಸಿಪಿಐ(ಎಂ) ಮುಂದೆಯೂ ವಿರೋಧಿಸುತ್ತಲೇ ಇರುತ್ತದೆ. ದೇಶದ ಸಾರ್ವಭೌಮತೆಯನ್ನು ರಕ್ಷಿಸುವ, ದುಡಿಯುವ ಜನಗಳ ಹಿತಾ ಸಕ್ತಿಗಳನ್ನು ರಕ್ಷಿಸುವ ಕೆಲಸ ಇಂತವರಿಗೆ ‘ಅಡ್ಡಿ ಪಡಿಸುವ’ ಕೆಲಸವಾಗಿ ಕಂಡರೆ ಹಾಗೆಯೇ ಆಗಲಿ ಬಿಡಿ. ದೇಶದ ಜನಗಳ ಹಿತಾ ಸಕ್ತಿಗಳ ಬಗ್ಗೆ ಯಾರೊಂದಿಗೂ ಚೌಕಾಸಿ ಸಾಧ್ಯವಿಲ್ಲ.

ರಾಜಕೀಯ ಬಜಾರಿನಲ್ಲಿ ಸಿಪಿಐ(ಎಂ) ಇಂತಹ ಚೌಕಾಸಿ ವ್ಯಾಪಾರಕ್ಕೆ ಇಳಿಯಲಿಲ್ಲ ಎಂಬುದೇ ವಾಸ್ತವವಾಗಿ ಸಿಪಿಐ(ಎಂ) ಮೇಲಿನ ಆಪಾದನೆಗಳ ಸಾರಾಂಶ. ಆದರೆ ದೇಶದಲ್ಲಿ ಈಗ ನಡೆಯುತ್ತಿರುವ ರಾಜಕೀಯ ಮಂಥನದಲ್ಲಿ ಪ್ರಜಾಪ್ರಭುತ್ವ, ಒಕ್ಕೂಟ ತತ್ವ ಹಾಗೂ ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿರುವವರೆಲ್ಲ ಈ ಮೌಲ್ಯಗಳನ್ನು ಎತ್ತಿ ಹಿಡಿಯಲೇ ಬೇಕು. ಆಗ ಮಾತ್ರವೇ ದೇಶವನ್ನು ಇಂದು ಉಳಿಸಿಕೊಂಡು ನಾಳೆ ಬೆಳೆಸಲು ಸಾಧ್ಯ.

> “ರಾಜಕೀಯ ಬಜಾರಿನಲ್ಲಿ ಸಿಪಿಐ(ಎಂ) ಚೌಕಾಸಿ ವ್ಯಾಪಾರಕ್ಕೆ ಇಳಿಯಲಿಲ್ಲ ಎಂಬುದೇ ವಾಸ್ತವವಾಗಿ ಸಿಪಿಐ(ಎಂ) ಮೇಲಿನ ಆಪಾದನೆಗಳ ಸಾರಾಂಶ.”

ಗ್ರಾಮೀಣ ಪ್ರದೇಶಗಳಲ್ಲಿ ಬಡತನದ ನಗ್ನತಾಂಡವ

ಇದು ಗೊತ್ತಿಲ್ಲದ್ದೇನಲ್ಲ.ಗ್ರಾಮೀಣ ಪ್ರದೇಶಗಳನ್ನು ಕಂಡವರಿಗೆ ಇಲ್ಲಿ ಜನರನ್ನು ಕಿತ್ತು ತಿನ್ನುವ ಬಡತನ ಕಣ್ಣಿಗೆ ಕಾಣುತ್ತದೆ. ಆದರೆ ಬರೀ ಗಣ್ಣಿನಿಂದ ಕಾಣುವುದನ್ನು ನೋಡುವುದೇ ಇಲ್ಲವೆಂಬ ಹಠ ತೊಟ್ಟವರ ಮಾತು ಬೇರೆ. ಉದಾರೀಕರಣವಾದಿಗಳು ಉದಾರೀಕರಣ ಬಂದ ಮೇಲೆ ಬಡತನ ಕಡಿಮೆಯಾಯಿತೆಂದು ಸಂಖ್ಯೆಗಳ ಸರಕಸ್ಸು ಮಾಡಿ ಶತಾಯುಗತಾಯು ಪ್ರಯತ್ನ ಮಾಡಿದರು. ಬಡತನ ಕಡಿಮೆ ಆಗಿದೆಯೆಂದು ಘೋಷಿಸಿ ಎಲ್ಲರನ್ನು ನಂಬಿಸುವ ಪ್ರಯತ್ನ ಮಾಡಿದರು. ಆದರೆ ಹೊಟ್ಟೆ ಸುಮ್ಮನಿದ್ದೀತೆ?

ಈಗ ಎಲ್‌ಸಿಎಇಆರ್ ಅಂದರೆ ಅರ್ಥಶಾಸ್ತ್ರೀಯ ಸಂಶೋಧನೆಯ ರಾಷ್ಟ್ರಮಂಡಳಿ ಗ್ರಾಮೀಣ ಪ್ರದೇಶಗಳಲ್ಲಿ ಇಂದೂ ಶೇ 39 ರಷ್ಟು ಜನ ಬಡವರು ಎಂದು ಹೇಳಿದೆ. ಇದರರ್ಥ ಏನು ಗೊತ್ತೆ? ನೂರಕ್ಕೆ 39 ರಷ್ಟು ಜನ ಬಡತನ ರೇಖೆಗಿಂತ ಕೆಳಗೆ ಇದ್ದಾರೆ ಎಂದು. ಗ್ರಾಮೀಣ ಕುಟುಂಬದ ಸರಾಸರಿ ಆದಾಯ ಮಾಸಿಕ 1900 ರೂಪಾಯಿಗಳಾದರೆ ತಲಾ ವಾರ್ಷಿಕ ಆದಾಯ 4485 ರೂಪಾಯಿಗಳು.

ಈ ಮಂಡಳಿಯು ಸಂಗ್ರಹಿಸುವ ಅಂಕೆ - ಸಂಖ್ಯೆಗಳ ಪ್ರಕಾರ ಹೆಚ್ಚು ಆದಾಯವಿರುವ ರಾಜ್ಯಗಳಲ್ಲಿ ಬಡವ ಶ್ರೀಮಂತರ ನಡುವಿನ ವ್ಯತ್ಯಾಸವು ಅಗಾಧ. ಈ ನಿಯಮಕ್ಕೆ ಹೊರತಾದ ರಾಜ್ಯಗಳೆಂದರೆ ಹರ‍್ಯಾಣ ಮತ್ತು ಕೇರಳ. ಕಡಿಮೆ ಆದಾಯದ ರಾಜ್ಯಗಳಲ್ಲಿ ಭಾರತದ ಅರ್ಧಕ್ಕಿಂತ ಹೆಚ್ಚು ಜನ ವಾಸವಾಗಿದ್ದಾರೆ.

ಗ್ರಾಮೀಣ ಭಾರತದಲ್ಲಿ ಶೇ 58 ರಷ್ಟು ಜನಗಳಿಗೆ ದಿನವೊಂದಕ್ಕೆ (ಒಬ್ಬರಿಗೆ) ಬರೀ ಆರು ರೂಪಾಯಿಗಳಷ್ಟು ಆದಾಯ ಲಭ್ಯವಿದೆ. ಇಷ್ಟರಿಂದಲೇ ಆತ ತನ್ನೆಲ್ಲ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕು.

ಗ್ರಾಮೀಣ ಭಾರತದ ಅತಿ ಶ್ರೀಮಂತ ಸಮೂಹವನ್ನು ತೆಗೆದುಕೊಂಡರೆ ಅವರ ವಾರ್ಷಿಕ ಆದಾಯ 86000 ರೂಪಾಯಿಗಳಿಗಿಂತ ಹೆಚ್ಚು. ಆದರೆ ಇವರ ಸಂಖ್ಯೆ ಎಷ್ಟು? ನೂರಕ್ಕೆ ಬರೀ ನಾಲ್ಕರಷ್ಟು ಜನ ಮಾತ್ರ ಈ ಸ್ತರದ ಶ್ರೀಮಂತರು.

ವಿಶ್ವಸಂಸ್ಥೆಯ ಹಣಕಾಸು ನೆರವಿನಿಂದ ಭಾರತೀಯ ಯೋಜನಾ ಆಯೋಗ ಆಯೋಜಿಸಿದ ಈ ಸಮೀಕ್ಷೆ 33,230 ಕುಟುಂಬಗಳನ್ನು ಸಂಪರ್ಕಿಸಿ ಸಂದರ್ಶಿಸಿತು. 1994 ರ ಜನವರಿ ಮತ್ತು ಮೇ ತಿಂಗಳ ನಡುವೆ ನಡೆದ ಈ ಸಮೀಕ್ಷೆ ಇತರ ಹಲವು ವಿಷಯಗಳನ್ನು ಚರ್ಚಿಸಿದೆ. ಶಿಕ್ಷಣ, ಆರೋಗ್ಯ, ಇತ್ಯಾದಿಗಳೂ ಇದರಲ್ಲಿ ಸೇರಿದೆ. ಇದಲ್ಲದೆ 16 ನಗರ ಪ್ರದೇಶಗಳ 2500 ಕುಟುಂಬಗಳ ಬಗ್ಗೆಯೂ ಎಸ್‌ಸಿಎಇಆರ್ ಸಮೀಕ್ಷೆ ನಡೆಸಿದೆ.

ಗ್ರಾಮೀಣ ಪ್ರದೇಶದಲ್ಲಿ ಶೇ 55 ರಷ್ಟು ಆದಾಯ ಇಂದಿಗೂ ಕೃಷಿಯಿಂದಲೇ ಬರುತ್ತದೆ. ಈ ಸಮೀಕ್ಷೆಯ ಪ್ರಕಾರ ಬರೀ ಶೇ 33 ರಷ್ಟು ಕುಟುಂಬಗಳು ಮಾತ್ರ ರೇಷನ್ ವ್ಯವಸ್ಥೆಯನ್ನು ಬಳಸುತ್ತಿವೆ.

ಉದಾರೀಕರಣ ಜನತೆಯ ಜೀವನ ಮಟ್ಟವನ್ನು ಹೆಚ್ಚಿಸುವ ಬದಲು ಅದನ್ನು ಕುಂಠಿತಗೊಳಿಸಿದೆ ಎಂಬುದನ್ನು ಎಲ್ಲಾ ಪ್ರಾಮಾಣಿಕ ಸಮೀಕ್ಷೆಗಳು ತೋರಿಸಿಕೊಟ್ಟಿವೆ. ನಮ್ಮ ಉದಾರೀಕರಣವಾದೀ ಕೇಂದ್ರ ಸರಕಾರಕ್ಕೆ ಇದನ್ನು ಮನಗಂಡು ಸರಿಪಡಿಸುವ ದಾರ್ಷ್ಟ್ಯವಂತೂ ಇಲ್ಲ. ಯಾಕೆಂದರೆ ಈ ಸರಕಾರಗಳು ಸಾಮ್ರಾಜ್ಯಶಾಹಿಗಳ ಕೈಗೊಂಬೆಯಾಗುವತ್ತ ನಡೆದಿವೆ ಅಲ್ಲವೇ?

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಬಡವರ ಬಾಳಿಗೆ ಬೆಂಕಿ ಇಡುವ ಮಿನಿ ಸಿಗರೇಟುಗಳು

ಮಿನಿ ಸಿಗರೇಟುಗಳು ಬಡವರ ಬಾಳಿಗೆ ಹೇಗೆ ಬೆಂಕಿ ಇಡುತ್ತವೆ ಎಂದು ಕೇಳಬಹುದು ನೀವು - ಬೀಡಿ ಉದ್ಯಮದ ಮೇಲೆ ಅವಲಂಬಿಸಿರುವ ಜನ ಲಕ್ಷಗಟ್ಟಲೆ ಇದ್ದಾರೆ. ಬೀಡಿ ಕಟ್ಟುವುದು ಇವರ ಉದ್ಯೋಗ. ಅದೇ ಹೊಟ್ಟೆ ಪಾಡಿನ ದಾರಿ. ಮಿನಿ ಸಿಗರೇಟುಗಳಿಗೆ ತೆರಿಗೆ/ಸುಂಕಗಳ ವಿನಾಯಿತಿ/ರಿಯಾಯಿತಿಗಳಿಂದಾಗಿ ಈ ಮಿನಿ ಸಿಗರೇಟುಗಳು ಬೀಡಿಗಳೊಂದಿಗೆ ಪೈಪೋಟಿಗಿಳಿದಿವೆ. ಹೀಗಿರುವಾಗ ಬೀಡಿಯ ಮಾರುಕಟ್ಟೆ ನಶಿಸಿಹೋಗುತ್ತದೆ. ಆ ಸ್ಥಾನವನ್ನು ಮಿನಿ ಸಿಗರೇಟು ಆಕ್ರಮಿಸಿಕೊಳ್ಳುತ್ತದೆ.

ಮಿನಿ ಸಿಗರೇಟು ಉದ್ಯೋಗ ನೀಡಬಹುದಲ್ಲವೇ ಎಂದು ಕೇಳಬಹುದು, ಇಲ್ಲ ಯಂತ್ರಗಳಿಂದ ಉತ್ಪಾದನೆಯಾಗುವ ಮಿನಿ ಸಿಗರೇಟುಗಳು ಯಂತ್ರಗಳಿಗೇ ಹೆಚ್ಚಿನ ಉದ್ಯೋಗ ನೀಡುತ್ತವೆ. ಯಂತ್ರ ನಡೆಸುವ ಒಬ್ಬಿಬ್ಬರಿಗೆ ಉದ್ಯೋಗ ನೀಡಬಹುದು. ಆದರೆ ಲಕ್ಷ ಲಕ್ಷ ಗಟ್ಟಲೆ ಜನರಿಗೆ ಜಾಗವಿಲ್ಲ.

ಅಂಕೆ-ಸಂಖ್ಯೆಗಳನ್ನು ನೋಡುವುದಾದರೆ ದೇಶದಾದ್ಯಂತ 85 ಲಕ್ಷಕ್ಕೂ ಹೆಚ್ಚು ಜನ ಬೀಡಿ ಉದ್ಯಮದ ಮೇಲೆ ಅವಲಂಬಿಸಿದ್ದಾರೆ. ಇವರುಗಳೆಲ್ಲ ಉದ್ಯೋಗ ಕಳೆದುಕೊಂಡರೆ ಗತಿ ಏನಾಗುತ್ತದೆ?

ಇದು ಉದಾರೀಕರಣ ತಂದ ಪರಿಸ್ಥಿತಿ. ಮಿನಿ ಸಿಗರೇಟುಗಳಿಗೆ ರಿಯಾಯಿತಿ ನೀಡಿರುವುದರಿಂದ ಬಹುರಾಷ್ಟ್ರೀಯ ಕಂಪನಿಗಳಿಗೆ ಮತ್ತು ದೊಡ್ಡ ಕಂಪನಿಗಳಿಗೆ ಇದರಿಂದ ಲಾಭ.

ಕರ್ನಾಟಕ ರಾಜ್ಯವೊಂದನ್ನೇ ತೆಗೆದುಕೊಂಡರೆ 10 ಲಕ್ಷಕ್ಕೂ ಹೆಚ್ಚು ಬೀಡಿ ಕಾರ್ಮಿಕರು ರಾಜ್ಯದಲ್ಲಿದ್ದಾರೆ. ದಿನವೊಂದಕ್ಕೆ 70 ಕೋಟಿ ಬೀಡಿಗಳನ್ನು ಇವರು ತಯಾರಿಸುತ್ತಾರೆ.

ಹಿಂದೆ ಬೀಡಿಯ ಮೇಲೆ ಬರೀ ಆರು ಪೈಸೆಯಿತ್ತು. ಅದೇ ಮಿನಿ ಸಿಗರೇಟುಗಳಿಗೆ 50 ಪೈಸೆ ಇತ್ತು. ಇಂದಿನ ಉತ್ತಮ ತಂತ್ರಜ್ಞಾನ ಮತ್ತು ರಿಯಾಯಿತಿಗಳ ಫಲವಾಗಿ ಮಿನಿ ಸಿಗರೇಟಿನ ಬೆಲೆ ಕಡಿಮೆಯಾಗಿದೆ. ಇದೇ ಅವಧಿಯಲ್ಲಿ ಬೀಡಿಯ ಉತ್ಪಾದನೆಯ ಬೆಲೆ ಹೆಚ್ಚಾಗಿದೆ. ಈಗ ಒಂದು ಸಿಗರೇಟಿನ ಬೆಲೆ 15 ಪೈಸೆಗಳಾದರೆ ಒಂದು ಬೀಡಿಯ ಬೆಲೆ 14 ಪೈಸೆಗಳು. ಇದರಿಂದಾಗಿ ಜನ ಮಿನಿ ಸಿಗರೇಟಿನತ್ತ ವಾಲುತ್ತಾರೆ. ಬೀಡಿಗೆ ಮಾರುಕಟ್ಟೆಯೇ ಇರುವುದಿಲ್ಲ.

ಲಕ್ಷ ಲಕ್ಷ ಜನ ನಿರುದ್ಯೋಗಿಗಳಾದರೆ ಅವರಿಗೆಲ್ಲಿ ಉದ್ಯೋಗ ನೀಡುವುದು, ಉದ್ಯೋಗವಿಲ್ಲದೆ ಈ ಜನ ಬದುಕುವುದಾದರೂ ಹೇಗೆ? ಉದಾರೀಕರಣ ಇದಕ್ಕೆಲ್ಲ ಉತ್ತರ ನೀಡುತ್ತದೆ. ಶ್ರೀಮಂತರಿಗೆ ಲಾಭ ಮಾಡಿಕೊಡುವುದೇ ಮುಖ್ಯ ಉದ್ದೇಶವಾಗಿರುವ ಉದಾರೀಕರಣ ಬಡವರ ಪಾಲಿಗೆ ಕರಾಳ ಕತ್ತಲೆಯನ್ನು ಮಾತ್ರ ತರುತ್ತದೆ.

ಭಾರತದ ಪೇಟೆಂಟ್ ಕಾಯಿದೆ ಬದಲಿಸಲು ಅಮೆರಿಕದ ಪಟ್ಟು

ಭಾರತದ ಪೇಟೆಂಟ್ ಕಾಯಿದೆ ಅಮೆರಿಕನ್ನರಿಗೆ ಅನುಕೂಲವಾಗುವಂತೆ ಬದಲಾಗಬೇಕೆಂದು ಅಮೆರಿಕ ಈಗ ಭಾರತದ ಮೇಲೆ ಒತ್ತಡ ಹೇರುತ್ತಿದೆ. ಹಾಗೆಯೇ ಈ ಕಾಯಿದೆಯ ಬದಲಾವಣೆ ಮಾಡದೇ ಹೋದಲ್ಲಿ ಭಾರತೀಯ ವಿಜ್ಞಾನಿಗಳ ಜತೆ ಕೆಲವು ರಂಗಗಳಲ್ಲಿ ಹೊಂದಿರುವ ಸಹಭಾಗಿತ್ವದಿಂದ ಅಮೆರಿಕ ಹಿಂದೆ ಸರಿಯಲಿದೆ ಎಂದು ಅಮೆರಿಕದ ರಾಯಭಾರಿ ಫ್ರಾಂಕ್ ವಿಸ್ನರ್ ಬೆದರಿಕೆಯನ್ನು ಒಡ್ಡಿದ್ದಾರೆ.

ಭಾರತದ ಪ್ರಸಕ್ತ ಕಾನೂನಿನಲ್ಲಿ ಬೌದ್ಧಿಕ ಆಸ್ತಿ ಹಕ್ಕಿನ ರಕ್ಷಣೆಗೆ ಸೂಕ್ತ ಅವಕಾಶವಿಲ್ಲ. ಪೇಟೆಂಟ್ ಕಾಯಿದೆಯನ್ನು ಬದಲಾಯಿಸದಿದ್ದರೆ ಸಂಶೋಧನೆ ಹಾಗೂ ತರಬೇತಿಯ ಕೆಲವು ಕ್ಷೇತ್ರಗಳಲ್ಲಿ ಸಹಕಾರ ಕೊನೆಗೊಳ್ಳಲಿದೆ ಎಂದಿದ್ದಾನೆ ಆತ.

ಈ ಫ್ರಾಂಕ್ ವಿಸ್ನರ್ ಮಹಾಶಯನ ಈ ಬೆದರಿಕೆಗಳಿಗೆ ಉತ್ತರ ನೀಡಿದ ಭಾರತದ ವೈಜ್ಞಾನಿಕ ಸಮುದಾಯ "ಭಾರತ ಅಮೆರಿಕದ ಈ ಒತ್ತಡ ತಂತ್ರಗಳಿಗೆ ಮಣಿಯುವುದಿಲ್ಲ" ಎಂದಿದ್ದಾರೆ. ಸಿಎಸ್‌ಐಆರ್ ನ ವಿಜ್ಞಾನಿಗಳ ತಂಡ "ಬೇರೆ ದೇಶದವರು ನಮ್ಮ ಮೇಲೆ ಹೆಚ್ಚಿನ ಮಿತಿಗಳನ್ನು ಹೇರುವುದನ್ನು ನಾವು ಸಹಿಸುವುದಿಲ್ಲ" ಎಂದಿದೆ.

ಪತ್ರಿಕಾ ಹೇಳಿಕೆಯೊಂದನ್ನು ಹೊರಡಿಸಿರುವ ಈ ತಂಡ ವಿಜ್ಞಾನ ಮತ್ತು ತಂತ್ರಜ್ಞಾನ ಜಾಗತಿಕ ಸಮುದಾಯದ ಚಟುವಟಿಕೆ. ಭಾರತದ ವಿಜ್ಞಾನ ಮುಕ್ತವಾದದ್ದು ಮತ್ತು ಸ್ನೇಹಪರವಾದದ್ದು. ದೇಶದ ಪ್ರತಿಯೊಬ್ಬ ವಿಜ್ಞಾನಿಗಳು ಭಾರತ ಈ ರಂಗದಲ್ಲಿ ಮಾಡಿರುವ ಸಾಧನೆಯ ಬಗ್ಗೆ ಹೆಮ್ಮೆಪಡುತ್ತಾನೆ. ಹಾಗೆಯೇ ಈ ರಂಗದಲ್ಲಿ ವಿವಿಧ ದೇಶಗಳೊಡನೆ ಸಹಕಾರವನ್ನೂ ಸಹ ಭಾರತ ಬಯಸುತ್ತದೆ" ಎಂದಿದೆ.

ಹೀಗಿರುವಾಗ ಭಾರತದ ವಿಜ್ಞಾನ ತಂತ್ರಜ್ಞಾನಗಳ ಮೇಲೆ ಮಿತಿ ಹೇರಬಯಸುವ ಈ ಪೇಟೆಂಟ್ ಕಾಯಿದೆಯನ್ನು ವಿರೋಧಿಸಲೇ ಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ.

ಈಗಾಗಲೇ ಭಾರತದ ಅರಿಶಿಣ, ಬೇವು ಇತ್ಯಾದಿಗಳ ಪೇಟೆಂಟ್‌ಗಳನ್ನು ಪಾಶ್ಚಿಮಾತ್ಯರು ಹೊಂದಿದ್ದಾರೆ. ಪೇಟೆಂಟ್ ಕಾಯಿದೆಯೇ ಬದಲಾದರೆ ಇನ್ನೇನನ್ನು ಪೇಟೆಂಟ್ ಮಾಡಿ ಗಂಡಾಂತರ ಉಂಟು ಮಾಡುತ್ತಾರೋ ಯಾರಿಗೆ ಗೊತ್ತು?

ಸಿಐರ್‌ಬಿ ಹಗರಣ

ಈಗಂತೂ ಕೆಲವು ದಿನಗಳಿಂದ ಸಿಆರ್‌ಬಿ ಹಗರಣದ ಸುದ್ದಿ ದಿನ ನಿತ್ಯವೂ ಬರುತ್ತಲೇ ಇದೆ. ಬ್ಯಾಂಕೇತರ ಹಣಕಾಸು ಕಂಪನಿಯಾದ ಈ ಸಿಆರ್‌ಬಿ ಕ್ಯಾಪಿಟಲ್ ಮಾರ್ಕೆಟ್ ಎಂಬ ಕಂಪನಿ ಹಲವು ಮಧ್ಯಮ ವರ್ಗದವರಿಗೆ ಮೋಸದ ಚಳ್ಳೇ ಹಣ್ಣು ತಿನ್ನಿಸಿದೆ. ಕಷ್ಟಪಟ್ಟು ದುಡಿದು ಉಳಿತಾಯ ಮಾಡಿದ ಜನ ಸಾಮಾನ್ಯರು ಈಗ ಹಣ ಕಳೆದುಕೊಂಡು ಮೈ ಪರಚಿಕೊಳ್ಳುವಂತಾಗಿದೆ. ಹೆಚ್ಚಿನ ಬಡ್ಡಿ ದೊರೆವ ಆಸೆಯಿಂದ ಈ ಕಂಪನಿಯಲ್ಲಿ ಠೇವಣಿ ಮಾಡಿದವರು ಈಗ ಬಡ್ಡಿ ಹಾಳಾಗಿ ಹೋಗಲಿ ಅಸಲಾದರೂ ದೊರೆಯಲಿ ಎಂಬ ಸ್ಥಿತಿಗೆ ಬಂದು ಮುಟ್ಟಿದ್ದಾರೆ.

ದಿನ ಪತ್ರಿಕೆಗಳ ಮೂಲಕ ಪ್ರಚಾರ ಮಾಡಿಕೊಂಡ ಈ ಕಂಪನಿ ಸ್ಟೇಟ್ ಬ್ಯಾಂಕಿನ ಮಾಜಿ ಅಧ್ಯಕ್ಷ ಡಾ|| ಎಂ.ಕೆ.ಸಿನ್ಹಾರವರನ್ನು ತನ್ನ ಸಿಆರ್‌ಬಿ ಬ್ಯಾಂಕಿಗೆ ಅಧ್ಯಕ್ಷರಾಗುವಂತೆ ಒಪ್ಪಿಸಿತ್ತು. ಈ ಜನಗಳ ಪ್ರಭಾವ ಬಳಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಇಂಡಸ್ ಇಂಡ್ ಬ್ಯಾಂಕ್, ಯುಟಿಐ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ ಹಾಗೂ ಹಲವು ಸಹಕಾರಿ ಬ್ಯಾಂಕುಗಳಿಂದ ಬಹುದೊಡ್ಡ ಮೊತ್ತದ ಸಾಲ ಪಡೆಯುವಲ್ಲಿ ಯಶಸ್ವಿಯಾಯಿತು.

ಈ ಕಂಪನಿಯ ಪ್ರವರ್ತಕರು ಅಪಾರ ಆಸ್ತಿ ಮಾಡಿಕೊಂಡರು. ನಂತರ ಕಂಪನಿಯ ಶಾಖೆಗಳ ಬಾಗಿಲನ್ನು ಮುಚ್ಚಿದರು. ಈಗ ಪ್ರವರ್ತಕರು ಭಾರತದಲ್ಲೇ ಇಲ್ಲ. ಸರಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನ ತನಿಖಾ ದಳಗಳು ತನಿಖೆ ನಡೆಸಿ ಕ್ರಮ ಕೈಗೊಳ್ಳುವ ಮುನ್ನ ಆಗಬೇಕಾದುದೆಲ್ಲ ಆಗಿ ಹೋಗಿದೆ. ಈಗ ತನಿಖೆ ಕ್ರಮ ಇವೆಲ್ಲ ಶವ ಸಂಸ್ಕಾರದಂತೆ. ಆದರೂ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಸರಕಾರದ ಬಗ್ಗೆ ಜನ ತೀವ್ರ ಟೀಕೆ ಮಾಡುತ್ತಿದ್ದಾರೆ. ಜನ ಎಚ್ಚೆತ್ತು ಕೊಳ್ಳುತ್ತಿರುವುದರ ಲಕ್ಷಣ ಇದು. ಉದಾರೀಕರಣವೆಂದರೆ ಹಗಲು ದರೋಡೆ ಎಂಬುದನ್ನು ಎತ್ತಿ ತೋರಿಸಿದೆ ಸಿಆರ್‌ಬಿ ಹಗರಣ ಅಲ್ಲವೇ?

ಪೆಟ್ರೋಲಿಯಂ ಪದಾರ್ಥಗಳ ಬೆಲೆಯೇರಿಕೆಯ ಪ್ರಶ್ನೆ: ಕೆಲವು ಅಂಕಿ-ಅಂಶಗಳು

ಸಿಪಿಐ(ಎಂ) ಮುಖಂಡರು ಮೇ 25 ರಂದು ಸಂಯುಕ್ತ ರಂಗದ ಚಾಲನಾ ಸಮಿತಿಯ ಸಭೆಯಲ್ಲಿ ಮಂಡಿಸಿದ ತಥ್ಯಗಳನ್ನು, ಪರ್ಯಾಯಗಳನ್ನು ಪಟ್ಟಿ ಮಾಡುವ ಮೊದಲು 'ತೈಲನಿಧಿ' ಅಂದರೇನು ಎಂದು ತಿಳಿಯೋಣ.

1973 ರಲ್ಲಿ ತೈಲ ಉತ್ಪಾದಿಸಿ ರಫ್ತು ಮಾಡುವ ದೇಶಗಳು ಬೆಲೆಗಳಲ್ಲಿ ತೀವ್ರ ಏರಿಕೆ ಮಾಡಿದ್ದರಿಂದ ಉಂಟಾದ ಪರಿಸ್ಥಿತಿಯಲ್ಲಿ 1975 ರಲ್ಲಿ ಸೃಷ್ಟಿಸಿದ ನಿಧಿಯಿದು. ಪೆಟ್ರೋಲಿಯಂ ಉತ್ಪನ್ನಗಳ ಆಮದಿಗೆ ಹಣಕಾಸು ಒದಗಿಸಲು ರಚಿಸಿದ ಒಂದು ಸ್ವಯಂ ಸಮತೋಲನದ ಖಾತೆಯಿದು. ಪೆಟ್ರೋಲಿಯಂ ಉತ್ಪನ್ನಗಳ ಮಾರಾಟದಿಂದ ಬಂದ ಆದಾಯ ಆ ಖಾತೆಗೆ ಹೋಗಬೇಕು. ಯಾವುದೇ ಪೆಟ್ರೋಲಿಯಂ 'ಉತ್ಪನ್ನಗಳಿಗೆ ಸರಕಾರ ಸಬ್ಸಿಡಿ ಕೊಡಬಯಸಿದರೆ, ತೈಲನಿಧಿ ಖಾತೆಗೆ ಅದಕ್ಕೆ ಸಮನಾಗಿ ಭರ್ತಿ ಮಾಡಿ ಕೊಡಲಾಗುವುದು ಎಂದೂ ನಿರ್ಧರಿಸಲಾಗಿತ್ತು. ಆದರೆ ಸರಕಾರ ಇದರ ಬದಲು ಒಂದು ಪೆಟ್ರೋಲಿಯಂ ಉತ್ಪನ್ನದ ಬೆಲೆಯೇರಿಸಿ ಬಂದ ಲಾಭದಿಂದಲೇ ಇನ್ನೊಂದಕ್ಕೆ ಸಬ್ಸಿಡಿ ಒದಗಿಸುತ್ತಿದೆ. ಉದಾಹರಣೆಗೆ, ಪೆಟ್ರೋಲ್ ಬೆಲೆ ವಿಪರೀತ ಹೆಚ್ಚಿಸಿ, ಸೀಮೆಎಣ್ಣೆಗೆ ಸಬ್ಸಿಡಿ ಕೊಡುತ್ತದೆ - ಹೀಗೆ ನಿರ್ಧರಿಸಿದಂತೆ ಸರಕಾರದ ಬಜೆಟ್‌ನಿಂದ ಈ ಸಬ್ಸಿಡಿ ಬರದೆ ತೈಲನಿಧಿಯಿಂದಲೇ ಬರುತ್ತಿದೆ.

. ಈಗ ಅಡಿಗೆ ಅನಿಲ, ರಾಸಾಯನಿಕ ಗೊಬ್ಬರ, ಸೀಮೆಎಣ್ಣೆ ಇತ್ಯಾದಿಗಳಿಗೆ 18400 ಕೋಟಿ ರೂ. ಸಬ್ಸಿಡಿ ಕೊಡುತ್ತಿರುವುದಾಗಿ ಸರಕಾರ ಹೇಳುತ್ತಿದೆ. ಆದರೆ ಪೆಟ್ರೋಲ್ ಮಾರಿ ಪಡೆದ 9000 ಕೋಟಿ ರೂ. ನಷ್ಟು ಲಾಭದ ಬಗ್ಗೆ ಚಕಾರವೆತ್ತುವುದಿಲ್ಲ. ಅಂದರೆ ವಾಸ್ತವವಾಗಿ ಅದು ನೀಡುತ್ತಿರುವ ಸಬ್ಸಿಡಿ 9000 ಕೋಟಿ ರೂ.ಗಳಷ್ಟು ಮಾತ್ರ.

. ಈಗ ತೈಲನಿಧಿ ಕೊರತೆ 15500 ಕೋಟಿ ರೂ. ಆದರೆ ಮಾರ್ಚ್ 31, 1989 ರಂದು 8900 ಕೋಟಿ ರೂಗಳ ಮಿಗುತಾಯ ತೈಲನಿಧಿ ಇತ್ತು. ಅದು ಎಲ್ಲಿಗೆ ಹೋಯಿತು? ಹಣಕಾಸು ಇಲಾಖೆ ಅದನ್ನು ಬಜೆಟ್ ಕೊರತೆ ತಗ್ಗಿಸಲು ದುರುಪಯೋಗಪಡಿಸಿಕೊಂಡಿದ್ದರಿಂದ ಮಾರ್ಚ್ 31, 1993 ರ ವೇಳೆಗೆ ಅದು ಅರ್ಧದಷ್ಟು ಎಂದರೆ 4429 ಕೋಟಿ ರೂ.ಗಳಿಗಿಳಿಯಿತು. ಪ್ರಸ್ತುತ ಬ್ಯಾಂಕ್‌ದರಗಳಲ್ಲಿ ಹಣಕಾಸು ಇಲಾಖೆ ದುರುಪಯೋಗಪಡಿಸಿಕೊಂಡ ಈ ಹಣವನ್ನು ಹಿಂದಿರುಗಿಸಿದರೆ 27,849 ಕೋಟಿ ರೂಗಳಾಗುತ್ತದೆ. ಸರಕಾರದ ಲೆಕ್ಕಾಚಾರದ ಪ್ರಕಾರ ಮಾರ್ಚ್ 31, 1998 ರಲ್ಲಿ ತೈಲನಿಧಿ ಕೊರತೆ 24,800 ಕೋಟಿ ರೂ. ಅಂದರೆ ತೈಲನಿಧಿಯ ಕೊರತೆ ನಿಜವಾಗಿ ಇಲ್ಲವೇ ಇಲ್ಲ ಎಂದಾಗುವುದಿಲ್ಲವೇ?

. 1997-98 ರ ಬಜೆಟ್‌ನಲ್ಲಿ ತೈಲವಲಯದಲ್ಲಿ ಅಬಕಾರಿ ಸುಂಕ ಮತ್ತು ಕಸ್ಟಮ್ಸ್ ಸುಂಕಗಳಿಂದ ನಿರೀಕ್ಷಿಸುವ ಆದಾಯ 19675.2 ಕೋಟಿ ರೂ. ಅಂದರೆ ಈಗಿರುವ ತೈಲನಿಧಿ ಕೊರತೆಗಿಂತ ಸುಮಾರು 4000 ಕೋಟಿ ರೂ. ಹೆಚ್ಚು. ವಾಸ್ತವವಾಗಿ ಈ ಸುಂಕಗಳು ಜನ ಸಾಮಾನ್ಯರ ಮೇಲೆ ಹೊರೆಯನ್ನು ದಾಟಿಸುವ ಒಂದು ಅನೈತಿಕ ವಿಧಾನ. ಅದು ಹೇಗೆಂದು ನೋಡೋಣ. ಒಂದು ಉದಾಹರಣೆ ನೋಡಿ - ಸರಕಾರ 100 ರೂ.ಗಳ ಪೆಟ್ರೋಲ್ ಆಮದು ಮಾಡಿದೆಯೆಂದಿಟ್ಟುಕೊಳ್ಳಿ. ಅದಕ್ಕೆ 30% ಸುಂಕ ಹಾಕಿ ಬೆಲೆಯನ್ನು 130 ರೂ. ಮಾಡುತ್ತವೆ. ನಂತರ 10 ರೂ. ಸಬ್ಸಿಡಿ ಕೊಡುತ್ತವೆ. ನಂತರ ಈ ಸಬ್ಸಿಡಿಯ 'ಖರ್ಚನ್ನು ಹೊಂದಿಸಲು' ಮತ್ತೆ ಬೆಲೆಗಳನ್ನು ಏರಿಸುತ್ತದೆ. ನಿಜವಾಗಿ ಈ ಸುಂಕ ಹಾಕಿರದಿದ್ದರೆ ಸಬ್ಸಿಡಿಯ ಅಗತ್ಯವೇ ಬರುತ್ತಿರಲಿಲ್ಲ. ಈ ರೀತಿ ಆದಾಯ ಸಂಗ್ರಹಿಸಲೆಂದು ಅಬಕಾರಿ, ಆಮದು ಸುಂಕಗಳ ಮೂಲಕ ಜನ ಸಾಮಾನ್ಯರ ಮೇಲೆ ಹೊರೆ ಹಾಕುವ ಬದಲು ಸರಕಾರ ಸಿರಿವಂತರ ಮೇಲೆ ತೆರಿಗೆ ಹಾಕಬಾರದೇಕೆ? - ಇದು ಸಿಪಿಐ(ಎಂ)ನ ಪ್ರಶ್ನೆ ಮಾತ್ರವಲ್ಲ, ಬಹುಪಾಲು ಜನರ, ದೇಶದ ದೃಷ್ಟಿಯಿಂದ ಯೋಚಿಸುವವರೆಲ್ಲಾ ಕೇಳುವ ಪ್ರಶ್ನೆ. ಬಜೆಟ್‌ನಲ್ಲಿ ಸಿರಿವಂತರಿಗೆ 20,000 ಕೋಟಿ ರೂಗಳ ರಿಯಾಯ್ತಿಗಳನ್ನು ಕೊಡುವ ಬದಲು ತೈಲ ಉತ್ಪನ್ನಗಳ ಮೇಲಿನ ಈ ಸುಂಕಗಳನ್ನು ತಪ್ಪಿಸಲು ಸಾಧ್ಯವಿರಲಿಲ್ಲವೇ? ಆಗ ಈ ತೈಲನಿಧಿ ಕೊರತೆಯಾಗುತ್ತಿರಲಿಲ್ಲ. ಬದಲಿಗೆ 4175 ಕೋಟಿ ರೂ. ಮಿಗುತಾಯವಾಗುತ್ತಿತ್ತು. ವಾಸ್ತವವಾಗಿ ತೈಲ ಬೆಲೆಗಳನ್ನು ಇಳಿಸಬಹುದಾಗಿತ್ತು. ಸರಕಾರ ಈ ದಾರಿಯ ಬಗ್ಗೆ ಏಕೆ ಯೋಚಿಸಲಿಲ್ಲ?

. ಕೊರತೆಯನ್ನು ತುಂಬಿಸಲು ಇನ್ನೂ ಕೆಲವು ದಾರಿಗಳಿವೆ. ಉದಾ: ನೈಸರ್ಗಿಕ ಅನಿಲದ ಬೆಲೆಯಲ್ಲಿ ಎರಡು ರೀತಿಯ ಬೆಲೆಗಳನ್ನು ವಿಧಿಸುವುದು. ಭಾರತದಲ್ಲಿ ನೈಸರ್ಗಿಕ ಅನಿಲದ ಬೆಲೆ ಅಂತರ‍್ರಾಷ್ಟ್ರೀಯ ಮಟ್ಟಕ್ಕಿಂತ ಬಹಳಷ್ಟು ಕಮ್ಮಿ. ಸಾವಿರ ಘನ ಮೀಟರಿಗೆ 2470 ರೂ. ಇದಕ್ಕೆ ಪರ್ಯಾಯವಾದ ಅಡುಗೆ ಅನಿಲದ ಖರ್ಚು ಟನ್ನಿಗೆ 23669 ರೂ. ನೈಸರ್ಗಿಕ ಅನಿಲದಲ್ಲಿ 40% ರಷ್ಟನ್ನು ಪ್ರಧಾನವಲ್ಲದ, ಆದ್ಯತೆಯಿಲ್ಲದ ಉದ್ದಿಮೆಗಳಲ್ಲಿ ಬಳಸಲಾಗುತ್ತಿದೆ. ಇದರ ಬೆಲೆಯನ್ನು ಕೇವಲ 1000 ರೂಗಳಷ್ಟು ಏರಿಸಿದರೆ(ಕಳೆದ ಏಳು ವರ್ಷಗಳಲ್ಲಿ ಏರಿಸಿಯೇ ಇಲ್ಲ) ಸರಕಾರಕ್ಕೆ 2000 ಕೋಟಿ ರೂ. ಆದಾಯ ಬರುತ್ತದೆ. ಅದ್ದರಿಂದ ಇಂತಹ ವಲಯಗಳು ಸ್ವಲ್ಪವೇ ಹೆಚ್ಚು ಬೆಲೆ ತೆರುವಂತೆ ಮಾಡಿದರೆ ಪ್ರತಿವರ್ಷ ಕನಿಷ್ಟ 5000 ಕೋಟಿ ರೂ. ಆದಾಯ ಬರುತ್ತದೆ.

. ದೇಶೀ ತೈಲ ಉತ್ಪನ್ನವನ್ನು ಹೆಚ್ಚಿಸಿ ತೈಲ ಆಮದಿನ ಖರ್ಚನ್ನು ಇಳಿಸಬಹುದು. ಆದರೆ ಉದಾರೀಕರಣದ ಅವಧಿಯಲ್ಲಿ ಇವನ್ನು ವ್ಯವಸ್ಥಿತವಾಗಿ ನಿರ್ಲಕ್ಷಿಸಲಾಗುತ್ತಿದೆ. ತೈಲ ಉದ್ದಿಮೆ ಅಭಿವೃದ್ಧಿ ಮಂಡಳಿಯಲ್ಲಿ ಸಂಗ್ರಹವಾಗಿರುವ ತೈಲದ ಅಧಿಕ ತೆರಿಗೆ(ಸೆಸ್) ಮೊತ್ತ ಮಾರ್ಚ್ 31, 1997 ರಂದು 28,900 ಕೋಟಿರೂ. ಇದರಲ್ಲಿ ತೈಲ ಉದ್ದಿಮೆಗೆ ನೀಡಿದ್ದು ಕೇವಲ 902 ಕೋಟಿ ರೂ. ಈ ಇಡೀ ಹಣವನ್ನು ತೈಲ ವಲಯಕ್ಕೆ ವರ್ಗಾಯಿಸಿದರೆ ದೇಶೀ ಉದ್ದಿಮೆಯ ಅಭಿವೃದ್ಧಿಗೆ ಬೇಕಾದ ಸಂಪನ್ಮೂಲ ಸಿಕ್ಕಂತಾಗುತ್ತದೆ. ಆಗ ನಮ್ಮ ತೈಲ ಕಂಪನಿಗಳು ಅಂತರ‍್ರಾಷ್ಟ್ರೀಯ ಸಾಲಿಗರ ಮುಂದೆ ಕೈಯೊಡ್ಡಬೇಕಾಗಿ ಬರುವುದಿಲ್ಲ.

. ವಾಸ್ತವವಾಗಿ ಅಂತರ‍್ರಾಷ್ಟ್ರೀಯ ತೈಲ ಬೆಲೆಗಳು ಇಳಿಯುತ್ತಿವೆ. ಇದಾಗಲೇ ತೈಲ ಈಗ ಹಿಂದಿಗಿಂತ ಮಾರುಕಟ್ಟೆಗೆ ಬರುವ ಸಾಧ್ಯತೆ ಇರುವುದರಿಂದ ಈ ಇಳಿಕೆ ಮುಂದುವರಿಯಬಹುದು. ಆದರೂ ತೈಲ ನಿಧಿ ಕೊರತೆ ಬೆಳೆಯುತ್ತಲೇ ಇದ್ದರೆ, ಅದಕ್ಕೆ ಕಾರಣ ಸರಕಾರ ಈ ಉತ್ಪನ್ನಗಳ ಮೇಲೆ ಹಾಕುವ ಸುಂಕಗಳು ಮತ್ತು ತೆರಿಗೆಗಳು. ಈ ಭಾರವನ್ನು ಜನಸಾಮಾನ್ಯರೇ ಹೊರಬೇಕು ಎನ್ನುವುದು ಸರಕಾರದ ವಾದದ ಹೊರತಾಗಿಲ್ಲವೇ ಮತ್ತೇನು?

ಈಗ ಹೇಳಿ ನಿಜವಾಗಿಯೂ ಬೆಲೆಯೇರಿಕೆಗೆ ಬೇರೆ ದಾರಿಯೇ ಇಲ್ಲವೇ?

ದೇಶದೊಳಗೆ



ಬಿಹಾರ ಭೂಮಾಲಕರ ಭಯೋತ್ಪಾದನೆಗೆ ಕೃಷಿಕಾರ್ಮಿಕರಿಂದ ಪ್ರತಿಸವಾಲು

ಮೇ17 ರಂದು ಬಿಹಾರದ ಸಮಸ್ತೀಪುರ ಜಿಲ್ಲೆಯಲ್ಲಿ ಸಕ್ಪೋಹನ್ ಎಂಬ ಹಳ್ಳಿಯಲ್ಲಿ ಸಾವಿರಾರು ಕೃಷಿ, ಕೂಲಿಕಾರರು, ರೈತರು ಸೇರಿ ಮೇಲ್ಜಾತಿ ಭೂ ಮಾಲಕರು ಕೃಷಿಕೂಲಿಕಾರರು ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಬಿಹಾರ ಕಾರ್ಯದರ್ಶಿಯವರ ಮೇಲೆ ನಡೆಸುತ್ತಿರುವ ಸಶಸ್ತ್ರ ಧಾಳಿಗಳ ವಿರುದ್ಧ ಪ್ರತಿಭಟನೆಯ ಬಲವಾದ ದನಿಯನ್ನು ಮೊಳಗಿಸಿದರು.

"ಅಲ್ಲಿ ನಮ್ಮ ಮುಖಂಡರು ಹಾಗೂ ಕಾರ್ಯಕರ್ತರ ಮೇಲೆ ಧಾಳಿಯಿಟ್ಟಿದ್ದು ಇದೇ ಮೊದಲ ಸಲವೇನಲ್ಲ" ಎಂದಿರುವ ಅಖಿಲ ಭಾರತ ಕೃಷಿ ಕೂಲಿಕಾರರ ಸ:ಘದ ಕೇಂದ್ರ ಸಮಿತಿ ಗ್ರಾಮ ಪ್ರಧಾನ ಚುನಾವಣೆಯಲ್ಲಿ ಸಿಪಿಐ(ಎಂ) ಅಭ್ಯರ್ಥಿ ಯನ್ನು ಅಲ್ಲಿ ಕೊಲೆ ಮಾಡಲಾಗಿತ್ತು. ನಂತರ ಒಬ್ಬ ಕೃಷಿಕೂಲಿಕಾರನನ್ನು ಹತ್ಯೆ ಮಾಡಲಾಯಿತು ಎಂದಿದೆ.

ಈ ಗ್ರಾಮ ಶೋಷಣೆ ಮತ್ತು ದಮನದ ವಿರುದ್ಧ ನಿರಂತರ ಹೋರಾಟದ ಒಂದು ರಣರಂಗ. ಸಿಪಿಐ(ಎಂ)ನ ರಾಮ್‌ದೇವ್ ವರ್ಮಾ ಶಾಸಕರಾಗಿರುವ ವಿಭೂತಿಪುರ ಚುನಾವಣಾ ಕ್ಷೇತ್ರದ ವ್ಯಾಪ್ತಿಗೆ ಬರುವ ಗ್ರಾಮ ಇದು. ಒಂದು ವಾರದ ಹಿಂದೆ ಮೇಲ್ಜಾತಿಯ ಭೂ ಮಾಲಕರ ಅಮಾನುಷ ವರ್ತನೆಗೆ ರಾಜ್ಯ ಕೃಷಿಕೂಲಿಕಾರರ ಶಾಂತಿದಾಸ್ ನ ಕೈ ಮತ್ತು ಕಾಲು ಎರಡೂ ಬಲಿಯಾದವು. ಅಖಿಲಭಾರತ ಕೃಷಿಕೂಲಿಕಾರರ ಸಂಘ ಬಿಹಾರ ರಾಜ್ಯ ಕಾರ್ಯದರ್ಶಿ ರಾಮನಾಥ್ ಮಹತೋ ಮನೆಯ ಮೇಲೂ ಧಾಳಿ ನಡೆಯಿತು. ಇತ್ತೀಚಿನ ಅವರ ಧಾಳಿ ಸಿಪಿಐ(ಎಂ) ನ ಪ್ರಮುಖ ಕಾರ್ಯಕರ್ತರನ್ನು ಮುಗಿಸಿ ಬಿಡುವ ಉದ್ದೇಶದಿಂದ ಕೂಡಿತ್ತು. ಆದರೆ ತಕ್ಷಣ ಗ್ರಾಮಸ್ಥರು ನೆರೆದು ಪ್ರತಿಸವಾಲೆಸೆದುದರಿಂದ ಯಾವುದೇ ಸಾವು- ನೋವುಗಳುಂಟಾಗಲಿಲ್ಲ.

ಈ ಹಲ್ಲೆಗಳ ವಿರುದ್ಧ ನಡೆದ ಮತ ಪ್ರದರ್ಶನದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಅವರನ್ನುದ್ದೇಶಿಸಿ ಮಾತನಾಡುತ್ತಾ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಎ.ವಿ.[illegible]ರಾಘವನ್ ಗ್ರಾಮೀಣ ಶೋಷಿತರು ಮತ್ತು ದಲಿತರು ತಮ್ಮ ಮೂಲಭೂತ ಹಕ್ಕುಗಳಿಗಾಗಿ ಹೋರಾಟಕ್ಕಿಳಿದಿರುವಾಗಲೇ ಅವರ ಐಕ್ಯತೆಯನ್ನು ಮುರಿದು, ಅವರ ಗಮನವನ್ನು ಬೇರೆಡೆಗೆ ಸೆಳೆಯಲು ಭೂ ಮಾಲಕರು ಇಂತಹ ಹಲ್ಲೆಗಳಿಗಿಳಿಯುತ್ತಿದ್ದಾರೆ ಎಂದರು.

ಪ್ರತಿ ಹೊಸ ಹಲ್ಲೆಗೆ ಹೆಚ್ಚು ಶಕ್ತಿಶಾಲಿ ಪ್ರತಿರೋಧಗಳನ್ನು ರೂಪಿಸಿಕೊಳ್ಳುತ್ತಿರುವ ಜನಗಳನ್ನು ಕೃಷಿಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷ ಸಾರಂಗಧರ್ ಪಾಸ್ವಾನ್ ಹಾಗೂ ಅಖಿಲ ಭಾರತ ಕಾರ್ಯದರ್ಶಿಗಳು ಅಭಿನಂದಿಸಿದರು. ದಮನದ ಮೂಲಕ ಆಡಳಿತ ನಡೆಸಬಯಸುವವರಿಗೆ ಇದೊಂದು ಪಾಠವಾಗಬೇಕು ಎಂದು ಅವರು ಹೇಳಿದರು. ಇಂತಹ ಪ್ರಯತ್ನಗಳು ಈಡೇರವು ಎಂದೂ ಅವರು ಖಡಾಖಂಡಿತ ವಾಗಿ ನುಡಿದರು. ಎಂ.ಎಲ್.ಎ.ಗಳಾದ ರಾಮ್‌ದೇವ್ ವರ್ಮಾ ಹಾಗೂ ರಾಜೇಂದ್ರ ಸಿಂಗ್ ಕೃಷಿ ಕೂಲಿಕಾರರ ಬಗ್ಗೆ ಭೂಮಾಲಕರ ರಾಕ್ಷಸೀ ಮನೋಭಾವದ ವಿರುದ್ಧ ಎಚ್ಚರಿಕೆ ನೀಡುತ್ತಾ, ತಪ್ಪಿತಸ್ಥರನ್ನು ಹಿಡಿಯುವಲ್ಲಿ ಪೋಲೀಸರ ನಿಷ್ಕ್ರಿಯತೆಯನ್ನು ಟೀಕಿಸಿದರು ಹಾಗೂ ಆಡಳಿತ ಕೂಡಲೇ ಅವರ ಮೇಲೆ 307 ನೇ ಸೆಕ್ಷನ್ ಅಡಿಯಲ್ಲಿ ಆಪಾದನೆಗೆ ಗುರಿಪಡಿಸಬೇಕೆಂದು ಆಗ್ರಹಿಸಿದರು.

ಎಲ್.ಡಿ.ಎಫ್. ಸರಕಾರಕ್ಕೆ ಒಂದು ವರ್ಷ

ಕೇರಳದಲ್ಲಿ ಮತ್ತೆ ಎಲ್.ಡಿ.ಎಫ್. ಸರಕಾರ ರಚನೆಗೊಂಡು ಒಂದು ವರ್ಷವಾಗಿದೆ. ಈ ಸಂದರ್ಭದಲ್ಲಿ ಕೇರಳದ ಎಲ್ಲಾ ಜಿಲ್ಲೆಗಳಲ್ಲಿ ಮೇ 20 ರಿಂದ ಜೂನ್ 10 ನಡುವೆ ಹಲವು ಅಭಿವೃದ್ಧಿಯೋಜನೆಗಳನ್ನು ಆರಂಭಿಸಲು ನಮ್ಮ ಸಚಿವ ಸಂಪುಟ ನಿರ್ಧರಿಸಿರುವುದಾಗಿ ಮುಖ್ಯಮಂತ್ರಿ ಈಗಾಗಲೇ ಪ್ರಕಟಿಸಿದ್ದಾರೆ. ಅಲ್ಲದೆ ಎಲ್ಲಾ ಪಂಚಾಯತುಗಳಲ್ಲಿ ವಿಚಾರಣಾ ಸಭೆಗಳನ್ನು ನಡೆಸಿ ಬಡತನದ ರೇಖೆಯ ಕೆಳಗಿರುವ ಎಲ್ಲಾ ಕುಟುಂಬಗಳಿಗೆ ಅರ್ಧ ಬೆಲೆಯಲ್ಲಿ ಹತ್ತು ಕೆ.ಜಿ ಅಕ್ಕಿ ನೀಡುವ ಯೋಜನೆಯ ವಿವರಣೆಗಳನ್ನು ನೀಡಲಾಗುವುದೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಜೂನ್ 1 ರಿಂದ ಈ ಯೋಜನೆಯಡಿ ರಾಜ್ಯದ 45 ಲಕ್ಷ ಕುಟುಂಬಗಳಲ್ಲಿ 42% ರಷ್ಟು ಈ ಕೇಂದ್ರ ಯೋಜನೆಯ ಸಂರಕ್ಷಣೆ ಪಡೆ ಯುತ್ತಾರೆ ಎಂದು ಅಂದಾಜು ಮಾಡ ಲಾಗಿದೆ. ಅಲ್ಲದೆ ಶಾಲಾವಲಯದ ಪಠ್ಯಪುಸ್ತಗಳ ಬೆಲೆಯನ್ನು ಹೆಚ್ಚಿಸುವುದಿಲ್ಲ ಎಂದೂ ಅವರು ಹೇಳಿದ್ದಾರೆ.

ಆತಂಕಕಾರಿ ರೀತಿಯಲ್ಲಿ ಹೆಚ್ಚುತ್ತಿರುವ ರಸ್ತೆ ಅಪಘಾತಗಳ ಸಂಖ್ಯೆಯನ್ನು ಇಳಿಸಲು ಪ್ರಯಾಣವನ್ನು ಸುರಕ್ಷಿತಗೊಳಿಸಲು ರಸ್ತೆ ಸಂರಕ್ಷಣೆಗೆ ಸಂಬಂಧಪಟ್ಟ ಎಲ್ಲಾ ಕ್ರಮಗಳ ಪರಾಮರ್ಶೆ ನಡೆಸಲು ಒಂದು ಉನ್ನತ ಮಟ್ಟದ ಸಮಿತಿಯನ್ನು ನೇಮಿಸಲು ನಿರ್ಧರಿಸಲಾಗಿದೆ ಎಂದೂ ನಾಯನಾರ್ ಪತ್ರಕರ್ತರೊಂದಿಗೆ ಮಾತನಾಡುತ್ತಾ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ : ಎಲ್ಲಾ ಜಿಲ್ಲೆಗಳಲ್ಲಿ ಸಾಕ್ಷರತಾ ವಿದ್ಯಾಲಯ

'ಬಂಗೀಯ ಸಾಕ್ಷರತಾ ಪ್ರಚಾರ ಸಮಿತಿ' ಈಗ ರಾಜ್ಯದ ಮಿಡ್ನಾಪುರ ಮತ್ತು ಕಲ್ಕತ್ತಾದಲ್ಲಿ ಎರಡು 'ವಿದ್ಯಾಸಾಗರ ವಿದ್ಯಾಲಯ'ಗಳನ್ನು ನಡೆಸುತ್ತಿದೆ. ಮುಂಬರುವ ದಿನಗಳಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಇಂತಹ ಶಾಲೆಗಳನ್ನು ತೆರೆಯಲಾಗುವುದು ಎಂದೂ ಈ ಸಮಿತಿಯ ಚಟುವಟಿಕೆಗಳ ಹಿಂದಿರುವ ಮಾರ್ಗದರ್ಶಕ ಶಕ್ತಿಯಾದ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರೂ ಆದ ಬಿಮಾನ್ ಬಸು ಹೇಳಿದ್ದಾರೆ. ಅವರು ನವ ಸಾಕ್ಷರರಿಗೆ ಎರಡು ಬಂಗಾಳಿ ಪಠ್ಯಪುಸ್ತಕಗಳನ್ನು ಅಧಿಕೃತವಾಗಿ ನೀಡುವ ಸಮಾರಂಭವೊಂದರಲ್ಲಿ ಮಾತನಾಡುತ್ತಿದ್ದರು.

ವಿಶೇಷವಾಗಿ ಗ್ರಾಮೀಣ ಜನಗಳಲ್ಲಿ ಸಾಕ್ಷರತೆ ಹರಡಿಸುವಲ್ಲಿ ಪ್ರಮುಖ ಕೆಲಸ ನಿರ್ವಹಿಸುತ್ತಿರುವ ಇಂತಹ 6 ವಿದ್ಯಾಲಯಗಳನ್ನು ಮುಂದಿನ ತಿಂಗಳು ಗಳಲ್ಲೇ ತೆರೆಯಲಾಗುವುದು. ಶಾಲೆಯನ್ನು ಮಧ್ಯದಲ್ಲೇ ಬಿಟ್ಟುಹೋಗುವವರನ್ನು ಕೂಡಾ ಇಂತಹ ಶಾಲೆಗಳಿಗೆ ಸೇರಿಸಿಕೊಳ್ಳಬೇಕೆಂದು ಸಲಹೆ ಮಾಡಲಾಗಿದೆ. 7ನೇ ತರಗತಿಯವರೆಗೆ ಶಿಕ್ಷಣ ನೀಡುವ ವ್ಯವಸ್ಥೆ ಈ ಶಾಲೆಗಳಲ್ಲಿದೆ. ಪುಕ್ಕಟೆ ಪುಸ್ತಕ ಮತ್ತು ಬರವಣಿಗೆ ಸಾಧನಗಳೊಂದಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಯೂ ಈ ಶಾಲೆಗಳಲ್ಲಿದೆ.

ಸ್ವತಃ ಪ್ರಾಥಮಿಕ ಶಿಕ್ಷಕರಾಗಿದ್ದು ಈಗ ಸಿಐಟಿಯುವಿನ ಪಶ್ಚಿಮಬಂಗಾಳ ರಾಜ್ಯ ಕಾರ್ಯದರ್ಶಿಯಾಗಿರುವ ಚಿತ್ರಬ್ರತ ಮಜುಂದಾರ್ ಇಂತಹ ವಿದ್ಯಾಲಯಗಳನ್ನು ಹಣಕಾಸಿನ ದೃಷ್ಟಿಯಿಂದ ಸಮರ್ಥವಾಗಿಸಲು, ಪುಕ್ಕಟೆ ಪಠ್ಯ ಪುಸ್ತಗಳ ಪ್ರಕಟಣೆ ಮತ್ತು ಹಂಚಿಕೆಗೆ ಉದಾರವಾಗಿ ಧನ ಸಹಾಯ ನೀಡಬೇಕೆಂದು ಅವರು ಖಾಸಗಿ ವಲಯದವರನ್ನು ವಿನಂತಿಸಿಕೊಂಡರು.

ರೈತಮುಖಂಡರ ಕೊಲೆ

ಪಶ್ಚಿಮಬಂಗಾಳದ ಒಬ್ಬ ಪ್ರಮುಖ ರೈತ ಮುಖಂಡ ಮತಿಯೂರ್ ರೆಹಮಾನ್‌ನನ್ನು ಹಂತಕರು ಬಿಹಾರದ ಕಿಶನ್‌ಗಂಜ್‌ನಲ್ಲಿ ಮೇ 9 ರಂದು ಗುಂಡಿಕ್ಕಿ ಕೊಂದಿದ್ದಾರೆ. ಅವರಿಗೆ 48 ವರ್ಷ ವಯಸ್ಸಾಗಿತ್ತು. ಅಖಿಲ ಭಾರತ ಕಿಸಾನ್ ಸಭಾದ ಕಿಶನ್‌ಗಂಜ್ ಘಟಕದ ಪ್ರಕಾರ ಅವರು ಕಿಶನ್‌ಗಂಜ್‌ನಿಂದ ಪಶ್ಚಿಮ ಬಂಗಾಳದ ದಿನಾತ್‌ಪುರ್ ಜಿಲ್ಲೆಯಲ್ಲಿರುವ ಸ್ವಗ್ರಾಮಕ್ಕೆ ಮರಳಲು ಬಸ್ಸಿಗೆ ಕಾದಿದ್ದಾಗ ಹತ್ತಾರು ಮಂದಿ ಬಂದು ಅತ್ಯಂತ ಸಮೀಪದಿಂದಲೇ ಗುಂಡು ಹಾರಿಸಿ ಕೊಂದರು. ಈ ಕೊಲೆಯನ್ನು ಖಂಡಿಸುತ್ತಾ ಉತ್ತರ ದಿನಾನ್‌ಪುರ ಜಿಲ್ಲೆಯ ಸಿಪಿಐ(ಎಂ) ಕಾರ್ಯದರ್ಶಿ ಪೋಲೀಸರು ಹಂತಕರನ್ನು ಹಿಡಿಯುವಲ್ಲಿ ಉದ್ದೇಶಪೂರ್ವಕವಾಗಿ ಮುತುವರ್ಜಿ ವಹಿಸುತ್ತಿಲ್ಲ ಎಂದು ಆಪಾದಿಸಿದ್ದಾರೆ.

ಹರ್‍ಯಾಣ : ಸಾಮಾಜಿಕ ಅನಿಷ್ಟಗಳ ವಿರುದ್ಧ ಪ್ರಚಾರಾಂದೋಲನ ನಡೆಸಲು ಸಿಪಿಐ(ಎಂ) ನಿರ್ಧಾರ

ಹರ್‍ಯಾಣ ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಸಾಕಷ್ಟು ಪ್ರಗತಿ ಮಾಡಿದ್ದರೂ ಅಲ್ಲಿಯ ಸಮಾಜದ ದೃಷ್ಟಿಕೋನ ಬಹುಪಾಲು ಹಿಂದುಳಿದಿದೆ. ಅರ್ಥಕಳೆಕೊಂಡ ಮಧ್ಯಯುಗದ ಕಟ್ಟುಕಟ್ಟಳೆಗಳನ್ನು ಅದು ಇನ್ನೂ ಬಿಟ್ಟಿಲ್ಲ, ಬದಲು ಈಗಲೂ ಸಾಮಾಜಿಕ ಜೀವನದ ಎಲ್ಲಾ ವಲಯಗಳಲ್ಲೂ ಅದು ಭಾರೀ ಪ್ರಭಾವ ಬೀರುತ್ತಿದೆ. ಆದ್ದರಿಂದ ತನ್ನ ದೈನಂದಿನ ರಾಜಕೀಯ ಚಟುವಟಿಕೆಗಳು ಹಾಗೂ ಹೋರಾಟಗಳ ಜತೆಜತೆಗೇ ಜಾತಿವಾದ, ಮೂಢನಂಬಿಕೆ, ಮಹಿಳೆಯ ವಿರುದ್ಧ ಪಕ್ಷಪಾತ, ಪರ್ದಾ ಪದ್ಧತಿ, ವರದಕ್ಷಿಣೆ, ಹೆಣ್ಣು ಭ್ರೂಣಹತ್ಯೆ, ಅನಕ್ಷರತೆ ಮತ್ತಿತರ ಸಾಮಾಜಿಕ ಅನಿಷ್ಟಗಳ ವಿರುದ್ಧವೂ ಹೋರಾಟ ನಡೆಸಬೇಕು ಎಂದು ಸಿಪಿಐ(ಎಂ) ಹರ್‍ಯಾಣ ರಾಜ್ಯ ಸಮಿತಿ ನಿರ್ಧರಿಸಿದೆ. ಎರಡು ದಿನಗಳ ಸಭೆಯಲ್ಲಿ ಕಾರ್ಯದರ್ಶಿ ಮಂಡಳಿ ಈ ಕುರಿತು ಮಂಡಿಸಿದ ವಿವರವಾದ ವರದಿಯನ್ನು ಚರ್ಚಿಸಿ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ.

ಇತ್ತೀಚೆಗೆ ಹರ್‍ಯಾಣದ ಒಂದು ಕೊಲೆ ಘಟನೆ ಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ಪಡೆದಿತ್ತು. ಹಿಸ್ಸಾರ್ ಜಿಲ್ಲೆಯ ಭೆತನಿ ಗ್ರಾಮದಲ್ಲಿ ಒಂದು ಪ್ರೇಮ ಪ್ರಸಂಗದಲ್ಲಿ ಸಿಲುಕಿದ ಹುಡುಗಿಯನ್ನು ಅಮಾನುಷ ರೀತಿಯಲ್ಲಿ ಕೊಂದು, ಹುಡುಗನನ್ನು ನ್ಯಾಯಾಂಗ ಕಸ್ಟಡಿಗೆ ತಳ್ಳಿದ್ದಷ್ಟೇ ಅಲ್ಲ, ಆ ಹಳ್ಳಿಯ ಪಂಚಾಯತು ಆತನ ವಿರುದ್ಧ ಒಂದು ಕಾನೂನು ಬಾಹಿರ ಆಜ್ಞೆಯನ್ನು ಹೊರಡಿಸಿದೆ. ಅದರ ಸ್ಥಳೀಯ ಆಡಳಿತ, ಪೋಲೀಸು ಕೈಕಟ್ಟಿ ಕುಳಿತಿದೆ. ಹುಡುಗಿಯ ಕೊಲೆಗಾರರನ್ನು ಬಂಧಿಸಿ ಶಿಕ್ಷಿಸಬೇಕು ಹಾಗೂ ಹುಡುಗನಿಗೆ ಮತ್ತು ಆತನ ಕುಟುಂಬಕ್ಕೆ ಸಾಕಷ್ಟು ರಕ್ಷಣೆ ನೀಡಬೇಕು ಎಂದು ಸಿಪಿಐ(ಎಂ) ಆಗ್ರಹಪಡಿಸಿದೆ.

ದೇಶದಲ್ಲೆಲ್ಲಾ ಗ್ರಾಮ ಪಂಚಾಯತುಗಳಿಗೆ ಹೆಚ್ಚೆಚ್ಚು ಪ್ರಜಾಪ್ರಭುತ್ವ ಅಧಿಕಾರಗಳ ವಿಕೇಂದ್ರೀಕರಣವಾಗುತ್ತಿದ್ದರೂ ಹರ್‍ಯಾಣದ ಪಂಚಾಯತುಗಳು ಈಗಲೂ ಮಧ್ಯಯುಗದಲ್ಲೇ ಉಳಿದಿದ್ದು ದೇಶದ ಪ್ರಜಾಪ್ರಭುತ್ವ ಕಾನೂನು-ಕಟ್ಟಳೆಗಳನ್ನು ಬಹಿರಂಗವಾಗಿಯೇ ಮುರಿಯುತ್ತಿದೆ ಎಂದು ಸಿಪಿಐ(ಎಂ) ನ ಹರ್‍ಯಾಣ ರಾಜ್ಯ ಕಾರ್ಯದರ್ಶಿ ಮಂಡಳಿಯ ದಸ್ತಾವೇಜು ಅಭಿಪ್ರಾಯ ಪಟ್ಟಿದೆ. ದಲಿತರ ಕೂಲಿ ಹೋರಾಟಗಳನ್ನು ಮುರಿಯಲು ಕೂಡಾ ಈ ಪಂಚಾಯತುಗಳು ಈ ವಿಭಾಗಗಳ ಸಾಮಾಜಿಕ ಬಹಿಷ್ಕಾರ ಇತ್ಯಾದಿ 'ಆದೇಶ'ಗಳನ್ನು ಈಗಲೂ ಹೊರಡಿಸುತ್ತಿದೆ.

ಇನ್ನೂ ಶೋಚನೀಯ ಸಂಗತಿಯೆಂದರೆ ಬಂಡವಾಳಶಾಹಿ ಪಕ್ಷಗಳ ಮುಖಂಡರು ಇಂತಹ ಅನಿಷ್ಟ ಪದ್ಧತಿಗಳ ಬಗ್ಗೆ ಕಣ್ಣು ಮುಚ್ಚಿ ಕೂತಿರುತ್ತಾರೆ ಅಥವಾ ತಮ್ಮ ರಾಜಕೀಯ ಸಮಯ ಸಾಧಕತನಕ್ಕೆ ಇಂತಹ ಅಪರಾಧಗಳ ಪ್ರಯೋಜನವನ್ನು ಪಡೆಯುತ್ತಾರೆ. ಸಮಾನ ನಾಗರೀಕ ಸಂಹಿತೆಯ ಬಗ್ಗೆ ದೇಶದಲ್ಲೆಲ್ಲಾ ಡಂಗುರ ಹೊಡೆಯುವ ಬಿಜೆಪಿ ಈ ರಾಜ್ಯದಲ್ಲಿ ಮಾತ್ರ ಹೆಣ್ಣು ಮಕ್ಕಳಿಗೆ ತಂದೆಯ ಆಸ್ತಿಗಳಿಂದ ಪಾಲು ದೊರೆಯದಂತೆ ವಂಚಿಸುವ ಕಾನೂನು ಪಾಸು ಮಾಡುವ ವಿಷಯದಲ್ಲಿ ಎರಡು ಬಾರಿ ಇಂತಹ ರಾಜಕೀಯ ಪಕ್ಷಗಳೊಂದಿಗೆ ಶಾಮೀಲಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಸಾಮಾಜಿಕ ಅನಿಷ್ಟಗಳ ವಿರುದ್ಧ ವ್ಯವಸ್ಥಿತ ಪ್ರಚಾರ ನಡೆಸಲು ರಾಜ್ಯದ ಸಾಮಾಜಿಕ-ಸಾಂಸ್ಕೃತಿಕ ಪ್ರಶ್ನೆಗಳ ಬಗ್ಗೆ ತನ್ನ ಕಾರ್ಯಕರ್ತರಿಗೆ ತರಬೇತಿ ನೀಡಲು ನಿರ್ಧರಿಸಿದೆ.

ಗಂಗಾವತಿ: ಅಂಗನವಾಡಿ ನೌಕರರ ತಾಲ್ಲೂಕು ಸಮ್ಮೇಳನ

ಮೇ11 ರಂದು ಗಂಗಾವತಿ ತಾಲ್ಲೂಕು ಅಂಗನವಾಡಿ ನೌಕರರ ಸಮ್ಮೇಳನವು ಪುರಭವನದಲ್ಲಿ ನಗರ ಸಭಾ ಸದಸ್ಯರಾದ ಶ್ರೀಮತಿ ಸುಮತಿ ದುರ್ಗಾದಾಸ ಬಂಢಾರಳ ರವರು ಉದ್ಘಾಟನೆ ಮಾಡುವುದರೊಂದಿಗೆ ಪ್ರಾರಂಭವಾಯಿತು. ಇವರು ಮಾತ ನಾಡುತ್ತಾ ಅಂಗನವಾಡಿ ನೌಕರರು, ಸಹಾಯಕಿಯರು ಎಲ್ಲರೂ ಒಗ್ಗಟ್ಟಾಗಿ ಸಂಘಟನೆ ಕಟ್ಟುವುದರಿಂದ ಯಾವುದೇ ತರಹದ ಸಮಸ್ಯೆಯನ್ನು ಬಗೆಹರಿಸಿ ಕೊಳ್ಳಬಹುದು ಎಂದರು. ಮುಖ್ಯ ಅತಿಥಿ ಗಳಾಗಿ ಆಗಮಿಸಿದ್ದ ಚಂದ್ರಪ್ಪ ಹೊಸ್ಕೆರಾ ಮಾತನಾಡುತ್ತಾ ಶಿಕ್ಷಕರ ಮೇಲೆ ಸರಕಾರ ಅನುಸರಿಸುತ್ತಿರುವ ನೀತಿಯನ್ನು ಖಂಡಿಸುತ್ತಾ ಇವತ್ತಿನ ದಿನದಲ್ಲಿ ಅಂಗನವಾಡಿ ನೌಕರರ ಸಮಸ್ಯೆಗಳು ದಿನನಿತ್ಯ ಹೆಚ್ಚಾಗುತ್ತಿರುವುದನ್ನು ಖಂಡಿಸಲು ತಾವುಗಳೆಲ್ಲರೂ ಸಂಘಟಿತರಾಗಬೇಕಿದೆ ಎಂದರು. ಅಧ್ಯಕ್ಷತೆಯನ್ನು ಸಿಂಡಿಕೇಟ್ ಬ್ಯಾಂಕ್ ನೌಕರರಾದ ವಿಕ್ರಂ ವಹಿಸಿದ್ದರು.

ನೂತನ ಸಮಿತಿ

ಗೌರವಾಧ್ಯಕ್ಷರು: ವೈ.ಬಿ.ಜೂಡಿ, ಅಧ್ಯಕ್ಷರು-ಅನಂತಲಕ್ಷ್ಮಿ ಉಪಾಧ್ಯಕ್ಷರು ಗಳಾಗಿ: ಶಾಂತಾಬಾಯಿ, ನಾಗವೇಣಿ, ಮಹಾಂತಮ್ಮ ಕಾರ್ಯದರ್ಶಿ; ದ್ವಾರಕಾ ಜೂಡಿ, ಸಹಕಾರ್ಯದರ್ಶಿಗಳಾಗಿ: ಚಂದ್ರಕಲಾ, ಅಂಜನಾ, ಪುಷ್ಪಾವತಿ ಮತ್ತು ಖಜಾಂಚಿ: ಗುರುಲಿಂಗಮ್ಮ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ 15 ಜನ ಅಂಗನವಾಡಿ ನೌಕರರು ಆಯ್ಕೆಗೊಂಡರು.

ಬೇಡಿಕೆಗಳ ಈಡೇರಿಕೆಗೆ ಖಾಲಿ ಕೊಡಗಳ ಮೆರವಣಿಗೆ


ಮೇ 23 ರಂದು ಜನವಾದಿ ಮಹಿಳಾ ಸಂಘಟನೆ ವತಿಯಿಂದ ತಾರಫೈಲ ಬಡಾವಣೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು, ಚರಂಡಿ ಮೇಲೆ ಮುಚ್ಚಳಿಕೆ ಹಾಕಬೇಕು, ಮಹಿಳೆಯರಿಗೆ ಶೌಚಾಲಯ ಕಲ್ಪಿಸಿಕೊಡಬೇಕು, ಚಳುವಳಿಗಾರರ ಮೇಲೆ ಹಾಕಿದ ಕೇಸು ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ ನೂರಾರು ಜನ ಮಹಿಳೆಯರು ಖಾಲಿ ಕೊಡಗಳ ಮೆರವಣಿಗೆ ನಡೆಸಿ ಮಹಾನಗರ ಸಭೆಯ ಮುಂದುಗಡೆ ಧರಣಿ ಪ್ರಾರಂಭಿಸಿದರು. ಮೆರವಣಿಗೆಯ ನೇತೃತ್ವವನ್ನು ತಾರಫೈಲ ಘಟಕ ಕಾರ್ಯದರ್ಶಿ ಮರುಳಮ್ಮ ಮತ್ತು ಅಧ್ಯಕ್ಷರಾದ ಮರಮ್ಮ ಮಾಚನೂರ ವಹಿಸಿದ್ದರು.

ಮೆರವಣಿಗೆಯನ್ನು ಉದ್ದೇಶಿಸಿ ಮಾತನಾಡಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ನೀಲಾ.ಕೆ. "ನಗರದ ಹಲವಾರು ಬಡಾವಣೆಯ ಮಹಿಳೆಯರು ಕೊಡ ನೀರಿಗಾಗಿ ಎಷ್ಟೆಲ್ಲ ಅಲೆದಾಡಿದರೂ ನೀರು ಸಿಕ್ಕುವುದಿಲ್ಲ, ಶೌಚಾಲಯದ ವ್ಯವಸ್ಥೆ ಇಲ್ಲದ ಕಾರಣ ಮಹಿಳೆಯರ ಬವಣೆ ಹೇಳತೀರದು. ಚರಂಡಿ,ರಸ್ತೆ, ವಿದ್ಯುತ್ ದೀಪಗಳು ಸಹ ಕನಿಷ್ಟ ಕೆಲಸ ಮಾಡುವ ಹೊಣೆಗಾರಿಕೆಯೂ ನಗರಸಭೆ ವಹಿಸಿಲ್ಲ ಅಂದರೆ ಕೆಲಸ ಮಾಡುವವರು ಯಾರು? ಈ ಎಲ್ಲಾ ವ್ಯವಸ್ಥೆಗಳಿಗೆ ಪರಿಹಾರ ಕಾಣಲು ಜೆಎಂಎಸ್ ನಿರಂತರ ಚಳುವಳಿ ನಡೆಸುತ್ತದೆ. ತಾರಫೈಲ ಮತ್ತು ರಾಮಜೀನಗರ ಹಮ್ಮಿಕೊಂಡ ಚಳುವಳಿ "ಜಿದ್ದಿನಿಂದ ಮುಂದುವರೆಯುತ್ತದೆ" ಎಂದು ಹೇಳಿದರು. ಡಾ|| ಅಬ್ದುಲ್ ಖಾದರ್, ಹನ್ನುಬಾಯಿ, ಮರಪ್ಪ ಕಡೇಚೂರ ಅವರು ಸಿಐಟಿಯು ವಿನಿಂದ ಚಳುವಳಿಗೆ ಬೆಂಬಲ ವ್ಯಕ್ತಪಡಿಸಿ ಮಾತನಾಡಿದರು.



ಫ್ರಾನ್ಸಿನ ಜನತೆಯ ಒಲವು ಮತ್ತೆ ಎಡಪಕ್ಷಗಳತ್ತ?

ಲೋಕಸಂಚಾರ



ಶರತ್‌ಚಂದ್ರ

ಮೇ 25 ರಂದು ಫ್ರಾನ್ಸಿನ 577 ಸದಸ್ಯರಿರುವ ರಾಷ್ಟ್ರೀಯ ಅಸೆಂಬ್ಲಿಗೆ ಮೊದಲ ಹಂತದ ಚುನಾವಣೆಗಳು ನಡೆದವು. ಇವುಗಳಲ್ಲಿ 60% ಫ್ರಾನ್ಸ್ ಜನತ ಈಗ ಅಧಿಕಾರದಲ್ಲಿರುವ ಬಲಪಂಥೀಯ ಸರಕಾರದ ನೀತಿಗಳ ವಿರುದ್ಧ ಮತ ನೀಡಿದ್ದಾರೆ. ಅಲ್ಲಿ ರಾಷ್ಟ್ರೀಯ ಅಸೆಂಬ್ಲಿ ಚುನಾವಣೆಗಳು ಮುಂದಿನ ವರ್ಷ ನಡೆಯಬೇಕಾಗಿತ್ತು. ಆದರೆ "ಯುರೋಪಿಯನ್ ಹಣಕಾಸು ಒಕ್ಕೂಟ(EMU) ಬಲಪಂಥೀಯ ಕನಸಿನ ಈಡೇರಿಕೆಗೆ 'ಹೊಸ ಸಂಭ್ರಮ'ದ ವಾತಾವರಣ ಏರ್ಪಡಿಸಬೇಕೆಂದು ಚುನಾವಣೆಗಳನ್ನು ಹತ್ತು ತಿಂಗಳು ಮೊದಲೇ ನಡೆಸಲು ಫ್ರಾನ್ಸಿನ ಅಧ್ಯಕ್ಷ ಜಾಕ್ವೆಸ್ ಚಿರಾಕ್ ನಿರ್ಧರಿಸಿದರು. ಈಗ ಮೊದಲಸುತ್ತಿನ ಈ ಫಲಿತಾಂಶದಿಂದ ಅವಕ್ಕಾದ ಅವರ ಶಿಷ್ಯ ಅಲಿಸ್ ಯುಪ್ಪೆ ರಾಜೀನಾಮೆ ನೀಡಿದ್ದಾರೆ. ಅಂದರೆ ಜೂನ್ 1 ರಂದು ನಡೆಯುವ ಎರಡನೇ ಹಂತದ ಚುನಾವಣೆಗಳಲ್ಲಿ ಅಧಿಕಾರದಲ್ಲಿರುವ ಬಲಪಂಥೀಯ ಕೂಟ ಹೇಗಾದರೂ ಮಾಡಿ ಗೆದ್ದರೂ, ಕೂಡಾ ಹೊಸ ಪ್ರಧಾನ ಮಂತ್ರಿಯನ್ನು ಕಾಣುವುದು ಖಚಿತವಾಗಿದೆ. ಆದರೆ ಸಮಾಜವಾದಿ ಪಕ್ಷದ ಲಯೋನಿಲ್ ಜೋಸ್ಪಿನ್ ಫ್ರಾನ್ಸಿನ ಹೊಸ ಪ್ರಧಾನಿಗಳಾಗುವ ಸಾಧ್ಯತೆಯೇ ಹೆಚ್ಚು ಎಂದು ವೀಕ್ಷಕರ ಅಭಿಪ್ರಾಯ.

ಈ ಅಲೆನ್ ಯುಪ್ಪೆಯವರ ನೀತಿಗಳ ವಿರುದ್ಧ ಇತ್ತೀಚೆಗೆ ಫ್ರಾನ್ಸಿನ ಕಾರ್ಮಿಕರು ದೊಡ್ಡ ಪ್ರಮಾಣದಲ್ಲಿ ಬೀದಿಗಿಳಿದು ಹೋರಾಟ ನಡೆಸಿದ್ದು ನಮ್ಮ ಓದುಗರಿಗೆ ನೆನಪಿರಬೇಕು. ಈ ಹಿನ್ನೆಲೆಯಲ್ಲಿ ಈ ಚುನಾವಣೆಗಳನ್ನು ಐಕ್ಯದಿಂದ ಎದುರಿಸಲು ಫ್ರಾನ್ಸಿನ ಸಮಾಜವಾದಿ ಪಕ್ಷ, ಕಮ್ಯುನಿಸ್ಟ್ ಪಕ್ಷ ಹಾಗೂ ಗ್ರೀನ್ಸ್ ಪಾರ್ಟಿ(ಪರಿಸರವಾದಿ ಪಕ್ಷ) ನಿರ್ಧರಿಸಿದವು. ಮೊದಲ ಹಂತದ ಚುನಾವಣೆಗಳಲ್ಲಿ ಈ ಎಡಪಂಥೀಯ ಕೂಟ ಮೇಲುಗೈ ಪಡೆದಿದೆ.

'ಯುರೋಪಿನ ಹಣಕಾಸು ಒಕ್ಕೂಟ' ಹಾಗೂ 1999 ರೊಳಗೆ ಇಡೀ ಯುರೋಪಿನಲ್ಲಿ ಒಂದೇ ನಾಣ್ಯ ಪದ್ಧತಿ ಈ ಚುನಾವಣೆಯಲ್ಲಿನ ಮುಖ್ಯ ಪ್ರಶ್ನೆ. ಈ ರೀತಿಯ ಏಕಸ್ವಾಮ್ಯ ಪದ್ಧತಿ ಬರಬೇಕಾದರೆ ಬಜೆಟ್ ಕೊರತೆಯ ಮೇಲೆ ಕಟ್ಟುನಿಟ್ಟಾದ ಮಿತಿ ಹಾಕಬೇಕೆಂದು ಯುರೋಪಿನ ಎಲ್ಲಾ ಬಲಪಂಥೀಯ ರಾಜಕೀಯ ಪಕ್ಷಗಳ ಆಸೆ. ಇದರರ್ಥ ಸಾಮಾಜಿಕ ಕಲ್ಯಾಣ ಯೋಜನೆಗಳಲ್ಲಿ ತೀವ್ರ ಕಡಿತ ಹಾಗೂ ವ್ಯಾಪಕ ಖಾಸಗೀಕರಣ. ಹಿಂದೆ ರಾಷ್ಟ್ರಪತಿಗಳಾಗಿದ್ದ ಮಿತ್ತರಾಂ ಅಧಿಕಾರವಾಧಿಯಲ್ಲಿ ಫ್ರಾನ್ಸಿನ ಸಮಾಜವಾದಿ ಪಕ್ಷ ಕೂಡಾ ಈ ನೀತಿಗಳತ್ತ ಒಲವು ತೋರಿತ್ತು. ಆದರೆ ಕಳೆದ ಕೆಲವು ವರ್ಷಗಳಲ್ಲಿ ಇದರ ದುಷ್ಪರಿಣಾಮಗಳನ್ನು ಕಂಡ ಹಾಗೂ ಕಾರ್ಮಿಕ ವರ್ಗದ ತೀವ್ರ ಹೋರಾಟಗಳನ್ನು ಕಂಡ ಸಮಾಜವಾದಿ ಪಕ್ಷ ಹೊಸ ಮುಖಂಡ ಲಿಯೋನಿಲ್ ಜೋಸ್ಪಿನ್ ನೇತೃತ್ವದಲ್ಲಿ ಇದನ್ನು ವಿರೋಧಿಸಲಾರಂಭಿಸಿತು. ಫ್ರಾನ್ಸಿನ ಕಮ್ಯುನಿಸ್ಟ್ ಪಕ್ಷವಂತೂ ಈ ನೀತಿಗಳನ್ನು ಆರಂಭದಿಂದಲೇ ವಿರೋಧಿಸುತ್ತಿತ್ತು. ಈಗ ಈ ಸಮಾನ ನಿಲುವಿನಿಂದಾಗಿ ಒಂದು ದೀರ್ಘ ಮಾತುಕತೆಯ ನಂತರ ಇದೇ ಏಪ್ರಿಲ್ 29 ರಂದು ಈ ಎರಡೂ ಪಕ್ಷಗಳು ಈ ಚುನಾವಣೆಯಲ್ಲಿ ಒಟ್ಟಿಗೇ ಹೋರಾಡಲು ನಿರ್ಧರಿಸಿದ್ದವು. ಅವು ಹೊರಡಿಸಿದ ಜಂಟಿ ಘೋಷಣೆ 'ಸರಳತೆಯ ಕ್ರಮಗಳ ಹೆಸರಿನಲ್ಲಿ ಇರುವ 12.8% ನಿರುದ್ಯೋಗವನ್ನು ಹೆಚ್ಚಿಸುವ ನೀತಿಗಳಿಗೆ ಪರ್ಯಾಯವಾಗಿ 7 ಲಕ್ಷ ಹೊಸ ಉದ್ಯೋಗವಕಾಶಗಳನ್ನು ನಿರ್ಮಿಸಲು, ವಾರದ ಕೆಲಸದ ಅವಧಿಯನ್ನು ಸಂಬಳದ ಕಡಿತವಿಲ್ಲದೇ 35 ಗಂಟೆಗಳಿಗಿಳಿಸಲು ಆದ್ಯತೆ ನೀಡುವುದಾಗಿ ಸಾರಿದೆ.

ಇರಾನಿನಲ್ಲಿ ಮೂಲಭೂತವಾದಿ ಶಕ್ತಿಗಳಿಗೊಂದು ಸೋಲು

ಇರಾನಿನ ರಾಷ್ಟ್ರಾಧ್ಯಕ್ಷ ಚುನಾವಣೆಯಲ್ಲಿ ಅಲ್ಲಿಯ ಅತ್ಯುನ್ನತ ಧಾರ್ಮಿಕ ಮುಖಂಡ ಎನಿಸಿಕೊಂಡ ಅಯಾತುಲ್ಲಾ ಅಲಿ ಖೊಮೇನಿಯ ಬೆಂಬಲ ಪಡೆದ ಅಭ್ಯರ್ಥಿ ಹಾಗೂ ಅಲ್ಲಿನ ಸಂಸತ್ತಿನ ಸಭಾಧ್ಯಕ್ಷ ಅಲಿ ಅಕ್ಬರ್ ನಟಗ್ ನೂರಿಯವರನ್ನು ಸೋಲಿಸಿ ಸೈಯದ್ ಮಹಮ್ಮದ್ ಖಾತಮಿ ಭಾರೀ ಗೆಲುವು ಗಳಿಸಿದ್ದಾರೆ. ಹೆಚ್ಚಿನ ಸ್ವಾತಂತ್ರ್ಯ, ಸಹಿಷ್ಣುತೆಯನ್ನು ಇರಾನೀ ಸಮಾಜದಲ್ಲಿ ತರುವುದಾಗಿ ಖಾತಮಿ ಭರವಸೆ ನೀಡಿದ್ದರು.

6 ಕೋಟಿ ಜನಸಂಖ್ಯೆಯಿದ್ದು 3.3 ಕೋಟಿ ಮತದಾರರಿರುವ ಈ ದೇಶದಲ್ಲಿ 3 ಕೋಟಿ ಜನ ಈ ಚುನಾವಣೆಯಲ್ಲಿ ಭಾಗವಹಿಸಿದ್ದರು. ಇದು ಅಭೂತಪೂರ್ವವಾಗಿತ್ತು. ಇವರಲ್ಲಿ 2 ಕೋಟಿ ಮತದಾರರು ಮಹಮ್ಮದ್ ಖಾತಮಿಯವರಿಗೆ ಮತ ನೀಡಿದ್ದಾರೆ. ಹಿಂದೆ ಒಟ್ಟು ಮತದಾನ ಕೂಡಾ ಇಷ್ಟು ನಡೆಯುತ್ತಿರಲಿಲ್ಲ. ಅಂದರೆ ತಮ್ಮ ಮತ ಚಲಾಯಿಸುವಲ್ಲಿ ಇರಾನೀ ಜನತೆ ತೋರಿದ ಅಪಾರ ಆಸಕ್ತಿ ಹಾಗೂ ಖಾತಮಿಯವರಿಗೆ ಮೂರನೇ ಎರಡರಷ್ಟು ಮತಗಳು, ಇರಾನಿ ಜನತೆ 'ಇಸ್ಲಾಮಿ ಕ್ರಾಂತಿ'ಯ ಸಂಪ್ರದಾಯ ಶರಣತೆಯನ್ನು, ಮುಲ್ಲಾಗಳ ಆಳ್ವಿಕೆಯನ್ನು ವಿರೋಧಿಸುತ್ತಿರುವ ಲಕ್ಷಣಗಳು ಎನ್ನಲಾಗಿದೆ. ಖೊಮೆನಿಯಾ 'ಇಸ್ಲಾಮೀ' ಆಡಳಿತದಲ್ಲಿ ವಿಪರೀತ ಕಟ್ಟುನಿಟ್ಟಿನ 'ವೇಷ ಭೂಷಣ ಸಂಹಿತೆ' ಇತ್ಯಾದಿ ಸಂಪ್ರದಾಯಿಕರಣ ಕ್ರಮಗಳನ್ನು ಎದುರಿಸಬೇಕಾಗಿ ಬಂದ ಮಹಿಳೆಯರಲ್ಲದೆ ಯುವಕರು ಹಾಗೂ ಬುದ್ಧಿಜೀವಿಗಳು ದೊಡ್ಡ ಪ್ರಮಾಣದಲ್ಲಿ ಮಹಮ್ಮದ್ ಖಾತಮಿಯವರಿಗೆ ಬೆಂಬಲ ವ್ಯಕ್ತಪಡಿಸಿರುವುದರಿಂದ ಈ ಫಲಿತಾಂಶ ಕಂಡುಬಂದಿದೆ. ಇದರಿಂದಾಗಿ ಖೊಮೆನಿಯ ಸಾಂಪ್ರಾದಾಯಿಕರಣ ಆಳರಸರಿಗೆ ಕೂಡಾ ಈಗ ಮಹಿಳೆಯರಿಗೆ ಹೆಚ್ಚಿನ ಉದಾರತೆ ಹಾಗೂ ಸಹಿಷ್ಣುತೆ ಇತ್ಯಾದಿಗಳನ್ನು ವಿರೋಧಿಸಲಿಕ್ಕಾಗಲಿಕ್ಕಿಲ್ಲ ಎಂದು ಭಾವಿಸಲಾಗಿದೆ. ಮಹಮ್ಮದ್ ಖಾತಮಿ ಕೂಡಾ ಒಬ್ಬ ಮುಲ್ಲಾ ಆಗಿದ್ದವರು. ಹಿಂದೆ ಸಾಂಸ್ಕೃತಿಕ ಮಂತ್ರಿಯೂ ಆಗಿದ್ದವರು. ಸಂಪ್ರದಾಯಿ ಕರಣತೆಯನ್ನು ವಿರೋಧಿಸಿ ರಾಜಿನಾಮೆ ನೀಡಿದ್ದವರು. ಆದ್ದರಿಂದ ಈ ಚುನಾವಣೆ ಗಳಲ್ಲಿ ಎಡ ಪ್ರಗತಿಪರ ಶಕ್ತಿಗಳು ಇವರನ್ನು ಬೆಂಬಲಿಸಿದ್ದವು.

ನೇಪಾಳದಲ್ಲಿ ಕಮ್ಯುನಿಸ್ಟರಿಗೆ ಮತ್ತೊಂದು ವಿಜಯ

ಮೇ 17 ಹಾಗೂ ಮೇ 26 ರಂದು ನಡೆದ ಜಿಲ್ಲಾ ಅಭಿವೃದ್ಧಿ ಸಮಿತಿ, ಮುನಿಸಿಪಾಲಿಟಿ ಹಾಗೂ ಗ್ರಾಮ ಅಭಿವೃದ್ಧಿ ಸಮಿತಿಗಳ ಚುನಾವಣೆಗಳಲ್ಲಿ ನೇಪಾಳೀ ಕಮ್ಯುನಿಸ್ಟರು ಜನತೆಯ ವಿಶ್ವಾಸವನ್ನು ಉಳಿಸಿ ಬೆಳೆಸಿಕೊಂಡಿರುವುದು ಕಂಡುಬಂದಿದೆ. ಐದು ವರ್ಷಗಳ ಹಿಂದೆ ಈ ಸಮಿತಿಗಳಲ್ಲಿ ಮೂರನೇ ಎರಡರಷ್ಟು ಗೆದ್ದಿದ್ದ ನೇಪಾಳೀ ಕಾಂಗ್ರೆಸ್ ಪಕ್ಷ ಹಿಂದೆ ಬಿದ್ದಿದೆ.

ವಾಸ್ತವವಾಗಿ ಈ ಚುನಾವಣೆ ಮೂರು ತಿಂಗಳ ಹಿಂದೆಯೇ ನಡೆಯಬೇಕಾಗಿತ್ತು. ಆಗ ಅಧಿಕಾರದಲ್ಲಿದ್ದ ನೇಪಾಳಿ ಕಾಂಗ್ರೆಸ್ ಪಕ್ಷ ಅದಕ್ಕೆ ಸ್ವಲ್ಪ ಮೊದಲು ನಡೆದಿದ್ದ ಸಂಸದೀಯ ಉಪಚುನಾವಣೆಗಳ ಸೋಲಿನಿಂದ ಹೆದರಿ ಅದನ್ನು ಮುಂದೂಡಿತ್ತು. ಈಗ ಕಮ್ಯುನಿಸ್ಟರ ಒತ್ತಡದಿಂದಾಗಿ ಈ ಚುನಾವಣೆಗಳು ನಡೆದವು.

ಮೇ 17 ರ ಚುನಾವಣೆಗಳ ಫಲಿತಾಂಶಗಳು ಈಗಾಗಲೇ ಬಂದಿದ್ದು, ಮೇ 26 ರ ಫಲಿತಾಂಶಗಳು ಈಗ ಬರುತ್ತಿದೆಯಷ್ಟೆ. ಮೊದಲ ಹಂತದ ಚುನಾವಣೆಗಳಲ್ಲಿ ದೇಶದ 75 ರಲ್ಲಿ 45 ಜಿಲ್ಲೆಗಳಲ್ಲಿ ಚುನಾವಣೆ ನಡೆದಿತ್ತು. ಇವುಗಳಲ್ಲಿ 20 ಜಿಲ್ಲಾ ಅಭಿವೃದ್ಧಿ ಸಮಿತಿಗಳು ನೇಪಾಳಿ ಕಮ್ಯುನಿಸ್ಟರ ಪಾಲಾಗಿವೆ. ಕಾಂಗ್ರೆಸ್ ಎರಡು ಜಿಲ್ಲಾ ಅಭಿವೃದ್ಧಿ ಸಮಿತಿಗಳಲ್ಲಿ ಅಧಿಕಾರಕ್ಕೆ ಬಂದಿದೆ, ಆರ್.ಪಿ.ಪಿ. ಒಂದರಲ್ಲಿ ಅಧಿಕಾರಕ್ಕೆ ಬಂದಿದೆ. ಉಳಿದ ಜಿಲ್ಲಾ ಅಭಿವೃದ್ಧಿ ಸಮಿತಿಗಳಲ್ಲಿ ಸಮ್ಮಿಶ್ರ ಆಡಳಿತ ಗಳು ಏರ್ಪಾಡಾಗಬೇಕಿದ್ದು ಕಮ್ಯುನಿಸ್ಟರ ಪ್ರಾಬಲ್ಯವೇ ಹೆಚ್ಚಿದೆ.

ಮೊದಲ ಹಂತದಲ್ಲಿ ಚುನಾವಣೆ ನಡೆದ 24 ಮುನಿಸಿ ಪಾಲಿಟಿಗಳಲ್ಲಿ 17 ರಲ್ಲಿ ಕಮ್ಯುನಿಸ್ಟ್ ಪಕ್ಷದ ಮೇಯರ್ ಅಭ್ಯರ್ಥಿಗಳು ಹಾಗೂ ಅದರ ಹೆಚ್ಚಿನ ಇತರ ಅಭ್ಯರ್ಥಿಗಳು ಗೆದ್ದಿದ್ದಾರೆ.

ಕಾಂಗ್ರೆಸ್ ಕೇವಲ 3 ಮುನಿಸಿ ಪಾಲಿಟಿಗಳಲ್ಲಿ ಹಾಗೂ ಆರ್. ಪಿ.ಪಿ. 2 ಮುನಿಸಿ ಪಾಲಿಟಿಗಳಲ್ಲಿ ಗೆದ್ದಿದೆ.



ಹೊಸದಾಗಿ ಚುನಾಯಿತರಾದ ಬನ್‌ಬಂಡಿಯಾವರು ಮಂಗೋಲಿಯಾ ಜನತಾಕ್ರಾಂತಿಕಾರಿ ಪಕ್ಷದ ಕೇಂದ್ರ ಕಚೇರಿಯೆದುರು ಬೆಂಬಲಿಗರ ಅಭಿನಂದನೆಗೆ ಕೃದಜ್ಞತೆ ಸೂಚಿಸುತ್ತಿರುವುದು

ಮಂಗೋಲಿಯಾದಲ್ಲಿ ಕಮ್ಯುನಿಸ್ಟರ ಗೆಲವು


ಮೇ 15 ರಂದು ಮಂಗೋಲಿಯಾದಲ್ಲಿ ನಡೆದ ಅಧ್ಯಕ್ಷ ಚುನಾವಣೆಗಳಲ್ಲಿ ಜನತಾ ಕ್ರಾಂತಿಕಾರಿ ಪಕ್ಷದ ನಬಾಗಿನ್ ಬಗ್ವಂಡಿ 60% ಮತ ಗಳಿಸಿ ಗೆದ್ದಿದ್ದಾರೆ. ರಾಷ್ಟ್ರೀಯ ಪ್ರಜಾಪ್ರಭುತ್ವ ಪಕ್ಷ ಹಾಗೂ ಸಾಮಾಜಿಕ ಪ್ರಜಾಪ್ರಭುತ್ವ ಪಕ್ಷದ ಜಂಟಿ ಅಭ್ಯರ್ಥಿ ಹಾಗೂ ಹಿಂದಿನ ಅಧ್ಯಕ್ಷ ಬಕ್ರಿಬಾಚ್ ಕೇವಲ 30% ಮತ ಗಳಿಸಿದ್ದಾರೆ. ಈ ಚುನಾವಣೆಗಳಲ್ಲಿ 80% ಮತದಾನ ನಡೆದಿತ್ತು. ಮಂಗೋಲಿಯಾದಲ್ಲಿ ಪ್ರಜಾಪ್ರಭುತ್ವ ಹಾಗೂ ಆರ್ಥಿಕ ಸುಧಾರಣೆ ತರುತ್ತೇನೆನ್ನುವ ಬಕ್ರಿಬಾಚ್‌ರ ಮಾತಿಗೆ ಮರುಳಾಗಬಾರದೆಂದು ಮಂಗೋಲಿಯನ್ನರು ದೃಢ ನಿರ್ಧಾರ ಮಾಡಿದಂತಿತ್ತು. ಮಂಗೋಲಿಯನ್ನರ "ಪ್ರಜಾಪ್ರಭುತ್ವ, ಆರ್ಥಿಕ ಸುಧಾರಣಾ ಪ್ರಕ್ರಿಯೆಗೆ ವಿದಾಯ ಹೇಳಿದ್ದಾರೆ" ಎಂದು ಈ ಫಲಿತಾಂಶ ಕಂಡ ಪಾಶ್ಚಿಮಾತ್ಯ ಆಳುವ ಮಂದಿ ವಿಶ್ಲೇಷಿಸಿದ್ದಾರೆ. ಆದರೆ ಹಿಂದಿನ ಸೋವಿಯತ್ ಒಕ್ಕೂಟದಲ್ಲಿ ಗೋರ್ಬಚೇವ್ ವಹಿಸಿದ ಪಾತ್ರವನ್ನು ವಹಿಸಬಯಸಿದ ಈ ವ್ಯಕ್ತಿ ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಆರ್ಥಿಕ ಸುಧಾರಣೆ ತಂದದ್ದು ದುಡಿಯುವ ಜನರಿಗಲ್ಲ, ಕೇವಲ ಹಿಡಿಯಷ್ಟು ದೊಡ್ಡ ಕುಳಗಳಿಗೆ ಎಂಬುದು ಅರಿವಿಗೆ ಬಂದಿರುವ ಮಂಗೋಲಿಯನ್ನರು ಪಾಶ್ಚಿಮಾತ್ಯರ 'ಪ್ರಜಾಪ್ರಭುತ್ವ' 'ಸ್ವಾತಂತ್ರ್ಯ' ಇತ್ಯಾದಿ ಪದಗಳಲ್ಲಿನ ಗೋಸುಂಬೆತನ ನಮಗೆ ಬೇಕಿಲ್ಲ ಎಂದು ನಿರ್ಧರಿಸಿದ್ದಾರೆ. "ನಾವು ಅಧ್ಯಕ್ಷರಾದರೆ ಪ್ರಜಾಪ್ರಭುತ್ವವೆಂಬುದು ನಿಜವಾಗಿ ಪ್ರಭುತ್ವವಾಗಿ ಕೆಲಸ ಮಾಡುವಂತೆ ಮಾಡುತ್ತೇನೆ" ಎಂದಿದ್ದರು ಜನತಾ ಕ್ರಾಂತಿಕಾರಿ ಪಕ್ಷದ ಬಗ್ವಂಡಿ. ಪ್ರಭುತ್ವ ಉಳ್ಳವರ ಕೈಗೊಂಬೆಯಾಗಬಾರದು ಎಂದು ಮಂಗೋಲಿಯನ್ ಜನತೆಯೂ ಅಭಿಪ್ರಾಯ ಪಟ್ಟಿದೆ.

ಬೀಡಿ ಕಾರ್ಮಿಕರ ಮುಂದಾಳು ಕಾಂ|| ಕೆ.ನಾರಾಯಣ ಶೆಟ್ಟಿ ನಿಧನ

ತೊಕ್ಕೊಟು: ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ (ಸಿಐಟಿ ಯು) ದ.ಕ. ಇದರ ಅಧ್ಯಕ್ಷರಾದ ಕಾ|| ಕೆ. ನಾರಾಯಣ ಶೆಟ್ಟಿಯವರು ಮೇ 21 ರ ರಾತ್ರಿ ಅಲ್ಪಕಾಲದ ಅನಾರೋಗ್ಯ ದಿಂದ ನಿಧನ ಹೊಂದಿದರು. ಇವರಿಗೆ 72 ವರ್ಷ ವಯಸ್ಸಾಗಿತ್ತು.

ಇವರು ಓರ್ವ ಹಂಚಿನ ಕಾರ್ಖಾನೆಯ ಕಾರ್ಮಿಕನಾಗಿದ್ದುಕೊಂಡು ಕಳೆದ ಐದು ವರ್ಷಗಳ ಕಾಲಾವಧಿಯಲ್ಲಿ ತೀರಾ ಶೋಷಣೆಗೊಳಗಾದ ಬಡ ಬೀಡಿ ಕಾರ್ಮಿಕರ ಕಷ್ಟಕಾರ್ಪಣ್ಯಗಳನ್ನು ಮನಗಂಡು ಅವರ ಬದುಕಿನ ಶ್ರೇಯಸ್ಸಿಗಾಗಿ ಅವಿರತ ದುಡಿ ದಿದ್ದಾರೆ. ಹಂಚಿನ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಪ್ರಥಮವಾಗಿ ಈ ಜಿಲ್ಲೆ ಯಲ್ಲಿ ಹೋರಾಟಕ್ಕಿಳಿದಾಗ ತಾನೂ ಅದ ರೊಂದಿಗೆ ಸೇರುವುದರೊಂದಿಗೆ ತನ್ನ ಹೋರಾಟದ ಜೀವನವನ್ನು ಆರಂಭಿಸಿದ ಇವರು ಸುದೀರ್ಘ ಕಾಲ ಅವಿಭಜಿತ ಕಮ್ಯುನಿಸ್ಟ್ ಕಾರ್ಯಕರ್ತನಾಗಿ ನಂತರ ಸಿಪಿಐ(ಎಂ) ನ ಮುಂದಾಳುವಾಗಿಯೂ ತನ್ನ ಕೊನೆಯುಸಿರಿ ನವರೆಗೂ ಮುಂದುವರಿದರು.

ಬಡತನದ ಬೇಗುದಿಯಲ್ಲಿ ಬೆಂದ ಇವರು ತನ್ನ ಬಡತನದ ಬಗ್ಗೆ ಕಿಂಚಿತ್ತೂ ಯೋಚಿಸದೆ ಕಾರ್ಮಿಕರ ಹಿತ ಚಿಂತನೆಯನ್ನೇ ಮಾಡುತ್ತಿದ್ದರು. ಇವರು ಮಾರ್ಕ್ಸ್ ವಾದದ ಮೇಲೆ ಅಪಾರ ನಂಬಿಕೆ ಯಿರಿಸಿಕೊಂಡಿದ್ದರು.



ದ.ಕ.ಜಿಲ್ಲಾ ಹಂಚಿನ ಕಾರ್ಮಿಕರ ಸಂಘದ ಪದಾಧಿಕಾರಿಯಾಗಿಯೂ, ಎರ ಡೂವರೆ ದಶಕಗಳ ಕಾಲ ಕೋಟೆಕಾರ್ ಸರ್ಕಲ್ ಬೀಡಿ ಮಜೂರರ ಸಂಘದ ಅಧ್ಯಕ್ಷರಾಗಿಯೂ ದುಡಿದ ಇವರು ಕಾರ್ಮಿಕರ ಬದುಕಿನಲ್ಲಿ ಕೆಂಪು ಚುಕ್ಕಿಯಾಗಿ ಉಳಿದರು.

ಶ್ರೀಯುತರು ಪತ್ನಿ, ಇಬ್ಬರು ಪುತ್ರಿ ಯರು, ಮೂವರು ಪುತ್ರರನ್ನು ಹಾಗೂ ಬಂಧುಗಳು ಮತ್ತು ಅಭಿಮಾನಿಗಳನ್ನು ಅಗಲಿರುತ್ತಾರೆ. ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ ಇವರ ಸಾವಿಗಾಗಿ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ.

ಕೆಎಸ್‌ಆರ್‌ಟಿಸಿ ಕಾರ್ಮಿಕ ನಾಯಕ ಅನಂತಸುಬ್ಬರಾವ್ ಹೇಳಿಕೆಗೆ ತೀವ್ರ

ಬೆಂಗಳೂರು: ಮುಷ್ಕರದ ಮೂಲಕವೇ ಸರಕಾರಕ್ಕೆ ಹಾಗೂ ಜನತೆಗೆ ಪಾಠ ಕಲಿಸುವ ಮತ್ತು ಬೇರೆ ಕಾರ್ಮಿಕ ಸಂಘಗಳಿಗೆ ಸಾರಿಗೆ ಸಂಸ್ಥೆಯಲ್ಲಿ ಮಾನ್ಯ ತೆ ನೀಡಿದರೆ ಆತ್ಮಾಹುತಿ ಮಾಡಿ ಕೊಳ್ಳುವ ಅನಂತ ಸುಬ್ಬರಾವ್ ಅವರ ಹೇಳಿಕೆಯನ್ನು ಕೆಎಸ್‌ಆರ್‌ಟಿಸಿ ಕಾರ್ಮಿಕರ ಸಂಘ(ಸಿಐಟಿಯು) ತೀವ್ರವಾಗಿ ಖಂಡಿಸಿದೆ.

ಪ್ರಜಾಸತ್ತಾತ್ಮಕ ರೀತಿಯಲ್ಲಿ ಸರಳ ಬಹುಮತದ ಆಧಾರದ ಮೇಲೆ ಮಾನ್ಯತೆ ನೀಡುವ ಪದ್ಧತಿ ಹಾಗೂ ಅಂತಹ ಚುನಾವಣೆಗಾಗಿ ಸಂಘ ಒತ್ತಾಯಿಸಿದೆ. ಭವಿಷ್ಯ ನಿಧಿನ್ಯಾಸ, ನೌಕರರ ಮರಣ-ನಿವೃತ್ತಿ ನಿಧಿ, ಘಟಕ ಮಟ್ಟದ ಕುಂದುಕೊರತೆ ನಿವಾರಣಾ ಸಮಿತಿಗಳಿಗೂ ಈಗಿನಂತೆ ಮಾನ್ಯತೆ ಪಡೆದ ಸಂಘದ ಸದಸ್ಯರನ್ನು ನಾಮಕರಣ ಮಾಡುವುದರ ಬದಲಾಗಿ ಚುನಾವಣೆಯ ಮೂಲಕ ಆಯ್ಕೆ ಮಾಡಬೇಕೆಂದು ಸಂಘ ಒತ್ತಾಯಿಸಿದೆ.

ಅದೇ ರೀತಿ ಪ್ರಯಾಣಿಕರ ಪ್ರತಿನಿಧಿಗಳು, ಆಡಳಿತ ವರ್ಗದ ಪ್ರತಿನಿಧಿಗಳು ಹಾಗೂ ಕಾರ್ಮಿಕ ಪ್ರತಿನಿಧಿಗಳನ್ನು ಒಳಗೊಂಡ ಸಂಚಾರ ಸಲಹಾ ಸಮಿತಿಗಳನ್ನು ರಚಿಸಬೇಕೆಂದೂ ಅದಕ್ಕೆ ಕಾರ್ಮಿಕ ಪ್ರತಿನಿಧಿಗಳನ್ನು ಚುನಾವಣೆಯ ಮೂಲಕ ಆಯ್ಕೆ ಮಾಡಬೇಕೆಂದು ಸಂಘವು ಒತ್ತಾಯಿಸಿದೆ.ಸಂಯುಕ್ತ ರಂಗ ಸರಕಾರದ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ'ದಂತೆ ಆಡಳಿತ ಮಂಡಳಿಗಳಲ್ಲಿ ಕಾರ್ಮಿಕ ಪ್ರತಿನಿಧಿಗಳಿಗೂ ಪಾಲು ಕೊಡುವ ಕಾರ್ಯಕ್ರಮದ ಅನುಷ್ಠಾನದ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕೆಂದು ಸಂಘವು ಒತ್ತಾಯಿಸಿದೆ.

1996 ರ ಜನವರಿಯಿಂದಲೇ ಸಾರಿಗೆ ಸಂಸ್ಥೆಯಲ್ಲಿ ಹೊಸ ಕೈಗಾರಿಕಾ ಒಪ್ಪಂದವಾಗ ಬೇಕಾಗಿದ್ದು ಒಂದೂವರೆ ವರ್ಷಗಳಷ್ಟು ದೀರ್ಘ ಅವಧಿಯ ನಂತರವೂ ಆಡಳಿತ ವರ್ಗ ಮಾತುಕತೆ ಆರಂಭಿಸದಿರುವುದು ಒಳ್ಳೆಯ ಪ್ರವೃತ್ತಿ ಅಲ್ಲ. ಕೈಗಾರಿಕಾ ಬಾಂಧವ್ಯದ ವೃದ್ಧಿ, ಸೌಜನ್ಯ ಪೂರ್ಣಸೇವೆ ಜನತೆಗೆ ಸಿಗಬೇಕೆನ್ನುವ ಸದುದ್ದೇಶದಿಂದ ಕೂಡಲೇ ಎಲ್ಲಾ ಕಾರ್ಮಿಕ ಸಂಘಗಳ ಪ್ರತಿನಿಧಿಗಳೊಂದಿಗೂ ಪ್ರಾಥಮಿಕ ಹಂತದ ಮಾತುಕತೆಗಳನ್ನು ಆರಂಭಿಸಬೇಕೆಂದು ಸಂಘಟನೆ ವಿನಂತಿಸಿಕೊಂಡಿದೆ.

ಪುಸ್ತಕ ಪರಿಚಯ

ಬಾಡ: ಸಾಮಾಜಿಕ ಪರಿವರ್ತನೆಯ ಆಶಯ ಹೊಂದಿದ ಮಹತ್ವಾಕಾಂಕ್ಷಿ ಕಾದಂಬರಿ

ಲೇ: ಕೆ.ವಿ.ರಾವ್.ಉಜಿರೆ, ಉ.ಕನ್ನಡ
ಪ್ರಪಂಚ ಪ್ರಕಾಶನ, ದರ್ಬೆ, ಪುತ್ತೂರು
ಪುಟ: 410, ಬೆಲೆ: ರೂ. 135/-
ವರ್ಷ: 1996.

– ಡಾ|| ಆರ್.ವಿ.ಭಂಡಾರಿ

ಡಾ|| ಶಿವರಾಮ ಕಾರಂತರ 'ಚೋಮನ ದುಡಿ' ಕನ್ನಡ ಕಾದಂಬರಿಗಳಲ್ಲಿ ಒಂದು ಕ್ಲಾಸಿಕ್. ಅದರ ಮರು ಹುಟ್ಟು 'ಬಾಡ'. ಇದರ ಅರ್ಥ 'ಬಾಡ' 'ದುಡಿ'ಯ ಅನುಕರಣೆ, ಪ್ರೇರಿತ ಇತ್ಯಾದಿ ಯಾವುದೂ ಅಲ್ಲ. ಆದರೆ 'ದುಡಿ'ಯ ಚರಿತ್ರೆಯ ಮುನ್ನಡೆಯೇ 'ಬಾಡ'. ಆದರೂ ಅದು ಅಷ್ಟೇ ಅಲ್ಲ. 'ದುಡಿ'ಯಲ್ಲಿ ಸಾಮಾಜಿಕ ವ್ಯವಸ್ಥೆಯ ಪರಿಣಾಮ ಪ್ರತಿಫಲಿಸುವುದು ವ್ಯಕ್ತಿನಿಷ್ಠತೆಯಲ್ಲಿ. ಆದರೆ 'ಬಾಡ'ದಲ್ಲಿ ಇದು ಫಲಿಸುವುದು ಸಮಷ್ಟಿಯಲ್ಲಿ. ಎರಡೂ ಕಾದಂಬರಿಗಳ ದಾರಿ ಬೇರೆ ಬೇರೆಯೇ, ಆದರೆ ಚರಿತ್ರೆ ಮಾತ್ರ ಒಂದೇ. 'ಚೋಮನ ದುಡಿ' ಪ್ರಕಟವಾದ ಐವತ್ತು ವರ್ಷಗಳ ನಂತರ 'ಬಾಡ' ಪ್ರಕಟವಾಗಿದೆ. 'ದುಡಿ'ಯಲ್ಲಿ ಚೋಮ ಕಥಾನಾಯಕನಾದರೆ 'ಬಾಡ'ದಲ್ಲಿ ಬಾಡನೇ ನಾಯಕ. 'ದುಡಿ' ಏಕಶಿಲ್ಪ ಬಿಗಿಬಂಧ ಹೊಂದಿದ್ದರೆ 'ಬಾಡ' ಚದುರಿದ್ದು.

ಬಾಡದಲ್ಲಿ ನಾಲ್ಕುಭಾಗಗಳಿವೆ. ಮೊದಲ ಭಾಗ 'ಆ ದಾರಿ' - ಬಾಡನ ತಂದೆ ಬೊಗ್ರ ಬಾಣಾರ ಪಡಿಯಾರರ ಮನೆಯ ಜೀತದ ದಲಿತ. ಬೊಗ್ರನ ಬದುಕು ಜೀತಕ್ಕೆ ಒಗ್ಗಿದ್ದು. ಶೋಷಣೆಗೆ ಸಿಲುಕಿದ್ದು, ಅಸ್ಪೃಶ್ಯತೆ, ಬಡತನ,ಭಯ ಎಲ್ಲವೂ ಮಡುಗಟ್ಟಿಕೊಂಡದ್ದು. ಈ ಮಧ್ಯೆ 'ಬಾಡ' ಬೇರೆಯೇ ಆಗುತ್ತಾನೆ. ಆತನಿಗೆ ಬಾಣಾರರೆಂದರೆ ಆಗದು. ಆ ಕಾರಣಕ್ಕಾಗೇ ಕಾಫಿ ತೋಟದ ಕೂಲಿಗೆ ಹೋಗುತ್ತಾನೆ. ಹಾಗೆ ಹೋಗಲು ಮನಸ್ಸು ಮಾಡುವುದೇ ಹೊಸ ಬದುಕಿನ ದಾರಿ ಹುಡುಕಲು. ಕಾಫಿ ತೋಟದಲ್ಲಿ ಕಾರ್ಮಿಕರು ಮೂರ್ತಿಯ ಜಾಗೃತ ಶಾಲೆಯಿಂದಾಗಿ ಜಾಗೃತರಾಗುತ್ತಾರೆ. ಬಾಡ ಅದರಲ್ಲಿ ಪ್ರಮುಖ.

'ಈದಾರಿ' ಎರಡನೇ ಭಾಗ. ಇಲ್ಲಿ ಬಾಡನ ದಾರಿ ವಿಶಿಷ್ಟ. ಇದು ಬೊಗ್ರನ ದಾರಿ ಅಲ್ಲ. ಇದು ಎಚ್ಚೆತ್ತ ಹೋರಾಟದ ದಾರಿ. ಬೊಗ್ರ ಸಾಯುತ್ತಾನೆ. ಬಾಡ ಜೀತದ ಸಾಲ ತೀರಿಸುತ್ತಾನೆ. ಆದರೆ ಬಾಣಾರರ ಬದುಕಿನಲ್ಲೂ ಪರಿವರ್ತನೆಯಾಗುತ್ತದೆ: ಅವರು ತಮ್ಮ ನೆಲವನ್ನು ಮಾರುತ್ತಾರೆ. ಇದರಿಂದ ದಲಿತರು ನೆಲೆ ತಪ್ಪುತ್ತಾರೆ. ಅಲ್ಲಿಯೇ ಹೋರಾಟ, ನಂತರ ವಸತಿ ಪರಿವರ್ತನೆ. ಮೂರನೇಯ ಭಾಗ 'ನಡುವಾರಿ' ಇಲ್ಲಿ ಹೋರಾಟ ಮುಂದುವರಿಯುತ್ತದೆ. ದಲಿತ ಸಮಾಜದ ಜಾಗೃತಿ ಮತ್ತು ಒಗ್ಗಟ್ಟು ಬೆಳೆಯುತ್ತದೆ. ಹೊಸತಲೆಮಾರಿನ ದಲಿತ ಯುವಕರಲ್ಲಿ ಅಭೂತಪೂರ್ವ ಕೆಚ್ಚು ರೊಚ್ಚು ಮತ್ತು ರಚನಾತ್ಮಕ ಹೋರಾಟ ಕಂಡುಬರುತ್ತದೆ. ಅದೇ ಹೊತ್ತಿಗೆ ಸಮಾಜದ ಮೇಲ್ಜಾತಿಯ, ಮೇಲ್‌ವರ್ಗದ ಹಳೆಯ ಶಕ್ತಿಗಳು ಹೊಸ ರೂಪದಲ್ಲಿ ಮೂಡುತ್ತವೆ. ಸಂಘರ್ಷ ಮೂರ್ತಗೊಳ್ಳುತ್ತದೆ. ಸಿಖರ ಬಿಂದುವಿಗೆ ತಲುಪುತ್ತದೆ.

ಮುಂದಿನದು 'ಹೊಸ ದಾರಿ' - ಇದು ಯಾಂತ್ರೀಕರಣದ ಯುಗ. ಯಾವುದೇ ಹೊಸ ವಿಧಾನ ಬಂದರೂ ಮೊದಲು ಬಲಿ ಆಗುವವರು ದಲಿತರು. ಯಂತ್ರವ, ಕಂಪ್ಯೂಟರ್‌ಗಳ ಬಳಕೆ ಸಮಾಜಕ್ಕೆ ಹೇಗೆ ಕುತ್ತಾಗಬಹುದೆಂಬುದು ಇಲ್ಲಿಯ ಗಣ್ಯ ವಿಷಯ. ಆದರೆ ಇಲ್ಲಿರುವುದು ವಿಜ್ಞಾನ ವಿರೋಧಿ ನಿಲುವಲ್ಲ. ವಿಜ್ಞಾನದ ಸಮಾಜ ಪಾತ ಧೋರಣೆಯ ಚಿಂತನೆ ಇಲ್ಲಿದೆ.

ಈ ಹೊಸ ದಾರಿಯಲ್ಲಿ ನಡೆಯುವವರು ಬೊಗ್ರನಿಂದ ಮೂರನೇ ತಲೆಗಳವರು. ಈ ತಲೆಮಾರು ದಲಿತರ ಜಾಗ್ರತ ಪ್ರಜ್ಞೆಯ ಮತ್ತು ಸಾಹಸ, ಜಾಣ್ಮೆಯ ಪ್ರದರ್ಶನದ ಕಾಲ. ಬೊಗ್ರ ಅಜ್ಜನಾದರೆ ನಾಗ ಮೊಮ್ಮಗ, ಈ ಎರಡರ ಮಧ್ಯೆ ಸಿಲುಕುವವನು ಬಾಡ. ಬಾಡನಲ್ಲಿ ಹಳೆಯದರ ಮತ್ತು ಹೊಸದರ ಒಂದು ಸಂಗಮಬಿಂದುವಿದೆ. ಆತ ತನ್ನ ಮಗ ನಾಗನಂತೆ ಹಳೆಯದರ ಹಂಗು ಹರಿದು ಹೋಗಲಾರ. ಹಾಗೆಯೇ ಅಪ್ಪ ಬೊಗ್ರನಂತೆ ಗುಲಾಮ ಆಗಲಾರ. ಅಪ್ಪನ ಅಂತರಂಗಕ್ಕೆ ಮಿಡಿಯುವುದು, ಒಡೆಯರಾದ ಬಾಣಾರ ಪಡಿಯಾರರ ಮೇಲಿನ ಬಾಲ್ಯದ ದ್ವೇಷವನ್ನು ಮರೆತು ಚರಿತ್ರೆಯ ಸೂಕ್ಷ್ಮವನ್ನು ಗ್ರಹಿಸಿ ನಡೆಯುವ ಮಾಗಿದ ಕ್ರಿಯೆಯನ್ನು ತೋರುವುದು ಹಾಗೆಯೇ ತನ್ನ ಮಗ ನಾಗನ ವಿಧರ್ಮಿ ಮದುವೆ ಮತ್ತು ಕರುಳ ಬಳ್ಳಿಯ ಮಿಡಿತಕ್ಕೆ ಅನ್ಯನಾಗುವ ರೀತಿಗೆ ಅಂತರಂಗದಲ್ಲೇ ನೋಯುವುದು ಅವನನ್ನು ಒಂದು ಸಂಕೀರ್ಣ ವ್ಯಕ್ತಿಯನ್ನಾಗಿ ಮಾಡುತ್ತದೆ.


ಸಮಾಜದ ಪುನರ್ಘಟನೆ ಸಂಭವಿಸುವಾಗ ಅನೇಕ ಹೃದ್ರಾವಕ ಘಟನೆಗಳು ಸಂಭವಿಸುತ್ತವೆ. ಲೇಖಕ ತನ್ನ ಪಕ್ಷಪಾತದಲ್ಲಿ ವಾಸ್ತವದ ಸಂಗತಿಗೆ ಕುರುಡಾಗದಿರುವುದು ಇಲ್ಲಿಯ ಹೆಚ್ಚಳ. ಅಂಥ ಒಂದು ಘಟನೆ ಪಡಿಯಾರರ ಬದುಕಿನಲ್ಲಿ ಸಂಭವಿಸುತ್ತದೆ. ಅವರ ಮಗ ಅಮೇರಿಕದಲ್ಲಿರುವಾತ. ವೈಜ್ಞಾನಿಕ ಸಂದರ್ಭದ ಶಿಶು. ತನ್ನ ಜಮೀನನ್ನು ಮಾರಾಟ ಮಾಡಲು ಅಪ್ಪನನ್ನು ಒಪ್ಪಿಸುತ್ತಾನೆ. ಜಮೀನು ವಾಣಿಜ್ಯೀಕರಣಕ್ಕೆ, ಯಾಂತ್ರೀಕರಣಕ್ಕೆ ಒಳಗಾಗುತ್ತದೆ. ಒಂದು ಕಡೆ ದಲಿತರು, ಅನಾಥರಾದರ ಇನ್ನೊಂದು ಕಡೆ ಪಡಿಯಾರರ ಸಂಸಾರ(ಗಂಡ ಹೆಂಡತಿ) ಜಮೀನುದಾರಿ ಮತ್ತು ವರ್ಣಾಧಾರಿತ ವ್ಯವಸ್ಥೆಯ ಬೇರನ್ನು ಕತ್ತರಿಸಿಕೊಂಡು ಕತ್ತರಿಸಿದ ಇಲಿಯ ಬಾಲದ ಹಾಗೆ ಮಿಡುಕುತ್ತಾರೆ.

ಸಮಾಜದಲ್ಲಿ ಸಂಭವಿಸುವ ಚಾರಿತ್ರಿಕ ಘಟನೆಗಳು ಸರಳವಾಗಿ ಬಿಡಿಬಿಡಿಯಾಗಿ ಘಟಿಸುವುದಿಲ್ಲ. ಅದರ ಸಂಕೀರ್ಣತೆ ಅತ್ಯಂತ ಸೂಕ್ಷ್ಮವಾಗಿರುತ್ತದೆ. ಕಾಫಿ ಪ್ಲಾಂಟೇಶನ್ ಹೃದ್ರಾವಕ ಶೋಷಣೆಯ ಕೇಂದ್ರ. ಆದರೇ ಅಲ್ಲಿಯೇ ದಲಿತ ಮತ್ತು ಕಾರ್ಮಿಕ ಜಾಗ್ರತಿ ಮೂಡಿಬರುತ್ತದೆ. ದಲಿತ ಹೋರಾಟ ತನ್ನ ಅವಶ್ಯಕತೆಯಲ್ಲಿ ಸಾಮೂಹಿಕವಾಗಿದ್ದರೆ ಅದರ ವಿರುದ್ಧ ಕ್ರಿಯೆ ಕೂಡ ಧರ್ಮ-ಜಾತಿಯ ರೂಪಿನಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಅದರ ಹಿಂದಿರುವ ಬಂಡವಾಳ ಶಾಹಿ ಸೂಕ್ಷ್ಮತೆ ಕಣ್ಣಿಗೆ ಕಾಣುವುದಿಲ್ಲ. ಬೆಳ್ಳನನ್ನು ಮದುವೆಯಾಗುವ ಪ್ರತಿಮಾಳ (ಬ್ರಾಹ್ಮಣರ ಹುಡುಗಿ) ಹಿಂದಿನ ಒತ್ತಡದಲ್ಲಿ ಆಧುನಿಕತೆ ಇರುವುದಾದರೂ ಆಧುನಿಕ ವಿದ್ಯೆಯನ್ನು ಮತ್ತು ಹೊಸ ಔದ್ಯೋಗಿಕ ಬದುಕನ್ನು ಅಪ್ಪಿಕೊಳ್ಳುವುದರಲ್ಲೇ ಅವರ ತಂದೆ-ತಾಯಿ ನರಳುವಿಕೆಯ ಅವರ ಬೀಜ ಅಡಗಿತ್ತು. ಹೀಗೆ ಚರಿತ್ರೆಯ ಅನೇಕ ಸೂಕ್ಷ್ಮತೆಯನ್ನು ಲೇಖಕರು ಗಮನಿಸಿದ್ದಾರೆ. ಬಾಡನ ಕನಸು ನನಸಾಗಿ ಸಂಭವಿಸುವುದು ಅವನ ಮಗನಲ್ಲಲ್ಲ. ಬದಲಾಗಿ ಆತನ ಅಣ್ಣನ ಮಗ ಬೆಳ್ಳನಲ್ಲಿ. ಇದು ಕೂಡಾ ಸಮಾಜ ಪರಿವರ್ತನೆಯ ನಿಯಮ ಅನುವಂಶಿಕವಾಗಿ ಅಲ್ಲ ಎಂಬುದನ್ನು ಪುಷ್ಟೀಕರಿಸುತ್ತದೆ. ಮತ್ತು ಎಲ್ಲ ಪರಿವರ್ತನೆಯ ನೋವಿನ ಸಿಗಿನಿಗಿ ಕೆಂಡವನ್ನು ಹಾದು ಹೋಗಿ ಮುಟ್ಟಬೇಕಾದುದು ಒಂದು ದಿವ್ಯ ಗುರಿಯನ್ನು. ಅಲ್ಲಿ ಜಾತಿಯ ಸಂಕುಚಿತತೆ, ವಂಶದ ಮೇಲ್ಮೆ-ಕೀಳ್ಮೆ ಪ್ರಾದೇಶಿಕ ಗಡಿ ಇವೆಲ್ಲವನ್ನು ಮೀರಿ ವಿಶಾಲವಾದ ಮಾನವೀಯತೆಯಲ್ಲಿ ಸಂಭವಿಸಬೇಕಾಗಿದೆ. ಅದು ಸಂಭವಿಸುವುದು ಅತ್ಯಂತ ಕನಿಷ್ಠ ಎಂಬ ವರ್ಗ-ಮತ್ತು ಜಾತಿ ಸಂಪೂರ್ಣ ಬಂಧಮುಕ್ತವಾದಾಗಲೇ ಮತ್ತು ಅಲ್ಲಿಂದಲೇ ಎಂದು ಕಾದಂಬರಿ ಧ್ವನಿಸುತ್ತದೆ.

ಕಾದಂಬರಿಯ ಬೀಸು ದೊಡ್ಡದು. ಆದರೆ ಅಷ್ಟೇ ಯಶಸ್ಸನ್ನು ನಿರ್ವಹಣೆಯಲ್ಲಿ ಗಳಿಸಿಲ್ಲ. ವಸ್ತು ಸಂಘಟನೆಯಲ್ಲಿ, ಪಾತ್ರ ಪೋಷಣೆಯಲ್ಲಿ ಇನ್ನೂ ಹೆಚ್ಚು ದಕ್ಷತೆ ಮತ್ತು ಕುಶಲತೆಯ ಕೊರತೆಯಿಂದಾಗಿ ಚೋಮನ ದುಡಿಯಂತೆ ಒಂದು ಕ್ಲಾಸಿಕ್ ಆಗುವ ಅವಕಾಶವನ್ನು ಕುಂದಿಸಿಕೊಂಡಿದೆಯಾದರೂ ಉತ್ತಮ ದರ್ಜೆಯ ಕಾದಂಬರಿಯ ಸ್ಥಾನ ಪಡೆದಿದೆ.

ಕಾಸ್ಪರೋವ್‌ಗೆ ಕಂಪ್ಯೂಟರ್‌ನಿಂದ ಸೋಲು

ಮಾನವ ಹಿರಿಮೆಯ ಯುಗ ಮುಗಿಯಿತೆ?



ಇತ್ತೀಚೆಗೆ ವಿಶ್ವದ ಅಗ್ರಮಾನ್ಯ ಚದುರಂಗ ಪ್ರವೀಣ ಗ್ಯಾರಿ ಕ್ಯಾಸ್ಪರೋವ್ ಐ.ಬಿ.ಎಂ.ವಿನ್ಯಾಸ ಮಾಡಿದ ಡೀಪ್‌ಬ್ಲೂ ಸೂಪರ್ ಕಂಪ್ಯೂಟರ್‌ನಿಂದ ಮೂರುವರೆ - ಎರಡೂವರೆ ಆಟಗಳಲ್ಲಿ ಸೋತಿರುವುದು ಹಲವರಲ್ಲಿ ಹಲವು ಪ್ರಶ್ನೆಗಳ ನ್ನೆಬ್ಬಿಸಿದೆ. ಕೊನೆಗೂ ಮಾನವನ ಶ್ರೇಷ್ಠತೆಯ ಯುಗ ಕೊನೆಗೊಂಡಿತೆ? ಮಾನವ ವಿಕಾಸ ಪ್ರಕ್ರಿಯೆ ಮುಗಿಯಿತೆ? ಯಂತ್ರಗಳ ಯುಗ ಆರಂಭವಾಯಿತೆ? ಇತ್ಯಾದಿ, ಇತ್ಯಾದಿ

ಚದುರಂಗ ಅಥವಾ ಚೆಸ್ ಒಂದು ಕ್ಲಿಷ್ಟ ಆಟ ನಿಜ, ಆದರೆ ಅದರ ನಿಬಂಧನೆಗಳು ಸ್ಪಷ್ಟ. ಎದುರಾಳಿಯು ಯಾವ 'ಮೂವ್' ಮಾಡಿದರೆ ಅದನ್ನು ಹೇಗೆ ಎದುರಿಸಬಹುದು ಎಂಬ ಲೆಕ್ಕಾಚಾರ ಮಾಡುವ ಸಾಮರ್ಥ್ಯ ಮತ್ತು ಹಿಂದಿನ ಚೆಸ್ ಪ್ರವೀಣರುಗಳ 'ಮೂವ್'ಗಳ ಪರಿಜ್ಞಾನ ಬಹಳ ಸಹಾಯವಾಗುತ್ತದೆ. ತಮ್ಮ ಸೂಪರ್ ಕಂಪ್ಯೂಟರ್‌ಗಳ ಜಾಹೀರಾತಿಗೆ ನೆರವಾಗಬಹುದೆಂಬ ನಿರೀಕ್ಷೆಯಿಂದ ಕೋಟ್ಯಾಂತರ ಡಾಲರುಗಳು ಸುರಿದು ಐ.ಬಿ.ಎಂ. ಕಂಪೆನಿ 512 ಚೆಸ್ ಪ್ರೊಸೆಸರ್‌ಗಳಿಂದಾಗಿ ಒಂದು ಸೆಕೆಂಡಿಗೆ 20 ಕೋಟಿ 'ಪೊಸಿಶನ್'ಗಳನ್ನು ವಿಶ್ಲೇಷಿಸುವ ಯಂತ್ರ ಸಾಮರ್ಥ್ಯವಿರುವ ಗಣಕ ಯಂತ್ರ ರೂಪಿಸಿತು. ಅಲ್ಲದೆ ಕಳೆದ ನೂರು ವರ್ಷಗಳಲ್ಲಿ ಮಹಾನ್ -ಮಹಾನ್ ಚೆಸ್ ಪ್ರವೀಣರು ಮಾಡಿದ 'ಮೂವ್'ಗಳ ದಾಖಲೆಗಳನ್ನು ಈ ಕಂಪ್ಯೂಟರ್‌ಗೆ 'ಉಣ್ಣಿಸಲಾಯಿತು'. ಆದ್ದರಿಂದ ವಾಸ್ತವವಾಗಿ ಕ್ಯಾಸ್ಪರೋವ್ ಆಡುತ್ತಿದ್ದುದು ಒಂದು ಯಂತ್ರದ ವಿರುದ್ಧವಲ್ಲ, ಹಿಂದಿನ ನೂರಾರು ಮಹಾ ಚೆಸ್ ಪ್ರವೀಣರುಗಳ, ಗ್ರ್ಯಾಂಡ್ ಮಾಸ್ಟರುಗಳ ಭೂತ ಗಳೊಂದಿಗೆ ಕೂಡಾ.

ಇಲ್ಲಿ ಇನ್ನೊಂದು ಗಮನಿಸಬೇಕಾದ ಸಂಗತಿಯೆಂದರೆ ಕಾಸ್ಪರೋವ್ ಮೊದಲ ಆಟ ಗೆದ್ದರು. ಎರಡನೆ ಯದರಲ್ಲಿ ಮುಂದಿನ 'ಚಲನೆ' ತನ್ನಿಂದ ಸಾಧ್ಯವಾಗದು ಎಂದು ಬಿಟ್ಟುಕೊಟ್ಟರು. ಆದರೆ ಹಾಗೆ ಬಿಟ್ಟು ಕೊಟ್ಟ ನಂತರ ಒಬ್ಬ ಅನಾಮಧೇಯ ಚೆಸ್ ಆಟಗಾರ ಇಂಟರ್‌ನೆಟ್ ಕಂಪ್ಯೂಟರ್ ಜಾಲದಲ್ಲಿ ಒಂದು ರಕ್ಷಣಾ 'ಚಲನೆ'ಯ ಮೂಲಕ ಹೇಗೆ ಕ್ಯಾಸ್ಪರೋವ್ ಆಟವನ್ನು ಸಮಗೊಳಿಸಬಹುದಾಗಿತ್ತು ಎಂಬುದನ್ನು ವಿವರಿಸಿದನಂತೆ.

ಅದೇನೇ ಇರಲಿ, ಯಂತ್ರದ ಬುದ್ಧಿಮತ್ತೆಯ ಮುಂದೆ ಮಾನವ ಬುದ್ಧಿಮತ್ತೆ ತಲೆಬಾಗಬೇಕಾಗಿ ಬಂದಿದೆಯೇ ಎಂಬ ಪ್ರಶ್ನೆಯಂತೂ ಹಲವರಲ್ಲಿ ಎದ್ದಿದೆ. ಮಾನವ ಬುದ್ಧಿಮತ್ತೆ ಎಂದರೇನು ಎಂಬ ಬಗ್ಗೆ ಅರಿಯಲು ನಮ್ಮ ಅಸಾಮರ್ಥ್ಯವೇ ಈ ಪ್ರಶ್ನೆಗೆ ಉತ್ತರ ಕಠಿಣವೆನಿಸಲು ಕಾರಣ ಎನ್ನುತ್ತಾರೆ ಒಬ್ಬ ಮಾಹಿತಿ ತಂತ್ರಜ್ಞಾನ ವಿಶೇಷಜ್ಞರು. "ಕೃತಕ ಬುದ್ಧಿಮತ್ತೆ" ಎಂಬ ವಿಜ್ಞಾನ ವಿಭಾಗದಲ್ಲಿ ಸಾಧಿಸಿದ ಮುನ್ನಡೆಗಳಿಂದಾಗಿ ಮಾನವನ ಮನಸ್ಸು ಹೇಗೆ ಕೆಲಸ ಮಾಡುತ್ತದೆಯೆಂಬುದಾಗಿ ಕ್ರಮೇಣ ಸ್ಪಷ್ಟವಾಗುತ್ತದೆ. ಮಾನವ ಬುದ್ಧಿಮತ್ತೆಯ ಬಗ್ಗೆ ಸಾಕಷ್ಟು ತಿಳಿದರೆ ಯಂತ್ರಗಳು ಎಷ್ಟು ಬುದ್ಧಿವಂತರು ಎಂದು ಹೇಳಬಹುದು. 'ಕೃತಕ ಬುದ್ಧಿಮತ್ತೆ'ಯ ರಂಗದಲ್ಲಿನ ಪ್ರಸ್ತುತ ಸಂಶೋಧನೆಗಳನ್ನು ನೋಡಿದರೆ ಮಾನವ ಬುದ್ಧಿಮತ್ತೆಯನ್ನು ಅರ್ಥಮಾಡಿಕೊಂಡು ಅದನ್ನು ಬಳಸಿ ಯಂತ್ರಗಳಿಗೆ ಅಳವಡಿಸಲು ಬಹಳ ಸಮಯವೇನೂ ಬೇಕಾಗುವುದಿಲ್ಲ ಎನ್ನುತ್ತಾರೆ ಈ ತಜ್ಞರು.

ಮಾನವ ಇತರ ಪ್ರಾಣಿಗಳಿಗಿಂತ ಭಿನ್ನವಾಗಿರುವುದು ಹೆಚ್ಚು ಬುದ್ಧಿವಂತರಾಗಿರುವುದರಿಂದ- ಇದು ಮಾನವರು ತಮ್ಮ ಬಗ್ಗೆ ಹೊಂದಿರುವ ಕಣ್ಣೋಟ. ಆದ್ದರಿಂದ ಯಂತ್ರಕ್ಕೆ ಹೆಚ್ಚು ಬುದ್ಧಿವಂತಿಕೆ ಸಾಧ್ಯ ಎಂಬುದು ನಮ್ಮ 'ಶ್ರೇಷ್ಠತೆ'ಯ ಭಾವನೆಗೆ ಬಂದಿರುವ ಒಂದು ಧಕ್ಕೆ. ಯಂತ್ರಗಳಿಗೆ ಹೋಲಿಸಿದರೆ ನಾವು ಕೀಳೇ ಎಂಬ ಕೀಳರಿಮೆ ಹಲವರನ್ನು ಬಾಧಿಸಬಹುದು. ಆದರೆ ಒಂದು ವಿಷಯ ನೆನಪಿನಲ್ಲಿಡಬೇಕು ಎನ್ನುತ್ತಾರೆ ಈ ಮಾಹಿತಿ ತಂತ್ರಜ್ಞರು. ಅದೇನೆಂದರೆ ಯಂತ್ರದ ಬುದ್ಧಿಮತ್ತೆ ಯಂತ್ರದ್ದಲ್ಲ - ಅದು ವಿಜ್ಞಾನಿಗಳ ಮಾನವ 'ಶ್ರಮ'ದ ಘನೀಕೃತ ರೂಪವಷ್ಟೆ. ಚೆಸ್ ಆಡುವುದಾಗಲೀ, ಇತರ ಸಮಸ್ಯೆಗಳನ್ನು ಬಗೆ ಹರಿಸುವುದಾಗಲೀ ಯಂತ್ರದ ಉದ್ದೇಶವಂತೂ ಅಲ್ಲ - ಮಾನವನೇ ಆ ಯಂತ್ರಗಳಲ್ಲಿ ಹಾಕಿದ ಅಂಶಗಳು ಅವು. ಆದ್ದರಿಂದ ಕೀಳರಿಮೆಯ ಬದಲು ಇವನ್ನು ಮಾನವನ ಒಂದು ಕಿರೀಟಪ್ರಾಯ ಸಾಧನೆ ಎನ್ನಬಹುದಲ್ಲವೇ?

ಮಾನವ ಕಾರುಗಳನ್ನು ತಯಾರಿಸಿದ್ದಾನೆ, ಆದರೆ ಅವುಗಳೊಡನೆ ತಾನೇ ಸ್ವತಃ ಸ್ಪರ್ಧೆಗಿಳಿಯುತ್ತಾನೆಯೆ? ಹಾಗಿರುವಾಗ ಯಂತ್ರವೊಂದು ನಮ್ಮನ್ನು ಚೆಸ್‌ಆಟದಲ್ಲಿ ಸೋಲಿಸಿದರೆ ನಮಗೇಕೆ ಕೀಳರಿಮೆ ಬರಬೇಕು - ಇದು ಅವರ ಪ್ರಶ್ನೆ. ನಿಜ, ಯಂತ್ರಗಳನ್ನು ನೋಡಿದಾಗ ನಮ್ಮ ಕೊರತೆಯ ಭಾವನೆ ಬರಬಹುದು. ಆದರೆ ಯಂತ್ರಗಳು ತಾವೇ ಶ್ರೇಷ್ಠರು ಎಂಬ ಮೇಲರಿಮೆ ಹೊಂದುವ ಭಯವಿಲ್ಲ. ಏಕೆಂದರೆ ಈ ಮೇಲರಿಮೆ ಕೀಳರಿಮೆ ಎಂಬುದು ಕೇವಲ ಮಾನವನ ಮೂರ್ಖತನದ ಆಸ್ತಿ!

ಮಹಿಳೆಯರ ಆರೋಗ್ಯದೊಂದಿಗೆ ಚೆಲ್ಲಾಟವಾಡುತ್ತಿರುವ ಡಾಕ್ಟರುಗಳು

ಡಾ|| ಜೆ.ಕೆ.ಜೈನ್ ಹೆಸರು ನೀವು ಕೇಳಿರಬಹುದು. ಆತ ಮಾಜಿ ರಾಜ್ಯಸಭಾ ಸದಸ್ಯ - ಬಿಜೆಪಿ ಪಕ್ಷದಿಂದ. ಹಾಗೂ ವೈದ್ಯ ಕೂಡಾ. ಮೇ 2 ರಂದು ಕೋಪೋದ್ರಿಕ್ತ ಮಹಿಳೆಯರು ಇವರನ್ನು ಘೆರಾವ್ ಮಾಡಿ ಪ್ರಶ್ನೆಗಳನ್ನು ಕೇಳಿದಾಗ ನಿರುತ್ತರರಾದ ವೈದ್ಯ. ಇವರ ಮೇಲೆ ಈಗಿರುವ ಆಪಾದನೆಯೆಂದರೆ ಕ್ವಿನಾಕ್ರಿನ್ ಎಂಬ ಔಷಧಿಯನ್ನು ಸಂತಾನಹರಣಕ್ಕಾಗಿ ಬಡ ಮಹಿಳೆಯರ ಮೇಲೆ ಪ್ರಯೋಗಿಸಲು ಇತರ ಡಾಕ್ಟರುಗಳಿಗೆ ಕಾನೂನುಬಾಹಿರವಾಗಿ ಹಂಚುತ್ತಿದ್ದರು ಎಂದು.

ಏಳು ರಾಷ್ಟ್ರಮಟ್ಟದ ಮಹಿಳಾ ಸಂಘಟನೆಗಳು ನಡೆಸಿದ ಈ ಮತ ಪ್ರದರ್ಶನದಲ್ಲಿ ಹಲವು ಸ್ಥಳೀಯ ಸಂಘಟನೆಗಳು ಮತ್ತು ಡಾಕ್ಟರುಗಳು ಭಾಗವಹಿಸಿದ್ದರು. "ಡಾಕ್ಟರೋ ಕ್ರಿಮಿನಲ್ಲೋ? ಕ್ವಿನಾಕ್ರಿನ್ ಕಾನೂನುಬಾಹಿರ ಪೂರೈಕೆ ನಿಲ್ಲಿಸಿ" "ಕ್ವಿನಾಕ್ರಿನ್ ಬಳಕೆ ನಿಲ್ಲಿಸಿ - ಇಲ್ಲವೇ ಬಂಧನ ಎದುರಿಸಿ" ಇತ್ಯಾದಿ ಘೋಷಣಾ ಫಲಕಗಳನ್ನು ಹೊತ್ತ ಮತಪ್ರದರ್ಶಕರು ಜೈನ್ ಮೆಡಿಕಲ್ ಸೆಂಟರ್ ಎದುರು ಪ್ರತಿಭಟನೆ ನಡೆಸಿದರು. ಎಐಡಿಡಬ್ಲ್ಯುಎ ನ ಬೃಂದಾ ಕಾರಟ್, ಎಂಡಿಎಸ್‌ನ ಕೈಲಾಶ್ ರೇಖಿ, ಡ.ಡಬ್ಲ್ಯು.ಪಿ.ನ ಜ್ಯೋತ್ಸ್ನಾ ಚಟರ್ಜಿ, ಎನ್.ಎಫ್.ಐ.ಡಬ್ಲ್ಯು ನ ಪ್ರಮಿಳಾ ಲುಂಬಾ ಮಹಿಳೆಯರ ಆರೋಗ್ಯಕ್ಕೆ ಹಾನಿಕಾರಕವಾದ ಒಂದು ಔಷಧಿಯನ್ನು ಕಾನೂನು ಬಾಹಿರವಾಗಿ ಪೂರೈಸುವ ಅನೈತಿಕ ಆಚರಣೆಯನ್ನು ಬಲವಾಗಿ ಖಂಡಿಸಿದರು.

ಕ್ವಿನಾಕ್ರಿನ್ ಒಂದು ಮಲೇರಿಯಾ - ನಿರೋಧಕ ಗುಳಿಗೆ. ಇದನ್ನು ಮಹಿಳೆಯ ಗರ್ಭಾಶಯಕ್ಕೆ ಸೇರಿಸಿದಾಗ ಊದಿಕೊಂಡು ಒಂದು ಪೊರೆಯುಂಟಾಗಿ ಅಂಡನಾಳಗಳನ್ನು ಅಡ್ಡಗಟ್ಟುತ್ತದೆ. ಇದರಿಂದ ಗರ್ಭಧಾರಣೆಯನ್ನು ತಡೆಯುತ್ತದೆ. 1993 ರಲ್ಲಿ ಭಾರತ ವೈದ್ಯಕೀಯ ಸಂಶೋಧನಾ ಮಂಡಳಿ ಇದು ಪ್ರಯೋಜನಕಾರಿಯಲ್ಲ ಎಂದು ಹೇಳಿ ಇದರ ಬಳಕೆಯನ್ನು ಹಿಂತೆಗೆದುಕೊಂಡ ನಂತರ ಯಾವುದೇ ಖಾಸಗಿ ವೈದ್ಯರಿಗೆ ಅಥವಾ ಸರಕಾರಿ ಏಜೆಂಸಿಗೆ ಈ ಗುಳಿಗೆಯ ಪೂರೈಕೆಯ ಲೈಸೆನ್ಸ್ ನೀಡಿಲ್ಲ ಎಂದು ಔಷಧಿ ನಿಯಂತ್ರಕರು ಸ್ಪಷ್ಟವಾಗಿ ಹೇಳಿದ್ದಾರೆ. ಇದನ್ನು ಆಮದು ಮಾಡಿಕೊಳ್ಳಲು ಕೂಡಾ ಯಾರಿಗೂ ಆಮದು ಲೈಸೆನ್ಸ್ ನೀಡಿಲ್ಲ.

ಅಲ್ಲದೆ 1994 ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ WHO ಇನ್ನಷ್ಟು ಪ್ರಯೋಗಶಾಲೆಯ ಪ್ರಯೋಜನಗಳ ನಂತರವೇ ಇದನ್ನು ಬಳಸಬೇಕು ಎಂದು ನಿರ್ಬಂಧ ಹಾಕಿತ್ತು. ಈ ರೀತಿ ಡಾ|| ಜೈನ್ ಈ ಗುಳಿಗೆಯನ್ನು ಸರಬರಾಜು ಮಾಡುತ್ತಿರುವುದು ಅನೈತಿಕ ಹಾಗೂ ಕಾನೂನುಬಾಹಿರ ಕೂಡಾ ಎಂಬುದು ಮತಪ್ರದರ್ಶಕರ ವಾದವಾಗಿತ್ತು.

ಪ್ರತಿಭಟನಾ ಸಭೆ ನಡೆಯುತ್ತಿದ್ದಾಗ ಡಾ|| ಜೈನ್ ಹೊರಬಂದಾಗ ಕೋಪೋದ್ರಿಕ್ತ ಪ್ರದರ್ಶನಕಾರರು ಅವರ ವಿರುದ್ಧ ಘೋಷಣೆ ಕೂಗಿ ಸ್ವಾಗತಿಸಿದರು. ಅವರು ಮಾತನಾಡಲಾರಂಭಿಸಿದಾಗ ಒಂದು ನೇರ ಪ್ರಶ್ನೆ ಬಂತು - 'ಔಷದಿ ನಿಯಂತ್ರಕರಿಂದ ಅವರು ಅನುಮತಿ ಪಡೆದಿದ್ದಾರೆಯೆ?' 'ಮಹಿಳೆಯರ ಹಿತದಿಂದಾಗಿ ಇದನ್ನು ಮಾಡುತ್ತಿದ್ದೇನೆ' ಎಂದಷ್ಟೇ ಆತ ಉತ್ತರಿಸಿದರು. ಈ ಇಂತಹ ಉತ್ತರ ಕೇಳಿದ ಕೂಡಲೇ ಪ್ರತಿಭಟನೆಕಾರರು ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಲಾರಂಭಿಸಿದರು. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಸಾಮಾಜಿಕ ಔಷಧಿ ಶಾಲೆಯ ಲೆಕ್ಚರರ್ ಡಾ|| ಮೋಹನ್ ರಾವ್ ಡಾ|| ಜೈನ್‌ರ ಮಾತನ್ನು ಬಲವಾಗಿ ಖಂಡಿಸಿದರು. ಈ ಔಷಧಿ ವಿಷಕಾರಿಯಾದುದು. ಇವುಗಳ ಪ್ರಯೋಗಶಾಲೆ ಪರೀಕ್ಷೆಗಳಿಂದ ಕಂಡುಬಂದಿದೆ ಎಂದ ಅವರು ಈ ಕಾರಣಕ್ಕಾಗಿ WHO ಈ ಬಗ್ಗೆ ಇನ್ನಷ್ಟು ಪರೀಕ್ಷೆಗಳ ನಂತರವೇ ಮಹಿಳೆಯರ ಮೇಲೆ ಅದನ್ನು ಪ್ರಯೋಗಿಸಬಹುದು ಎಂದಿತ್ತು ಎಂದರು. ಮೂರನೇ ಜಗತ್ತಿನ ಮಹಿಳೆಯರನ್ನು ಪ್ರಯೋಗ ಪಶುಗಳನ್ನಾಗಿ ಮಾಡಲಾಗುತ್ತಿದೆ, ಇದಕ್ಕೆ ಅವಕಾಶ ನೀಡಲು ಸಾಧ್ಯವಿಲ್ಲ ಎಂದು ಡಾ|| ರಾವ್ ಸಾರಿದರು.

ಮಹಿಳಾ ಸಂಘಟನೆಗಳು ಆರೋಗ್ಯ ಮಂತ್ರಿಯನ್ನು ಭೇಟಿ ಮಾಡಿ ಈ ಗುಳಿಗೆಯನ್ನು ಕೊಡುವವರ ವಿರುದ್ಧ ಕ್ರಿಮಿನಲ್ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲು ನಿರ್ಧರಿಸಿದೆ. ಜೈನ್ ರಂತಹ ನೀತಿಬಾಹಿರ ಡಾಕ್ಟರುಗಳು ಮಹಿಳೆಯರ ಆರೋಗ್ಯವನ್ನು ಅಪಾಯಕ್ಕೊಳಪಡಿಸುತ್ತಿರುವಾಗ ಸರಕಾರ ಮೂಕ ಪ್ರೇಕ್ಷಕನಾಗಿರುವುದು ಆಘಾತಕಾರಿ ಎಂದು ಈ ಸಂಘಟನೆಗಳು ಹೇಳಿವೆ.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ.
2234462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು